ಸಂಪುಟ: 06 ಸಂಚಿಕೆ: 15 ಪುಟಗಳು: 08 ಸೋಮವಾರ 30 ಮಾರ್ಚ್ 2026
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail. com
ಸಂಪಾದಕರು: ಟಿ. ಹೊಂಬೇಗೌಡ
RNI No. KARKAN/2021/80833
9448225696 +91 8035841833 ₹5

ಮುಂಜಾನೆ ಮಾತು

ನಗಬೇಕು ಅಳುವಿನ ಪರಿಚಯವೇ ಇಲ್ಲವೆಂಬಂತೆ. ಸೋಲು ಅಂದರೇನು ಎಂಬುದು ಗೊತ್ತಿಲ್ಲದಂತೆ ಆಡಬೇಕು!

ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

ಚುನಾವಣಾ ಪ್ರಚಾರದ ವೇಳೆ ಕೈ ಕೈ ಮಿಲಾಯಿಸಿದ ಕಾಂಗ್ರೆಸ್, ಬಿಜೆಪಿ ಕಾರ್ಯಕರ್ತರು

ನೂಕಾಟ ತಳ್ಳಾಟ

• ಉದಯವಾಹಿನಿ, ಬೆಂಗಳೂರು

ಚುನಾವಣಾ ಪ್ರಚಾರ ರ್ಯಾಲಿಯಲ್ಲಿ ಎದುರು ಬದರಾದ ಕಾಂಗ್ರೇಸ್ ಹಾಗೂ ಬಿಜೆಪಿ ಕಾರ್ಯಕರ್ತರು ಕೈ ಕೈ ಮಿಲಾಯಿಸಿದ ಘಟನೆ ಬಾಗಲಕೋಟೆಯ ಬೇವೂರು ಗ್ರಾಮದಲ್ಲಿ ನಡೆದಿದೆ. ಕಾಂಗ್ರೇಸ್ ಪರ ಸಚಿವ ಆರ್.ಬಿ.ತಿಮ್ಮಾಪೂರ್ ಹಾಗೂ ಬಿಜೆಪಿ ಪರ ಬಿ.ಶ್ರೀರಾಮುಲು ಪ್ರಚಾರ ನಡೆಸುತ್ತಿದ್ದರು.

ಆಗ ಎರಡೂ ಪಕ್ಷದ ಕಾರ್ಯಕರ್ತರು ಗ್ರಾಮದಲ್ಲಿ ಎದುರಾಗಿದ್ದಾರೆ. ಈ ವೇಳೆ ಕಾಂಗ್ರೇಸ್‌ಕಾರ್ಯಕರ್ತರು ಗೋ ಬ್ಯಾಕ್ ರಾಮುಲು ಎಂದು ಕೂಗಿದ್ದಾರೆ. ಇದರಿಂದ ಬಿಜೆಪಿ ಹಾಗೂ ಕಾಂಗ್ರೇಸ್ ಕಾರ್ಯಕರ್ತರ ಮಧ್ಯೆ ವಾಗ್ವಾದ ನಡೆದು, ನೂಕಾಟ ತಳ್ಳಾಟ ನಡೆದಿದೆ. ಅಲ್ಲದೇ ಕಾರ್ಯಕರ್ತರು ಕೈ ಕೈ ಮಿಲಾಯಿಸಿದ್ದಾರೆ. ಚುನಾವಣಾ ಕಾವು ದಿನೇ ದಿನೇ ಹೆಚ್ಚುತ್ತಿದ್ದು, ಕ್ಷೇತ್ರದ ವಿವಿಧ ಭಾಗಗಳಲ್ಲಿ ಕಾಂಗ್ರೆಸ್

ಹಾಗೂ ಬಿಜೆಪಿ ನಾಯಕರು ಬೀಡು ಬಿಟ್ಟಿದ್ದಾರೆ. **ಸ್ಟಾರ್ ಕ್ಯಾಂಪೇನರ್ ಸಿದ್ಧ :** ಕಾಂಗ್ರೆಸ್ ಪಕ್ಷದಲ್ಲಿ ಅಭ್ಯರ್ಥಿ ಆಯ್ಕೆ ತಡವಾಗಿತ್ತು. ಇದರಿಂದ ಅಭ್ಯರ್ಥಿಯ ಕರಪತ್ರ ಮುದ್ರಿಸಲು ಸಮಯ ಕೊರತೆ ಪಕ್ಷಕ್ಕೆ ಕಾಡಿತು. ಈ ಮಧ್ಯೆ ತರಾತುರಿಯಲ್ಲಿ ಸರಣಿ ಸಭೆಗಳನ್ನು ನಡೆಸಿದ ಮುಖಂಡರು ಪ್ರಚಾರದ ವೇಳಾಪಟ್ಟಿ ರೂಪಿಸಿದರು. ನಾಮಪತ್ರ ಸಲ್ಲಿಸುತ್ತಿದ್ದಂತೆ ಮುಖಂಡರು, ಅಭ್ಯರ್ಥಿ ಪ್ರಚಾರಕ್ಕೆ ಭರದಿಂದ ತೆರಳಿದ ಪ್ರಸಂಗ ನಡೆಯಿತು. ಇದೀಗ ಪಕ್ಷದ ಸ್ಟಾರ್ ಕ್ಯಾಂಪೇನರ್‌ಗಳನ್ನೆಲ್ಲ ಪ್ರಚಾರಕ್ಕೆ ಸಜ್ಜುಗೊಳಿಸಲಾಗಿದೆ. ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿಯೊಂದಿಗೆ ಸಚಿವರೂ ಕ್ಷೇತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ.

ನಾಯಕರ ಆಕರ್ಷಣೆ: ಬಿಜೆಪಿಯಲ್ಲೂ ಅಭ್ಯರ್ಥಿ ಘೋಷಣೆ ತಡವಾಗಿ ನಡೆದ ಕಾರಣ ಪ್ರಚಾರಕ್ಕೆ ಜಾಸ್ತಿ ಸಮಯ ಸಿಗಲಿಲ್ಲ. ಅಭ್ಯರ್ಥಿ ಘೋಷಣೆಯಾಗುತ್ತಿದ್ದಂತೆ ವೇಳಾಪಟ್ಟಿ ಸಿದ್ಧಗೊಂಡಿತು. ಆದರೆ ರಾಜ್ಯದ ನಾಯಕರ ಸಮಯಾವಕಾಶ ನೋಡಿಕೊಂಡು ಪ್ರಚಾರಕ್ಕೆ ಅವಕಾಶ ಕಲ್ಪಿಸಲಾಗಿದೆ. ರಾಜ್ಯದ ತಾರಾ ನಾಯಕರು ಒಂದು ವಾರ ಕ್ಷೇತ್ರದಲ್ಲಿ ಠಿಕಾಣಿ ಹೂಡಲಿದ್ದಾರೆ. ಪ್ರತಿ ಮತದಾರನ ಮನೆಗೂ ತಲುಪಬೇಕು ಎಂಬುದು ಪಕ್ಷದ ಉದ್ದೇಶ. ಈ ನಿಟ್ಟಿನಲ್ಲಿ ತಾರಾ ಪ್ರಚಾರಕರೊಂದಿಗೆ ನಾನಾ ಸಮುದಾಯಗಳ ಮುಖಂಡರು ಕೋಟಿಗೆ ಲಗ್ಗೆ ಇಡಲಿದ್ದಾರೆ.

ಕಾರ್ಯಕರ್ತರ ವಾಗ್ವಾದ

ಯುದ್ಧೋಪಾದಿ ತಯಾರಿ

ಚುನಾವಣೆಗೆ ಯುದ್ಧೋಪಾದಿಯಲ್ಲಿ ಪ್ರಚಾರ ನಡೆಸಲು ಎರಡೂ ಪಕ್ಷಗಳಲ್ಲಿ ಪೈಪೋಟಿಯಿದೆ. ಕಾಂಗ್ರೇಸ್ ಪಕ್ಷದ ನಾಯಕರು ಮತ ಕೇಳುವ ದಿನವೇ ಬಿಜೆಪಿಯಿಂದಲೂ ಮತಯಾಚನೆ ನಡೆಯಲಿದೆ. ಹೀಗಾಗಿ ಕಾರ್ಯಕರ್ತರು ಉತ್ಸಾಹದಿಂದ ಮತದಾರರ ಮನೆ ಬಾಗಿಲು ತಟ್ಟಲು ಸಜ್ಜಾಗಿದ್ದಾರೆ. ಕಾಂಗ್ರೇಸ್‌ನಲ್ಲಿ ಜಿಲ್ಲಾಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪೂರ ಬಾಗಲಕೋಟೆಯಲ್ಲಿದ್ದು ಸಂಘಟನೆ ಉಸ್ತುವಾರಿವಹಿಸಿದ್ದಾರೆ. ಉಸ್ತುವಾರಿ ಸಮಿತಿಯ ಸಂಚಾಲಕ, ವಿಧಾನಪರಿಷತ್ ಸದಸ್ಯ ವಸಂತಕುಮಾರ್ ಹಲವು ದಿನಗಳಿಂದ ಠಿಕಾಣಿ ಹೂಡಿದ್ದಾರೆ. ಶ್ರೀರಾಮುಲು ಉಸ್ತುವಾರಿವಹಿಸಿಕೊಂಡಿದ್ದಾರೆ. ಸಂಸದ ಗೋವಿಂದ ಕಾರಜೋಳ ಬಾಗಲಕೋಟೆಯಲ್ಲಿ ವಾಸ್ತವ್ಯ ಹೂಡಿದ್ದಾರೆ.

ಕಟ್ಟಿಗೆ ಬಳಸುವಂತೆ ಸಚಿವ ಮುನಿಯಪ್ಪ ಕರೆ

• ಉದಯವಾಹಿನಿ, ಬೆಂಗಳೂರು

ಗಲ್ಫ್ ಯುದ್ಧವೂ 30ನೇ ದಿನಕ್ಕೆ ಕಾಲಿಟ್ಟಿದೆ. ಇತ್ತ ಕರುನಾಡಲ್ಲಿ ಸಮರದ ಎಫೆಕ್ಟ್ ಬೀರಿದ್ದು, ಅಡುಗೆ ಅನಿಲ ಅಭಾವ ಮುಂದುವರಿದಿದೆ. ವಾಣಿಜ್ಯ ಸಿಲಿಂಡರ್ ಸಿಗದೇ ಹೋಟೆಲ್, ಕೈಗಾರಿಕೆಗಳು ಥಂಡಾ ಹೊಡೆದಿವೆ. ಜನರು ಖಾಲಿ ಗ್ಯಾಸ್ ಸಿಲಿಂಡರ್ ಹಿಡಿದು ಏಜೆನ್ಸಿಗಳತ್ತ ಧಾವಿಸುತ್ತಿದ್ದಾರೆ.

ಈ ಮಧ್ಯೆ ಆಹಾರ ಸಚಿವ ಕೆ.ಹೆಚ್.ಮುನಿಯಪ್ಪ, ಸಿಲಿಂಡರ್ ಅಭಾವ ಇರುವುದರಿಂದ ಸೌದೆ ಒಲೆ ಬಳಸುವಂತೆ ಕರೆ ನೀಡಿದ್ದಾರೆ. ಬೆಂಗಳೂರಿನಲ್ಲಿರುವ ಅವರ ಖಾಸಗಿ ನಿವಾಸದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಚಿವ ಕೆ.ಹೆಚ್ ಮುನಿಯಪ್ಪ, ಸಿಲಿಂಡರ್ ಅಭಾವ ಇರುವುದರಿಂದ ಹಳ್ಳಿ ಭಾಗದ ಜನರು ಸೌದೆ ಒಲೆಗಳನ್ನು ಬಳಸಿ. ಬೆಂಗಳೂರು ಬಿಟ್ಟು 40 ಕಿಲೋಮೀಟರ್ ಹೋದರೆ ಸೌದೆ ಸಿಗುತ್ತೆ. ಅರಣ್ಯ ಪ್ರದೇಶದ ಹಸಿ ಮರ ಬಿಟ್ಟು ಒಣ ಕಟ್ಟಿಗೆ ಬಳಸುವಂತೆ ಅವರು ಮನವಿ ಮಾಡಿದ್ದಾರೆ.

ಪರಪ್ಪನ ಅಗ್ರಹಾರ ಜೈಲಲ್ಲಿ ಅಧಿಕಾರಿ ವಿರುದ್ಧವೇ ಕೈದಿಗಳ ಗಂಭೀರ ಆರೋಪ

• ಉದಯವಾಹಿನಿ, ಬೆಂಗಳೂರು

ಬೆಂಗಳೂರಿನ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹ ಮತ್ತೊಮ್ಮೆ ಸುದ್ದಿಯಲ್ಲಿದೆ. ಜೈಲಿನ ಒಳಗಡೆ ಮೊಬೈಲ್, ಟಿವಿ ಹಾಗೂ ನೆಟ್‌ಫ್ಲಿಕ್ಸ್ ನಂತಹ ಐಷಾರಾಮಿ ಸೌಲಭ್ಯಗಳಿವೆ ಎಂದು ಬಿಂಬಿಸುವ ವಿಡಿಯೋವೊಂದು ಸಾಮಾಜಿಕ ಜಾಲತಾಣಗಳಲ್ಲಿ ಭಾರಿ ವೈರಲ್ ಆಗಿದ್ದು, ತೀವ್ರ ಚರ್ಚೆಗೆ ಗ್ರಾಸವಾಗಿದೆ.

ವೈರಲ್ ಆಗಿರುವ ವೀಡಿಯೋದಲ್ಲಿ ಜೈಲಿನಲ್ಲಿರುವ ಕೆಲ ವಿಚಾರಣಾಧೀನ ಕೈದಿಗಳು ವಿಡಿಯೋ ಚಿತ್ರೀಕರಿಸುತ್ತಿರುವುದು ಕಂಡು ಬಂದಿದ್ದು, ನಾಳೆ ಐಪಿಎಲ್ ಪಂದ್ಯವಿದೆ, ಈ ಸಲ ಕಪ್ ನಮ್ದೇ ಎಂದು ಹೇಳುವುದರ ಜೊತೆಗೆ, ಜೈಲಿನೊಳಗೆ ಮೊಬೈಲ್, ಟಿವಿ ಹಾಗೂ ನೆಟ್‌ಫ್ಲಿಕ್ಸ್ ಸೌಲಭ್ಯಗಳಿವೆ ಎಂದು ಹೇಳಿರುವುದೂ ಕಂಡು ಬಂದಿದೆ. ಅಲ್ಲದೇ ಈ ಮೊಬೈಲ್ ಫೋನ್‌ನ್ನು ಹಿರಿಯ ಐಪಿಎಸ್ ಅಧಿಕಾರಿಯೇ ತಂದುಕೊಟ್ಟಿದ್ದಾರೆ ಎಂದು ಆರೋಪಿಸಿದ್ದಾರೆ. ವಿಡಿಯೋ ವೈರಲ್ ಆಗುತ್ತಿದ್ದಂತೆ ಎಚ್ಚೆತ್ತ ಜೈಲಿನ ಅಧಿಕಾರಿಗಳು, ಆರೋಪಿಗಳನ್ನು ಇರಿಸಲಾಗಿದ್ದ ಬ್ಯಾರಕ್‌ನ್ನು ತೀವ್ರ ತಪಾಸಣೆಗೊಳಪಡಿಸಿದ್ದಾರೆ.

ಎ.9-29ರವರೆಗೆ ಫಲಿತಾಂಶ ಪ್ರಕಟಿಸದಂತೆ ಖಡಕ್ ಸೂಚನೆ

• ಉದಯವಾಹಿನಿ, ನವದೆಹಲಿ

ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆ ಹಿನ್ನೆಲೆ ಮತದಾನದ ಪ್ರಕ್ರಿಯೆ ಮುಗಿಯುವವರೆಗೆ ಎಕ್ಸಿಟ್ ಪೋಲ್ (ಚುನಾವಣೋತ್ತರ ಸಮೀಕ್ಷೆ) ನಡೆಸುವುದನ್ನು ಅಥವಾ ಅದರ ಫಲಿತಾಂಶಗಳ ಪ್ರಕಟಿಸುವುದನ್ನು ಭಾರತೀಯ ಚುನಾವಣಾ ಆಯೋಗವು ಕಟ್ಟುನಿಟ್ಟಾಗಿ ನಿಷೇಧಿಸಿದೆ.

ಏಪ್ರಿಲ್ 9ರ ಬೆಳಿಗ್ಗೆ 7:00 ಗಂಟೆಯಿಂದ ಏಪ್ರಿಲ್ 29ರ ಸಂಜೆ 6:30 ರವರೆಗೆ ಈ ನಿಷೇಧ ಜಾರಿಯಲ್ಲಿರುತ್ತದೆ ಎಂದು ರಾಜ್ಯ ಚುನಾವಣಾಧಿಕಾರಿ ಕಚೇರಿ ತಿಳಿಸಿದೆ.

ಕರ್ನಾಟಕ ಮುಖ್ಯ ಚುನಾವಣಾಧಿಕಾರಿ (ಈ ಆದೇಶವನ್ನು ಮಾರ್ಚ್ 27ರಂದು ಹೊರಡಿಸಿದ್ದು, ಶನಿವಾರ ಸಾರ್ವಜನಿಕವಾಗಿ ಪ್ರಕಟಿಸಲಾಗಿದೆ. ಈ ಸಂಬಂಧದ ಅಧಿಸೂಚನೆ ರಾಜ್ಯ ಬಜೆಟ್‌ನಲ್ಲಿ ಪ್ರಕಟಗೊಂಡಿದೆ. ಚುನಾವಣಾ ಆಯೋಗದ ಸೂಚನೆಯ ಪ್ರಕಾರ, ದೇಶದ ಆರು ರಾಜ್ಯಗಳ ಎಂಟು ವಿಧಾನಸಭಾ ಕ್ಷೇತ್ರಗಳಲ್ಲಿ ನಡೆಯುತ್ತಿರುವ ಉಪಚುನಾವಣೆಗಳಿಗೆ ಸಂಬಂಧಿಸಿದಂತೆ ಚುನಾವಣೋತ್ತರ ಸಮೀಕ್ಷೆಗಳಿಗೆ ತಾತ್ಕಾಲಿಕ ನಿಷೇಧ ಹೇರಲಾಗಿದೆ.

ಜನಪ್ರತಿನಿಧಿಗಳ ಕಾಯ್ದೆ 1951ರ ಸೆಕ್ಷನ್ 126ಂ ಪ್ರಕಾರ, ಚುನಾವಣಾ ಅವಧಿಯಲ್ಲಿ ಯಾವುದೇ ವ್ಯಕ್ತಿ ಚುನಾವಣೋತ್ತರ ಸಮೀಕ್ಷೆ ನಡೆಸುವುದು ಅಥವಾ ಅದರ ಫಲಿತಾಂಶವನ್ನು ಮುದ್ರಣ ಮಾಧ್ಯಮ, ಎಲೆಕ್ಟ್ರಾನಿಕ್ ಮಾಧ್ಯಮ ಅಥವಾ ಇತರೆ ಯಾವುದೇ ರೂಪದಲ್ಲಿ ಪ್ರಕಟಿಸುವುದು ಕಾನೂನುಬಾಹಿರವಾಗಿದೆ.

ಮನ್ ಕಿ ಬಾತ್‌ನಲ್ಲಿ ದೇಶದ ಜನರಿಗೆ ಮೋದಿ ಕರೆ

ಸವಾಲುಗಳನ್ನು ಎದುರಿಸಲು ಸಿದ್ಧರಾಗಿ

• ಉದಯವಾಹಿನಿ, ನವದೆಹಲಿ

ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಯುದ್ಧದಿಂದ ಉಲ್ಬಣಗೊಂಡಿರುವ ಸವಾಲುಗಳನ್ನು ಎದುರಿಸಲು ದೇಶದ ಎಲ್ಲಾ ನಾಗರಿಕರು ಒಗ್ಗಟ್ಟಾಗಬೇಕು ಮತ್ತು ಎಲ್ಲರೂ ಜಾಗರೂಕರಾಗಿರಬೇಕು. ಹಾಗೆಯೇ ಯಾವುದೇ ವದಂತಿಗಳಿಗೆ ಕಿವಿಗೊಡಬಾರದು ಎಂದು ಪ್ರಧಾನಿ ನರೇಂದ್ರ ಮೋದಿ ಭಾನುವಾರ ಮನವಿ ಮಾಡಿದರು.

ತಮ್ಮ ಮಾಸಿಕ ರೇಡಿಯೋ ಕಾರ್ಯಕ್ರಮ ಮನ್ ಕಿ ಬಾತ್‌ನಲ್ಲಿ ಮಾತನಾಡಿದ ಅವರು, ಪಶ್ಚಿಮ ಏಷ್ಯಾದಲ್ಲಿ ವಾಸಿಸುತ್ತಿರುವ ಮತ್ತು ಕೆಲಸ ಮಾಡುತ್ತಿರುವ ಒಂದು ಕೋಟಿಗೂ ಹೆಚ್ಚು ಭಾರತೀಯರಿಗೆ ಸಾಧ್ಯವಿರುವ ಎಲ್ಲಾ ಸಹಾಯವನ್ನು ಒದಗಿಸಿದ್ದಕ್ಕಾಗಿ ಗಲ್ಫ್ ರಾಷ್ಟ್ರಗಳಿಗೆ ಕೃತಜ್ಞತೆಗಳನ್ನು ಅರ್ಪಿಸಿದರು.

ನಮ್ಮ ನೆರೆಹೊರೆಯಲ್ಲಿ ಒಂದು ತಿಂಗಳಿಗೂ ಹೆಚ್ಚು ಕಾಲದಿಂದ ಘೋರ ಯುದ್ಧ ನಡೆಯುತ್ತಿದೆ. ಇದು ನಿಸ್ಸಂದೇಹವಾಗಿ ಸವಾಲಿನ ಸಮಯ. ಈ ಸವಾಲನ್ನು ಜಯಿಸಲು ನಾವು ಒಗ್ಗೂಡಬೇಕೆಂದು ನಾನು ಮತ್ತೊಮ್ಮೆ ಎಲ್ಲಾ 140 ಕೋಟಿ ನಾಗರಿಕರಿಗೆ ಇಂದಿನ 'ಮನ್ ಕಿ ಬಾತ್' ಮೂಲಕ ಒತ್ತಾಯಿಸುತ್ತೇನೆ ಎಂದು ಹೇಳಿದರು.

ಪಶ್ಚಿಮ ಏಷ್ಯಾ ಸಂಘರ್ಷ ಫೆಬ್ರವರಿ 28ರಂದು ಶುರುವಾಯಿತು. ಅಮೆರಿಕ ಮತ್ತು ಇಸ್ರೇಲ್ ಜಂಟಿಯಾಗಿ ಇರಾನ್ ಮೇಲೆ ದಾಳಿ ಮಾಡಿದರೆ, ಇರಾನ್ ತನ್ನ ನೆರೆಹೊರೆಯಲ್ಲಿರುವ ಅಮೆರಿಕ ಮಿತ್ರರಾಷ್ಟ್ರಗಳು ಮತ್ತು ಇಸ್ರೇಲ್ ರಾಜಧಾನಿ ಟೆಲ್ ಅವಿವ್ ಗುರಿಯಾಗಿಸಿಕೊಂಡು ಪ್ರತೀಕಾರದ ದಾಳಿ ನಡೆಸುತ್ತಿದೆ. ಇರಾನ್ ಹಾರ್ಮುಜ್ ಜಲಸಂಧಿಯನ್ನು ನಿಯಂತ್ರಿಸುತ್ತಿದ್ದು, ಇದು ವಿಶ್ವದ ಶೇ.20ರಷ್ಟು ಇಂಧನ ಸಾಗಿಸುವ ಪ್ರಮುಖ ಹಡಗು ಮಾರ್ಗವಾಗಿದೆ. ಸಂಘರ್ಷ ಪ್ರಾರಂಭವಾದಾಗಿನಿಂದ ಇರಾನ್ ಕೆಲವೇ ಹಡಗುಗಳಿಗೆ ಮಾತ್ರ ಈ ಮಾರ್ಗದಲ್ಲಿ ಸಾಗಲು ಅನುಮತಿ ನೀಡಿದೆ. ಪ್ರಧಾನಿ ಮೋದಿ, ಸೌದಿ ಅರೇಬಿಯಾ, ಯುಎಇ, ಕತಾರ್, ಬಹ್ರೇನ್, ಕುವೈತ್, ಜೋರ್ಡಾನ್, ಇರಾನ್, ಫ್ರಾನ್ಸ್, ಇಸ್ರೇಲ್ ಮತ್ತು ಮಲೇಷ್ಯಾ ಸೇರಿದಂತೆ ಹಲವಾರು ದೇಶಗಳ ನಾಯಕರೊಂದಿಗೆ ಮಾತನಾಡಿದ್ದಾರೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರೊಂದಿಗೂ ಸಹ ಮಾತುಕತೆ ನಡೆಸಿದ್ದಾರೆ.

ಮಾರ್ಚ್ 24 ರಂದು ಇಬ್ಬರ ನಡುವೆ ದೂರವಾಣಿ ಸಂಭಾಷಣೆಯ ನಂತರ, ಪಶ್ಚಿಮ ಏಷ್ಯಾದಲ್ಲಿನ ಪರಿಸ್ಥಿತಿಯ ಕುರಿತು ಉಪಯುಕ್ತ ಅಭಿಪ್ರಾಯ ಹಂಚಿಕೊಳ್ಳಲಾಯಿತು ಎಂದು ಹೇಳಿದರು.

ಮತ್ತೊಂದೆಡೆ, ಪಶ್ಚಿಮ ಏಷ್ಯಾ ಬಿಕ್ಕಟ್ಟು ಮತ್ತು ಇಂಧನ ಕೊರತೆಯಿಂದಾಗಿ ಭಾರತದಲ್ಲಿ ಲಾಕ್‌ಡೌನ್ ಹೇರುವ ವದಂತಿಗಳನ್ನು ಕೇಂದ್ರ ಸರ್ಕಾರ ಶುಕ್ರವಾರ ತಳ್ಳಿಹಾಕಿತ್ತು. ದೇಶದಲ್ಲಿ ಕನಿಷ್ಠ ಎರಡು ತಿಂಗಳಿಗೆಗೆ ಆಗುವಷ್ಟು ಕಚ್ಚಾ ತೈಲ, ಪೆಟ್ರೋಲ್ ಮತ್ತು ಡೀಸೆಲ್ ಲಭ್ಯವಿದ್ದು ವದಂತಿ ಸುದ್ದಿಗಳನ್ನು ನಂಬದಂತೆ ಸರ್ಕಾರ ಮನವಿ ಮಾಡಿತ್ತು. ದೇಶದಲ್ಲಿ ಲಾಕ್‌ಡೌನ್ ನಂತಹ ಯಾವುದೇ ಪರಿಸ್ಥಿತಿ ಇಲ್ಲ. ಈ ಬಗ್ಗೆ ಯಾವುದೇ ಚರ್ಚೆಯೂ ಇಲ್ಲ. ಲಾಕ್‌ಡೌನ್ ವದಂತಿಗಳು ಸಂಪೂರ್ಣವಾಗಿ ಸುಳ್ಳು ಎಂದು ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯದ ಜಂಟಿ ಕಾರ್ಯದರ್ಶಿ ಸುಜಾತಾ ಶರ್ಮಾ ಸ್ಪಷ್ಟಪಡಿಸಿದ್ದರು. ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವಯುದ್ಧದಿಂದ ಉಂಟಾಗುತ್ತಿರುವ ಸವಾಲುಗಳನ್ನು ಎದುರಿಸಲು ದೇಶದ ಎಲ್ಲಾ ನಾಗರಿಕರು ಒಗ್ಗೂಡಬೇಕು.

ರಾಜ್ಯ ಸರ್ಕಾರಗಳು ಜನತೆಗೆ ಏನೆಲ್ಲ ಸೂಚನೆ, ಮಾಹಿತಿಗಳನ್ನ ಕೊಟ್ಟಿವೆಯೋ ಅವುಗಳ ಮೇಲೆ ವಿಶ್ವಾಸವಿಟ್ಟು ಹೆಜ್ಜೆ ಇಡಬೇಕು ಎಂದು ಎಂದು ಪ್ರಧಾನಿ ನರೇಂದ್ರ ಮೋದಿ ಕರೆ ನೀಡಿದರು. ತಮ್ಮ ಮನದ ಮಾತು ಕಾರ್ಯಕ್ರಮದಲ್ಲಿ ದೇಶವನ್ನುದ್ದೇಶಿಸಿ ಮಾತನಾಡಿದ ಅವರು, ಮಧ್ಯಪ್ರಾಚ್ಯ ಬಿಕ್ಕಟ್ಟು ಹಾಗೂ ಹಾರ್ಮುಜ್ ಜಲಸಂಧಿಯಲ್ಲಿ ಉಂಟಾಗುತ್ತಿರುವ ಪರಿಣಾಮಗಳ ಕುರಿತು ವಿವರಿಸಿದರು. ಇದೇ ವೇಳೆ ಜನರು ವದಂತಿಗಳಿಗೆ ಕಿವಿಗೊಡದಂತೆ ಕರೆ ನೀಡಿದರು.

1 ಭಾರತದ ಸಾಂಸ್ಕೃತಿಕ ಪರಂಪರೆಯನ್ನು ರಕ್ಷಿಸುವ ಸಾಮೂಹಿಕ ಪ್ರಯತ್ನ

2 ನಮ್ಮ ನೆರೆಹೊರೆಯಲ್ಲಿ ಒಂದು ತಿಂಗಳಿಗೂ ಹೆಚ್ಚು ಕಾಲದಿಂದ ಘೋರ ಯುದ್ಧ

3 ಯುದ್ಧದಿಂದ ಉಲ್ಬಣಿಸಿದ ನಾಗರಿಕರು ಒಗ್ಗಟ್ಟಾಗಬೇಕು

ದೇಶಾದ್ಯಂತ ಹಸ್ತಪ್ರತಿ ಸಂಗ್ರಹ

ದೇಶಾದ್ಯಂತ ಹಸ್ತಪ್ರತಿಗಳನ್ನು ದಾಖಲಿಸುವ ಮತ್ತು ಸಂರಕ್ಷಿಸುವ ಗುರಿಯನ್ನು ಜ್ಞಾನ ಭಾರತಂ ಆಪ್ ಹೊಂದಿದೆ ಎಂದು ಪ್ರಧಾನಿ ಮೋದಿ ಹೇಳಿದ್ದಾರೆ. ಜ್ಞಾನ ಭಾರತಂ ಸಮೀಕ್ಷೆ ಭಾರತದ ಶ್ರೀಮಂತ ಹಸ್ತಪ್ರತಿ ಪರಂಪರೆಯ ಬಗ್ಗೆ ಮಾಹಿತಿ ಸಂಗ್ರಹಿಸಲು ಪ್ರಯತ್ನಿಸುತ್ತದೆ. ನಾಗರಿಕರು ತಾವು ಹೊಂದಿರುವ ಅಥವಾ ತಿಳಿದಿರುವ ಯಾವುದೇ ಹಸ್ತಪ್ರತಿಗಳ ಛಾಯಾಚಿತ್ರಗಳು ಅಥವಾ ವಿವರಗಳನ್ನು ಅಪ್ಲಿಕೇಶನ್ ಮೂಲಕ ಅಪ್‌ಲೋಡ್ ಮಾಡುವ ಮೂಲಕ ಸಹಕಾರ ನೀಡುವಂತೆ ಮನವಿ ಮಾಡಿದ್ದಾರೆ. ಪ್ರತಿಯೊಂದು ಸಲ್ಲಿಕೆಯನ್ನು ದಾಖಲಿಸುವ ಮೊದಲು ಸರಿಯಾದ ಪರಿಶೀಲನೆಗೆ ಒಳಗಾಗುತ್ತದೆ ಮತ್ತು ಸಾವಿರಾರು ಹಸ್ತಪ್ರತಿಗಳನ್ನು ಜನರು ಹಂಚಿಕೊಂಡಿದ್ದಾರೆ. ಭಾರತದ ಸಾಂಸ್ಕೃತಿಕ ಪರಂಪರೆಯನ್ನು ರಕ್ಷಿಸುವ ಸಾಮೂಹಿಕ ಪ್ರಯತ್ನವನ್ನು ಪ್ರತಿಬಿಂಬಿಸುತ್ತದೆ ಎಂದಿದ್ದಾರೆ.

ತೈಲ ಅಭಾವ ವದಂತಿಗೆ ಜನ ಕಿವಿಗೊಡಂತೆ ಮೋದಿ ಕರೆ

ರಾಜ್ಯ ಸರ್ಕಾರಗಳು ವಿಶ್ವಾಸದಿಂದ ಹೆಜ್ಜೆ ಇಡಬೇಕು

ಪೆಟ್ರೋಲ್ ಡೀಸೆಲ್ ಸಮಸ್ಯೆ ಬಗ್ಗೆ ಸ್ಪಷ್ಟನೆ!

ಇನ್ನೂ ಮುಂದುವರೆದು, ಯೂರೋಪ್ ರಾಷ್ಟ್ರಗಳು ನಮ್ಮ ಜೊತೆ ಉತ್ತಮ ಸಂಬಂಧ ಹೊಂದಿವೆ. ಅಲ್ಲಿ ಒಂದು ಕೋಟಿ ಭಾರತೀಯರು ಸುರಕ್ಷಿತವಾಗಿ ಇದ್ದಾರೆ. ನಮ್ಮ ಸರ್ಕಾರ ಅವರನ್ನು ಕಾಪಾಡುತ್ತಿದೆ. ಅದೇ ರೀತಿ ಭಾರತದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಸಮಸ್ಯೆ ಆಗದಂತೆ ನೋಡಿಕೊಳ್ಳುತ್ತಿದ್ದೇವೆಎಂದು ತಿಳಿಸಿದರು. ಪ್ರಧಾನಿ ಮೋದಿ ಜನರಲ್ಲಿ ಉಂಟಾಗಿರುವ ಆತಂಕವನ್ನು ನಿವಾರಿಸುವತ್ತ ಗಮನ ಹರಿಸಿದ್ದಾರೆ. 'ಯಾರೂ ಬ್ಯಾಂಕ್‌ಗಳಿಗೆ ಹೋಗಿ ಪೆಟ್ರೋಲ್ ಅಥವಾ ಡೀಸೆಲ್ ತುಂಬಿಸಿಕೊಳ್ಳುವ ಪರಿಸ್ಥಿತಿ ಇಲ್ಲ. ಕೋಟ್ಯಾಂತರ ಜನರಿಗೆ ಅವರಿಗೆ ಬೇಕಾದಷ್ಟು ಪೆಟ್ರೋಲ್ ಮತ್ತು ಡೀಸೆಲ್ ಅಗತ್ಯಕ್ಕೆ ತಕ್ಕಂತೆ ಕೊಡಲಾಗುವುದು. ಇದಕ್ಕೆ ಸರ್ಕಾರ ಸಂಪೂರ್ಣ ಸಿದ್ಧವಾಗಿದೆ' ಎಂದು ಅವರು ಭರವಸೆ ನೀಡಿದ್ದಾರೆ. ಈ ಹೇಳಿಕೆಯು ಜನರಲ್ಲಿ ಉಂಟಾಗಿರುವ ಆತಂಕವನ್ನು ಸ್ವಲ್ಪಮಟ್ಟಿಗೆ ಕಡಿಮೆ ಮಾಡುವಂತಿದೆ. ಇತ್ತೀಚೆಗೆ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳ ಬಗ್ಗೆ ಮತ್ತು ಅಭಾವದ ಬಗ್ಗೆ ವದಂತಿಗಳು ಹರಡುತ್ತಿದ್ದವು. ಆದರೆ ಪ್ರಧಾನಿ ಮೋದಿ ಅವರು ಸರ್ಕಾರ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ ಎಂದು ಖಚಿತಪಡಿಸಿದ್ದಾರೆ.

ಇಂಧನ ಸಾಗಣೆಗೆ ಅಡಚಣೆ

ಇರಾನ್ ಯುದ್ಧದಿಂದಾಗಿ ಹಾರ್ಮುಜ್ ಜಲಸಂಧಿಯಲ್ಲಿ

ಶ್ರೀರಾಮನೆಂದರೆ ಮಂಗಳಕರ

• ಉದಯವಾಹಿನಿ, ಕೆ.ಆರ್.ಪುರ

ಶ್ರೀರಾಮ ಧರ್ಮದ ಸಂಕೇತ, ಶ್ರೀರಾಮನೆಂದರೆ ಮಂಗಳಕರ ಎಂದು ಮಹದೇವಪುರ ಟಾಸ್ಕ್ ಫೋರ್ಸ್ ಆರೋಗ್ಯ ಮತ್ತು ವಿಪತ್ತು ನಿರ್ವಹಣಾ ಸಮಿತಿ, ಕ್ಷೇತ್ರ ನಗರ ಮಂಡಲ ಉಪಾಧ್ಯಕ್ಷ ಎಸ್. ಮಾರಪ್ಪ ತಿಳಿಸಿದರು. ಮಹದೇವಪುರ ಕ್ಷೇತ್ರದ ವೈಟ್‌ಫೀಲ್ಡ್ ಸಮೀಪದ ವಿಜಯನಗರ, ಅಂಬೇಡ್ಕರನಗರದಲ್ಲಿ ಏರ್ಪಡಿಸಿದ್ದ ಶ್ರೀರಾಮನವಮಿ ಪೂಜಾ ಕಾರ್ಯಕ್ರಮದಲ್ಲಿ ಭಾಗಿಯಾಗಿ ಮತನಾಡಿದ ಅವರು, ಧರ್ಮದ ಎರಕನೆಂದರೆ ಮಂಗಳಕರ ವಾದುದು ಎಲ್ಲರ ಒಳಿತನ್ನು ಕಾಪಾಡುವಂಥ ತತ್ತ್ವ. ಶ್ರೀರಾಮ ನಮ್ಮ ಸಂಸ್ಕೃತಿಯ ಲಕ್ಷಣವನ್ನು ರೂಪಿಸಿದ ಧರ್ಮದ ಎರಕ. ನಾವು ಧರ್ಮದ ಮಾರ್ಗದಲ್ಲಿ ಸಾಗಬೇಕು ಎಂಬ ಮಹಾ ತತ್ತ್ವ ಎಂದು ನುಡಿದರು. ಶ್ರೀರಾಮನು ಧರ್ಮದ ಮೂರ್ತರೂಪವಾಗಿದ್ದಾನೆ ಎನ್ನುತ್ತಾರೆ ವಾಲ್ಮೀಕಿ ಮಹರ್ಷಿ, ಮಂಗಳಕರವಾದುದು ಹೇಗಿರುತ್ತದೆ ಎಂದರೆ ಅದು ರಾಮನಂತೆ ಇರುತ್ತದೆ ಎಂದರು. ಇದೇವೇಳೆ ಭಕ್ತರಿಗೆ ಮಜ್ಜಿಗೆ ಮತ್ತು ಪಾನಕ ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಬಿಜೆಪಿ ಮುಖಂಡರು, ವಾರ್ಡ್ ಅಧ್ಯಕ್ಷರು, ಸ್ಥಳೀಯರು ಮತ್ತಿತರರು ಉಪಸ್ಥಿತರಿದ್ದರು.

ಉದಯವಾಹಿನಿ ಚಿತ್ರ

ಬೇಸಿಗೆ ಹಾಗೂ ವೇದಾಂತ ಶಿಬಿರ

• ಉದಯವಾಹಿನಿ, ಬೆಂಗಳೂರು

ಇದೇ ದಿನಾಂಕ 11.4.2026 ರಿಂದ 17.4.2026ರ ವರೆಗೆ ಬೆಂಗಳೂರು ದಕ್ಷಿಣ ತಾಲ್ಲೂಕು ಕೆಂಗೇರಿ ಹೋಬಳಿ ರಾಮೋಹಳ್ಳಿಯ ಶ್ರೀ ಸಿದ್ಧಾರೂಢ ಮಿಷನ್ ಆಶ್ರಮದಲ್ಲಿ 11ರಿಂದ 18 ವಯಸ್ಸಿನ ಮಕ್ಕಳಿಗೆ ಬೇಸಿಗೆ ಶಿಬಿರವನ್ನು ಏರ್ಪಡಿಸಿದೆ. ವೇದ ಯೋಗ ಪೂಜೆ ಸ್ತೋತ್ರ ಸಂಸ್ಕೃತ ಸಂಗೀತ ಸಂಸ್ಕಾರಗಳ ತರಬೇತಿ ನೀಡಲಾಗುವುದು. ಇದರ ಜೊತೆ ಜೊತೆಗೇ ಅಧ್ಯಾತ್ಮ ಸಾಧಕರಿಗೆ ವೇದಾಂತ ಶಿಬಿರವೂ ನಡೆಯಲಿದೆ. ಉಪನಿಷತ್ತು ನಿಜಗುಣ ಶಿವಯೋಗಿಗಳ ಕೃತಿ ವಿಚಾರ ಸಾಗರಗಳ ಅಧ್ಯಯನ ನಡೆಯಲಿದೆ. ಊಟ ವಸತಿ, ತರಬೇತಿ ಉಚಿತವಾಗಿದ್ದು ಯಾವುದೇ ಜಾತಿ ಮುಂತಾದ ನಿರ್ಬಂಧ ಇರುವುದಿಲ್ಲ. ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ : 8073218519, 9148542029.

ಉಪ ಚುನಾವಣೆ ಎಕ್ಸಿಟ್‌ಪೋಲ್ ನಿಷೇಧ

• ಉದಯವಾಹಿನಿ, ಬೆಂಗಳೂರು

ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆ ಹಿನ್ನೆಲೆ ಮತದಾನದ ಪ್ರಕ್ರಿಯೆ ಮುಗಿಯುವವರೆಗೆ ಎಕ್ಸಿಟ್ ಪೋಲ್ (ಚುನಾವಣೋತ್ತರ ಸಮೀಕ್ಷೆ) ನಡೆಸುವುದನ್ನು ಅಥವಾ ಅದರ ಫಲಿತಾಂಶಗಳ ಪ್ರಕಟಿಸುವುದನ್ನು ಭಾರತೀಯ ಚುನಾವಣಾ ಆಯೋಗವು ಕಟ್ಟುನಿಟ್ಟಾಗಿ ನಿಷೇಧಿಸಿದೆ. ಏಪ್ರಿಲ್ 9ರ ಬೆಳಿಗ್ಗೆ 7 ಗಂಟೆಯಿಂದ ಏಪ್ರಿಲ್ 29ರ ಸಂಜೆ 6.30ರವರೆಗೆ ಈ ನಿಷೇಧ ಜಾರಿಯಲ್ಲಿರುತ್ತದೆ ಎಂದು ರಾಜ್ಯ ಚುನಾವಣಾಧಿಕಾರಿ ಕಚೇರಿ ತಿಳಿಸಿದೆ. ಕರ್ನಾಟಕ ಮುಖ್ಯ ಚುನಾವಣಾಧಿಕಾರಿ ಈ ಆದೇಶವನ್ನು ಮಾರ್ಚ್ 27ರಂದು ಹೊರಡಿಸಿದ್ದು, ಸಾರ್ವಜನಿಕವಾಗಿ ಪ್ರಕಟಿಸಲಾಗಿದೆ. ಈ ಸಂಬಂಧದ ಅಧಿಸೂಚನೆ ರಾಜ್ಯ ಗಜೆಟ್‌ನಲ್ಲಿ ಪ್ರಕಟಗೊಂಡಿದೆ. ಚುನಾವಣಾ ಆಯೋಗದ ಸೂಚನೆಯ ಪ್ರಕಾರ, ದೇಶದ ಆರು ರಾಜ್ಯಗಳ ಎಂಟು ವಿಧಾನಸಭಾ ಕ್ಷೇತ್ರಗಳಲ್ಲಿ ನಡೆಯುತ್ತಿರುವ ಉಪಚುನಾವಣೆಗಳಿಗೆ ಸಂಬಂಧಿಸಿದಂತೆ ಚುನಾವಣೋತ್ತರ ಸಮೀಕ್ಷೆಗಳಿಗೆ ತಾತ್ಕಾಲಿಕ ನಿಷೇಧ ಹೇರಲಾಗಿದೆ. ಜನಪ್ರತಿನಿಧಿಗಳ ಕಾಯ್ದೆ 1951ರ ಸೆಕ್ಷನ್ 126ಎ ಪ್ರಕಾರ, ಚುನಾವಣಾ ಅವಧಿಯಲ್ಲಿ ಯಾವುದೇ ವ್ಯಕ್ತಿ ಚುನಾವಣೋತ್ತರ ಸಮೀಕ್ಷೆ ನಡೆಸುವುದು ಅಥವಾ ಅದರ ಫಲಿತಾಂಶವನ್ನು ಮುದ್ರಣ ಮಾಧ್ಯಮ, ಎಲೆಕ್ಟ್ರಾನಿಕ್‌ಮಾಧ್ಯಮ ಇತರೆ ಯಾವುದೇ ರೂಪದಲ್ಲಿ ಪ್ರಕಟಿಸುವುದು ಕಾನೂನುಬಾಹಿರವಾಗಿದೆ. ಈ ಆದೇಶದಂತೆ, ಏಪ್ರಿಲ್ 9 ಬೆಳಿಗ್ಗೆ 7 ಗಂಟೆಯಿಂದ ಏಪ್ರಿಲ್ 29 ಸಂಜೆ 6.30ರವರೆಗೆ ಯಾವುದೇ ರೀತಿಯ ಚುನಾವಣೋತ್ತರ ಸಮೀಕ್ಷೆಗಳನ್ನು ನಡೆಸುವುದು, ಪ್ರಕಟಿಸುವುದು ಅಥವಾ ಪ್ರಸಾರ ಮಾಡುವುದಕ್ಕೆ ಸಂಪೂರ್ಣ ನಿಷೇಧ ವಿಧಿಸಲಾಗಿದೆ.

ಅಡುಗೆ ಅನಿಲದ ಆತಂಕ ಬೇಡ

• ಉದಯವಾಹಿನಿ, ಬೆಂಗಳೂರು

ಅಡುಗೆ ಅನಿಲದ ಅಭಾವದ ಬಗ್ಗೆ ಜನರು ಆತಂಕಕ್ಕೆ ಒಳಗಾಗಬಾರದು ಎಂದು ಮನವಿ ಮಾಡಿರುವ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಕೆ.ಎಚ್.ಮುನಿಯಪ್ಪ ಹೋಟೆಲ್‌ಗಳಿಗೆ ಶೇ.20 ರಷ್ಟು ಅಡುಗೆ ಅನಿಲ ಪೂರೈಸಲಾಗುತ್ತಿದೆ ಎಂದಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಆಸ್ಪತ್ರೆಗಳಿಗೆ ಶೇ.100 ರಷ್ಟು ಅಡುಗೆ ಅನಿಲದ ಸಿಲಿಂಡರ್‌ಗಳನ್ನು ಪೂರೈಸಲಾಗುತ್ತಿದೆ. ಗೃಹಬಳಕೆಗೆ ನಗರ ಪ್ರದೇಶದಲ್ಲಿ 25 ದಿನಗಳಿಗೆ ಒಂದರಂತೆ ಸಿಲಿಂಡರ್ ನೀಡಲಾಗುವುದು. ಗ್ರಾಮೀಣ ಭಾಗದಲ್ಲಿ 45 ದಿನಗಳಿಗೊಂದು ಸಿಲಿಂಡರ್ ಸರಬರಾಜು ಮಾಡಲಾಗುವುದು ಎಂದು ಹೇಳಿದರು. ವಾಣಿಜ್ಯ ಬಳಕೆಯ ಅಡುಗೆ ಅನಿಲದ ಸಮಸ್ಯೆ ಇದ್ದು, ಅದನ್ನು ಪರಿಹರಿಸುವ ಪ್ರಯತ್ನ ಮಾಡುತ್ತಿದ್ದೇವೆ. ಈಗಾಗಲೇ ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ಸಭೆ ಮುಗಿಸಲಾಗಿದೆ. ಜೊತೆಗೆ ಕೇಂದ್ರ ಸಚಿವರೊಂದಿಗೂ ಸಭೆ ಮಾಡಿ ಪರಿಸ್ಥಿತಿ ನಿಭಾಯಿಸುವ ಬಗ್ಗೆ ಚರ್ಚೆಯಾಗಿದೆ ಎಂದರು. ಮಾ.31 ರಂದು ಮತ್ತೊಂದು ಸುತ್ತಿನ ಸಭೆ ನಡೆಯಲಿದ್ದು, ಅಂದು ವಾಣಿಜ್ಯ ಸಿಲಿಂಡರ್‌ಗಳ ಬಿಕ್ಕಟ್ಟಿನ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳಲಾಗುವುದು. ಬಂಕ್‌ಗಳಲ್ಲಿ ಪೆಟ್ರೋಲ್, ಡೀಸೆಲ್ ದರ ಹೆಚ್ಚಳ ಮಾಡಿರುವ ಬಗ್ಗೆಯೂ ಚರ್ಚೆ ನಡೆಸಲಾಗುವುದು ಎಂದು ಅವರು ತಿಳಿಸಿದರು.

ಸ್ವಚ್ಛತಾ ಕಾರ್ಯ

• ಉದಯವಾಹಿನಿ, ಕೆ.ಆರ್.ಪುರ

ಮಹದೇವಪುರ ಕ್ಷೇತ್ರದ ಕಣ್ಣೂರು ಪಂಚಾಯತಿ ವ್ಯಾಪ್ತಿಯ ಹೊಸೂರು ಬಂಡೆ ಗೋಶಾಲೆಯಲ್ಲಿ ಮಾಜಿ ಸಚಿವ ಅರವಿಂದ ಲಿಂಬಾವಳಿ ಅವರ ನೇತೃತ್ವದಲ್ಲಿ ಸ್ವಚ್ಛತಾ ಕಾರ್ಯ ನಡೆಸಲಾಯಿತು. ಸ್ವಚ್ಛತಾ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಮಾಜಿ ಸಚಿವ ಅರವಿಂದ ಲಿಂಬಾವಳಿ ಅವರು ಸೇವಾಕಾರ್ಯದ ಅಂಗವಾಗಿ ಸ್ವಚ್ಛತಾ ಅಭಿಯಾನ ನಡೆಸಲಾಗಿದೆ ಎಂದು ಹೇಳಿದರು.

ಇದೇ ಮಾರ್ಚ್ 17ರಂದು ಮಹದೇವಪುರ ವಿಧಾನಸಭಾ ಕ್ಷೇತ್ರದ ಕಣ್ಣೂರು ಪಂಚಾಯತ್ ವ್ಯಾಪ್ತಿಯ ಹೊಸೂರು ಬಂಡೆ ಗೋಶಾಲೆಯಲ್ಲಿ ಬೆಂಕಿ ಅವಘಡ ನಡೆದಿದ್ದು, ಅಪಾರ ಪ್ರಮಾಣದಲ್ಲಿ ನಷ್ಟ ಉಂಟಾಗಿದೆ. ಈ ಬಗ್ಗೆ ಈಗಾಗಲೇ ಕ್ರಮ ಕೈಗೊಳ್ಳಲು ಸಂಬಂಧಪಟ್ಟವರಿಗೆ ಸೂಚಿಸಲಾಗಿದೆ ಎಂದು ತಿಳಿಸಿದರು. ಗೋಶಾಲೆಯ ಮುಂದಿನ ಎಲ್ಲಾ ಅಭಿವೃದ್ಧಿ ಕಾರ್ಯಗಳಿಗೆ ಮತ್ತು ಗೋವುಗಳಿಗೆ ಬೇಕಾದ ಎಲ್ಲಾ ರೀತಿಯ ವ್ಯವಸ್ಥೆಗೆ ನನ್ನ ಸಂಪೂರ್ಣ ಸಹಕಾರ ನೀಡುವುದಾಗಿ ಭರವಸೆ ನೀಡಿದರು.

ನಮ್ಮ ಮೆಟ್ರೋ ಜತೆ ಬಾಗ್ಮನೆ ಒಪ್ಪಂದ

40 ಕೋಟಿ ರೂ. ವೆಚ್ಚದಲ್ಲಿ ನೀಲಿ ಮಾರ್ಗದಲ್ಲಿ ಮೆಟ್ರೋ ನಿಲ್ದಾಣ ನಿರ್ಮಾಣ

• ಉದಯವಾಹಿನಿ, ಬೆಂಗಳೂರು

ಬೆಂಗಳೂರು ಮೆಟ್ರೋ ರೈಲು ನಿಗಮವು ಹೊರವರ್ತುಲ ರಸ್ತೆ ನೀಲಿ ಮಾರ್ಗದ (2ಎ) ಡಿಆರ್‌ಡಿಒ ಸ್ಟೋರ್ಟ್ಸ್ ಕಾಂಪ್ಲೆಕ್ಸ್ ಮೆಟ್ರೋ ನಿಲ್ದಾಣ ನಿರ್ಮಾಣಕ್ಕಾಗಿ ಬಾಗ್ಮನೆ ಡೆವಲಪರ್ಸ್ ಪ್ರೈ.ಲಿ. ಜತೆ 40 ಕೋಟಿ ರೂಪಾಯಿಗಳಿಗೆ ಒಪ್ಪಂದ ಮಾಡಿಕೊಂಡಿದೆ. ಇದರನ್ವಯ 20 ವರ್ಷಗಳ ಅವಧಿಗೆ ನಿಲ್ದಾಣದ ಹೆಸರಿನ ಹಕ್ಕನ್ನು ಬಾಗ್ಮನೆ ಕಂಪನಿ ಪಡೆದುಕೊಂಡಿದೆ. ಈ ಮೆಟ್ರೋ ನಿಲ್ದಾಣ ನಿರ್ಮಾಣಕ್ಕಾಗಿ ಬಾಗ್ಮನೆ 40 ಕೋಟಿ ರೂ. ನೀಡುತ್ತಿದ್ದು, ಈ ಮೊತ್ತದಲ್ಲಿ 20 ಕೋಟಿ ರೂ.ಗಳನ್ನು ಈಗಾಗಲೇ ಕಂಪನಿಯು ನೀಡಿದೆ. ಬಾಗ್ಮನೆ ಡೆವಲಪರ್ಸ್ ಕಂಪನಿಯು ಮೆಟ್ರೋ ನಿಲ್ದಾಣದ ಒಳಾಂಗಣ ಹಾಗೂ ಕಟ್ಟಡದ ಮುನ್ನೋಟದ ವಿನ್ಯಾಸಕ್ಕೂ ಕೊಡುಗೆ ನೀಡಲಿದೆ. ಒಪ್ಪಂದವು ಕೇವಲ ಹೆಸರಿಡುವ ಹಕ್ಕಿಗೆ ಮಾತ್ರ ಸೀಮಿತವಾಗಿದ್ದು, ಜಾಹೀರಾತು ಹಕ್ಕು, ವಾಣಿಜ್ಯ ಸ್ಥಳ ಅಥವಾ ಸಂಪರ್ಕ ಸೌಲಭ್ಯಗಳಂತಹ ಹೆಚ್ಚುವರಿ ಹಕ್ಕನ್ನು ಒಳಗೊಂಡಿಲ್ಲ ಎಂದು ಬಿಎಂಆರ್‌ಸಿಎಲ್ ತಿಳಿಸಿದೆ.

ಬಿಎಂಆರ್‌ಸಿಎಲ್ ಕೈಗೊಂಡ 6ನೇ ಒಪ್ಪಂದ

ಸೆಂಟ್ರಲ್ ಸಿಲ್ಕ್ ಬೋರ್ಡ್‌ನಿಂದ ಕೆ.ಆರ್.ಪುರದವರೆಗೆ 19.75 ಕಿಮೀ ಉದ್ದದ ಹೊರವರ್ತುಲ ರಸ್ತೆ ಮಾರ್ಗವು ಡಿಆರ್‌ಡಿಒ ಸ್ಟೋರ್ಟ್ಸ್ ಕಾಂಪ್ಲೆಕ್ಸ್ ಸೇರಿ ಒಟ್ಟು 17 ನಿಲ್ದಾಣಗಳನ್ನು ಒಳಗೊಂಡಿದೆ. ಈ ಮಾರ್ಗದ ಸಂಬಂಧ ಬಿಎಂಆರ್‌ಸಿಎಲ್ ಕೈಗೊಂಡ 6ನೇ ಒಪ್ಪಂದ ಇದಾಗಿದೆ. ಇನ್ನೂ ಎರಡು ಒಪ್ಪಂದಗಳ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ಶೀಘ್ರದಲ್ಲೇ ಅಂತಿಮಗೊಳ್ಳಲಿವೆ ಎಂದು ಪ್ರಕಟಣೆ ತಿಳಿಸಿದೆ. ಈ ವೇಳೆ ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಡಾ.ಜೆ ರವಿಶಂಕರ್, ಬಾಗ್ಮನೆ ಡೆವಲಪರ್ಸ್ ಪ್ರೈವೆಟ್ ಲಿಮಿಟೆಡ್‌ನ ಅಧಿಕೃತ ಪ್ರತಿನಿಧಿ ಆದಿತ್ಯ ಬಾಗ್ಮನೆ ಪ್ರಮುಖರು ಉಪಸ್ಥಿತರಿದ್ದರು.

ಉದಯವಾಹಿನಿ ಚಿತ್ರ

ನೀಲಿ ಮಾರ್ಗದ ವಿಶೇಷತೆಗಳೇನು?: ಹೊರವರ್ತುಲ ರಸ್ತೆಯ (ಒಆರ್‌ಆರ್) ನೀಲಿ ಮೆಟ್ರೋದ ಕೆ.ಆರ್.ಪುರ–ಸೆಂಟ್ರಲ್ ಸಿಲ್ಕ್ ಬೋರ್ಡ್ ಜಂಕ್ಷನ್‌ವರೆಗಿನ (19.75 ಕಿ.ಮೀ.) ಮಾರ್ಗವು ಡಿಸೆಂಬರ್ ಗಡುವಿನಲ್ಲಿ ವಾಣಿಜ್ಯ ಸಂಚಾರಕ್ಕೆ ಮುಕ್ತಗೊಳ್ಳುವ ನಿರೀಕ್ಷೆ ಇದೆ. ಒಟ್ಟಾರೆ 58 ಕಿ.ಮೀ. ಉದ್ದದ ನೀಲಿ ಮಾರ್ಗ ಒಆರ್‌ಆರ್ ಹಾಗೂ ಏರ್‌ಪೋರ್ಟ್ ಮಾರ್ಗದ ಸಂಚಾರ ದಟ್ಟಣೆ ನಿವಾರಿಸುವ ಗುರಿ ಹೊಂದಿದೆ. ಬರುವ ಮೇ ತಿಂಗಳಲ್ಲಿ ಗುಲಾಬಿ ಮಾರ್ಗದ ಎಲಿವೇಟೆಡ್ ಕಾರಿಡಾರ್ ಉದ್ಘಾಟನೆ ಬಳಿಕ ಇದೇ ವರ್ಷ ನೀಲಿ ಮಾರ್ಗದ ಮೊದಲ ಹಂತವನ್ನು ಸಾರ್ವಜನಿಕ ಸಂಚಾರಕ್ಕೆ ಮುಕ್ತಗೊಳಿಸುವುದು ರಾಜ್ಯ ಸರಕಾರದ ಗುರಿ. ಅಲ್ಲದೆ, ನೀಲಿ ಮಾರ್ಗದ 2ನೇ ಹಂತದಲ್ಲಿ ಹೆಬ್ಬಾಳ– ಏರ್‌ಪೋರ್ಟ್ (27.44 ಕಿ.ಮೀ.) 2027ರ ಜೂನ್‌ಗೆ, ಕೆ.ಆರ್.ಪುರ– ಹೆಬ್ಬಾಳ (11 ಕಿ.ಮೀ.) 2027ರ ಡಿಸೆಂಬರ್‌ಗೆ ಮುಕ್ತಗೊಳಿಸಲು ಬೆಂಗಳೂರು ಮೆಟ್ರೊ ರೈಲು ನಿಗಮಕ್ಕೆ ಸರಕಾರ ಸೂಚಿಸಿದೆ. ನೀಲಿ ಮಾರ್ಗದ ಕಾಮಗಾರಿಯನ್ನು ಐದು ಪ್ಯಾಕೇಜ್‌ಗಳಲ್ಲಿ ನಡೆಸಲಾಗುತ್ತಿದೆ. ಅಫ್ಕಾನ್ಸ್ ಇನ್‌ಫ್ರಾಸ್ಟ್ರಕ್ಚರ್ ಕಂಪನಿ ಸೆಂಟ್ರಲ್ ಸಿಲ್ಕ್ ಬೋರ್ಡ್‌ನಿಂದ ಕಾಡುಬೀಸನಹಳ್ಳಿವರೆಗೆ, ಅಲ್ಲಿಂದ ಎಸ್‌ಎನ್‌ಸಿ ಕನ್ಸ್‌ಸ್ಟ್ರಕ್ಷನ್ಸ್ ಬೈಯಪ್ಪನಹಳ್ಳಿವರೆಗೆ, ಎನ್‌ಸಿಸಿ ಕಂಪನಿ ಬೆನ್ನಿಗಾನಹಳ್ಳಿ – ಏರ್‌ಪೋರ್ಟ್‌ವರೆಗೆ ಮೂರು ಪ್ಯಾಕೇಜ್‌ನಲ್ಲಿ ಕೆಲಸ ಮಾಡುತ್ತಿವೆ. ಒಆರ್‌ಆರ್–ಕೆ.ಆರ್.ಪುರ– ಸಿಲ್ಕ್ ಬೋರ್ಡ್‌ವರೆಗೆ ಸುಮಾರು 500 ಸಾಫ್ಟ್‌ವೇರ್ ಕಂಪನಿಗಳಿದ್ದು, ಬರೋಬ್ಬರಿ 9.5 ಲಕ್ಷದಷ್ಟು ಟೆಕ್ಕಿಗಳು ಇಲ್ಲಿ ಕೆಲಸ ಮಾಡುತ್ತಿದ್ದಾರೆ. ಹೀಗಾಗಿಯೇ ಟ್ರಾಫಿಕ್ ಸಮಸ್ಯೆ ನಿವಾರಿಸಲು ನೀಲಿ ಮಾರ್ಗದ ಮೆಟ್ರೊ ಟೆಕ್ಕಿಗಳಿಗೆ ಅತಿಮುಖ್ಯವಾಗಿದೆ.

ಎಷ್ಟಾಗಿದೆ ಕೆಲಸ ?

ಮೊದಲ ಹಂತದಲ್ಲಿ ಸಿವಿಲ್ ಕಾಮಗಾರಿ ಪೈಕಿ ಪಿಲ್ಲರ್, ಸ್ಟೇಷನ್ ನಿರ್ಮಾಣ ಕೆಲಸ ಮುಗಿಯುವ ಹಂತದಲ್ಲಿದ್ದರೂ ಕೆಲವೆಡೆ ಕಾಮಗಾರಿ ಸಮಸ್ಯೆ ಬಗೆಹರಿದಿಲ್ಲ. ಸೆಂಟ್ರಲ್ ಸಿಲ್ಕ್ ಬೋರ್ಡ್ ಬಳಿಯಿಂದ ರ್‌ಯಾಂಪ್ ನಿರ್ಮಾಣ ಆಗುವಲ್ಲಿ ಹಾಗೂ ನಿಲ್ದಾಣದವರೆಗೆ ಪಿಲ್ಲರ್‌ಗಳ ನಿರ್ಮಾಣ ಕೆಲಸ ನಡೆಯುತ್ತಿದೆ. ಎಚ್‌ಎಸ್‌ಆರ್ ಲೇಔಟ್ ಬಳಿಯಿಂದ ಎಂಟ್ರಿ, ಎಕ್ಸಿಟ್ ಸಿವಿಲ್ ಕಾಮಗಾರಿ, ಸಿಲ್ಕ್ ಬೋರ್ಡ್ ಮೆಟ್ರೊ ನಿಲ್ದಾಣದ ಕೆಲಸಗಳು ಬಾಕಿ ಇವೆ. ಆಗರ ಕೆರೆ ಮೆಟ್ರೊ ನಿಲ್ದಾಣದಿಂದ ಮುಂದುವರಿದು ಇಬ್ಬಲೂರು ಮೆಟ್ರೊ ಸ್ಟೇಷನ್ ಬಳಿ ಗರ್ಡರ್ ಅಳವಡಿಕೆ ಆಗಬೇಕಿದೆ ಎಂದು ಮೂಲಗಳು ತಿಳಿಸಿವೆ.

ವಿಳಂಬ ಯಾಕೆ?

ಎಚ್‌ಬಿಆರ್ ಲೇಔಟ್‌ನಲ್ಲಿ ಪಿಲ್ಲರ್ ಬಿದ್ದು ತಾಯಿ ಮಗು ಮೃತಪಟ್ಟ ಅನಾಹುತದ ಪರಿಣಾಮ ಕೆ.ಆರ್.ಪುರ– ಹೆಬ್ಬಾಳದವರೆಗೆ ಸುಮಾರು 11 ತಿಂಗಳು ಮೆಟ್ರೊ ಕೆಲಸ ನಿಂತಿತ್ತು. ಇದಕ್ಕೂ ಮುನ್ನ ಮರಗಳ ತೆರವು ಹಾಗೂ ಸ್ಥಳಾಂತರ, ರಸ್ತೆಯಲ್ಲಿ ಕಡಿಮೆ ಜಾಗದಲ್ಲಿ ಪಿಲ್ಲರ್ ನಿರ್ಮಿಸಲು ಮರುವಿನ್ಯಾಸ ಹಾಗೂ ಗೇಲ್ ಪೈಪ್‌ಲೈನ್‌ಗಳ ಸ್ಥಳಾಂತರ, ಹೊರಮಾವು ಮತ್ತು ಎಚ್‌ಬಿಆರ್ ಲೇಔಟ್ ನಡುವಿನ ವಿದ್ಯುತ್ ಓವರ್‌ಹೆಡ್ ಹೈಟೆನ್ಷನ್ ಲೇನನ್ನು ಭೂಗತವಾಗಿ ತೆಗೆದುಕೊಂಡು ಹೋಗಲು, ಯಲಹಂಕದಲ್ಲಿ ವಾಯುಸೇನೆಗೆ ಸೇರಿದ ಜಾಗದ ಸ್ವಾಧೀನ ಮತ್ತಿತರ ಅಡ್ಡಿಗಳು ಕಾಮಗಾರಿ ವಿಳಂಬಕ್ಕೆ ಕಾರಣವಾಗಿವೆ. ಈ ನಡುವೆ, ಮೂರು ಹಂತದಲ್ಲಿ ಗಡುವನ್ನು ಪರಿಷ್ಕರಿಸಲಾಯಿತು. ಕಳೆದ ಡಿಸೆಂಬರ್‌ನಲ್ಲಿ ಮಾರ್ಗದ ಪರಿಶೀಲನೆ ನಡೆಸಿದ್ದ ಡಿಸಿಎಂ ಡಿ.ಕೆ. ಶಿವಕುಮಾರ್, 5–6 ನಿಲ್ದಾಣಗಳಷ್ಟು ಅಂತರದ ಮಾರ್ಗದ ಕೆಲಸ ಮುಗಿದರೂ ರೈಲು ಸಂಚಾರಕ್ಕೆ ಅನುವು ಮಾಡಿಕೊಡುವುದಾಗಿ ಹೇಳಿದ್ದರು.

ರಾಜ್ಯದಲ್ಲಿ ಮುಂಗಾರು ಪೂರ್ವ ಮಳೆ ಚೇತರಿಕೆ, ವಾಡಿಕೆಗಿಂತ ಹೆಚ್ಚು ವರ್ಷಧಾರೆ

• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿ ಮುಂಗಾರು ಪೂರ್ವ ಮಳೆ ಚೇತರಿಕೆ ಕಂಡಿದ್ದು, ವಾಡಿಕೆಗಿಂತ ಹೆಚ್ಚಾಗಿದೆ. ಹವಾಮಾನ ಮುನ್ಸೂಚನೆ ಪ್ರಕಾರ ಇನ್ನೂ ಒಂದು ವಾರ ಬೇಸಿಗೆ ಮಳೆಯಾಗುವ ಸಾಧ್ಯತೆಗಳಿವೆ. ಕಳೆದ ಮೂರು ವಾರಗಳಿಂದಲೂ ರಾಜ್ಯದಲ್ಲಿ ಚದುರಿದಂತೆ ಅಲ್ಲಲ್ಲಿ ಮಳೆಯಾಗುತ್ತಿದೆ. ಕೆಲವೆಡೆ ಆಲಿಕಲ್ಲು, ಬಿರುಗಾಳಿ ಸಮೇತ ಮಳೆಯಾಗುತ್ತಿದ್ದರೆ ಮತ್ತೆ ಕೆಲವೆಡೆ ಮಿಂಚು, ಗುಡುಗಿನಿಂದ ಕೂಡಿದ ಮಳೆಯಾಗಿದೆ. ಆಲಿಕಲ್ಲು, ಬಿರುಗಾಳಿ ಸಹಿತ ಮಳೆಯಾಗಿರುವ ಕಡೆಗಳಲ್ಲಿ ಹಣ್ಣು, ತರಕಾರಿ ಹಾಗೂ ಕೃಷಿ ಬೆಳೆಗಳು ಹಾನಿಗೀಡಾಗಿ ರೈತರಿಗೆ ನಷ್ಟ ಉಂಟಾಗಿದೆ. ನಿನ್ನೆ ಮೈಸೂರು, ಮಂಡ್ಯ, ಚಿಕ್ಕಮಗಳೂರು, ಶಿವಮೊಗ್ಗ ಸೇರಿದಂತೆ ಹಲವೆಡೆ ಮಳೆಯಾಗಿದೆ. ಶಿವಮೊಗ್ಗದಲ್ಲಿ ಬಿರುಗಾಳಿ ಸಹಿತ ಮಳೆಯಾಗಿದ್ದರೆ, ಚಿಕ್ಕಮಗಳೂರಿನಲ್ಲಿ ಆಲಿಕಲ್ಲು, ಗುಡುಗು, ಮಿಂಚಿನಿಂದ ಕೂಡಿದ ಮಳೆಯಾಗಿದೆ. ಹವಾಮಾನ ಮುನ್ಸೂಚನೆ ಪ್ರಕಾರ ರಾಜ್ಯದ ಹಲವೆಡೆ ಭಾಗಶಃ ಮೋಡ ಕವಿದ ವಾತಾವರಣ ಕಂಡುಬರಲಿದ್ದು, ಸಂಜೆ ಹಾಗೂ ರಾತ್ರಿ ವೇಳೆ ಕೆಲವೆಡೆ ಚದುರಿದಂತೆ ಹಗುರದಿಂದ ಸಾಧಾರಣ ಮಳೆಯಾಗುವ ಸಾಧ್ಯತೆಗಳಿವೆ. ಒಂದೆರಡು ಕಡೆ ಬಿರುಗಾಳಿ, ಆಲಿಕಲ್ಲು ಸಹಿತ ಮಳೆಯಾಗುವ ಮುನ್ಸೂಚನೆಗಳಿವೆ. ಬೇಸಿಗೆ ಮಳೆಯಾಗಿರುವುದರಿಂದ ಮಿಂಚು, ಗುಡುಗು, ಆಲಿಕಲ್ಲು ಸಹಿತ ಮಳೆಯಾಗುವ ಸಾಧ್ಯತೆಗಳು ಇದ್ದು, ಭಾರೀ ಮಳೆ ಅಥವಾ ವ್ಯಾಪಕ ಪ್ರಮಾಣದ ಮಳೆಯಾಗುವ ಸಾಧ್ಯತೆಗಳು ಇಲ್ಲ.

ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದ ಮಾಹಿತಿ ಪ್ರಕಾರ ಜನವರಿಯಿಂದ ನಿನ್ನೆವರೆಗೆ ರಾಜ್ಯದಲ್ಲಿ ವಾಡಿಕೆ ಪ್ರಮಾಣದ ಮಳೆಯಾಗಿದೆ

ಶ್ರೀ ಚೆಲುವನಾರಾಯಣಸ್ವಾಮಿ ವೈರಮುಡಿ ಕಿರೀಟಧಾರಣೆ ಉತ್ಸವ ಕಣ್ತುಂಬಿಕೊಂಡ ಭಕ್ತಸಾಗರ

• ಉದಯವಾಹಿನಿ, ಮಂಡ್ಯ

ವಿಶ್ವವಿಖ್ಯಾತ ಶ್ರೀ ಚೆಲುವನಾರಾಯಣಸ್ವಾಮಿಯ ವೈರಮುಡಿ ಕಿರೀಟಧಾರಣೆ ಮಹೋತ್ಸವವು ಕಳೆದ ರಾತ್ರಿ ಮಳೆಯ ನಡುವೆಯೂ ಲಕ್ಷಾಂತರ ಭಕ್ತರ ಜಯಘೋಷದೊಂದಿಗೆ ವಿಜೃಂಭಣೆಯಿಂದ ನೆರವೇರಿತು. ಪರಾಭವನಾಮ ಸಂವತ್ಸರದ ಮೀನ-ಚೈತ್ರ ಮಾಸದ ಪುಷ್ಯ ನಕ್ಷತ್ರದ ಶುಭದಿನ ಕೂಡಿದ ಬ್ರಹೋತ್ಸವದ ನಾಲ್ಕನೇ ದಿನ ಮಹಾವಿಷ್ಣುವಿನ ಅನುಗ್ರಹಕ್ಕೆ ಪ್ರಮುಖ ದಿನದಂದು ಸಾಕ್ಷಾತ್ ಭಗವಂತನದೇ ಪ್ರತೀತಿಯಿರುವ ವೈರಮುಡಿ ಕಿರೀಟವನ್ನು ಶ್ರೀದೇವಿ-ಭೂದೇವಿಯರೊಂದಿಗೆ ಗರುಡಾರೂಢನಾದ ಚೆಲುವ ನಾರಾಯಣಸ್ವಾಮಿಗೆ ತೊಡಿಸಲಾಯಿತು.

ಇದಕ್ಕೂ ಮುನ್ನ ಗರುಡದೇವನ ಉತ್ಸವ ನಡೆದ ಚೆಲುವರಾಯಸ್ವಾಮಿ ಮಹಾಮಂಗಳಾರತಿ ಜಟ ಗೋವಿಂದನಾಮ ಸರಣೆ, ಘೋಷಣೆಯೊಂದಿಗೆ ವೈರಮುಡಿ ಉತ್ಸವಕ್ಕೆ ಚಾಲನೆ ದೊರೆಯಿತು. ವೈರಮುಡಿ ಧರಿಸಿ ಭವ್ಯ ತೋಮಾಲೆಗಳು ದಿವ್ಯಾಭರಣಗಳೊಂದಿಗೆ ಅಲಂಕೃತನಾದ ಚೆಲುವನಾರಾಯಣಸ್ವಾಮಿ ವೈರಮುಡಿ ಉತ್ಸವ ರಾಜಗೋಪುರದ ಬಳಿ ಬರುತ್ತಿದ್ದಂತೆ ಭಾರೀ ಹರ್ಷೋದ್ಗಾರ ಮುಗಿಲು ಮುಟ್ಟಿತ್ತು. ವೈರಮುಡಿ ಉತ್ಸವ ರಾಜಬೀದಿಗಳಲ್ಲಿ ತೆರಳುವ ವೇಳೆ ಕಿಕ್ಕಿರಿದು ತುಂಬಿದ್ದ ಲಕ್ಷಾಂತರ ಭಕ್ತರು ಸ್ವಾಮಿಯ ದರ್ಶನ ಪಡೆದು ಪುನೀತರಾದರು. ಇದಕ್ಕೂ ಮುನ್ನ ರಾತ್ರಿ ಯಾಗಶಾಲೆ ಮತ್ತು ಗರುಡದೇವನ ಮೆರವಣಿಗೆ ನಂತರ ಮಹಾಮಂಗಳಾರತಿ, ಪ್ರಾರ್ಥನೆ ಸಲ್ಲಿಸಲಾಯಿತು. ದೇವಾಲಯದ ಎಡಭಾಗದಲ್ಲಿ ನಿರ್ಮಿಸಿದ್ದ ಮಂಟಪದಲ್ಲಿ ಸ್ವಾಮಿಗೆ ಮತ್ತೊಮೆ ಮಂಗಳಾರತಿ ಮಾಡಲಾಯಿತು. ನಂತರ ಮೇಲುಕೋಟೆ ಚತುರ್ವೀದಿಗಳಲ್ಲಿ ವೈರಮುಡಿ ಉತ್ಸವ ಸಂಭ್ರಮದಿಂದ ನೆರವೇರಿತು.

ತಿರುವಾಭರಣ ಪೆಟ್ಟಿಗೆಗೆ ಪೂಜೆ : ಜಿಲ್ಲಾ ಖಜಾನೆಯಿಂದ ಬಿಗಿ ಪೊಲೀಸ್ ಭದ್ರತೆಯಲ್ಲಿ ತರಲಾದ ವೈರಮುಡಿ ಮತ್ತು ರಾಜಮುಡಿ ಕಿರೀಟಗಳನ್ನು ಪಾರ್ವತಿ ಮಂಟಪದ ಬಳಿಯ ಬಂಗಾರದ ಪಲ್ಲಕ್ಕಿಯಲ್ಲಿಟ್ಟು ಭವ್ಯ ಮೆರವಣಿಗೆಯಲ್ಲಿ ಸಂಜೆ 5ರ ವೇಳೆಗೆ ಶ್ರೀ ಚೆಲುವನಾರಾಯಣಸ್ವಾಮಿ ದೇವಸ್ಥಾನಕ್ಕೆ ತರಲಾಯಿತು. ಮೇಲುಕೋಟೆ ಯತಿರಾಜದಾಸರ್ ಗುರುಪೀಠದಲ್ಲಿ ಕೊನೆ ಸಾಂಪ್ರದಾಯಿಕ ಪೂಜೆ ನೆರವೇರಿದ ನಂತರ ವೈರಮುಡಿ- ರಾಜಮುಡಿ ತಿರುವಾಭರಣ ಪಟ್ಟಿಗೆಗಳಿದ್ದ ಬಂಗಾರದ ಪಲಕ್ಕಿ ದೇವಾಲಯ ಪ್ರವೇಶಿಸಿತು.

ರಾಜಮುಡಿ ಕಿರೀಟ ಹಸ್ತಾಂತರ : ಸಂಜೆ 5 ಗಂಟೆ ವೇಳೆಗೆ ಮೇಲುಕೋಟೆಗೆ ಬಂದ ವೈರಮುಡಿ ರಾಜಮುಡಿ ತಿರುವಾಭರಣ ಪೆಟ್ಟಿಗೆಗಳನ್ನು ಚಿನ್ನದ ಪಲ್ಲಕ್ಕಿಯಲ್ಲಿ ಭವ್ಯ ಮೆರವಣಿಗೆಯಲ್ಲಿ ತರಲಾಯಿತು. ರಾತ್ರಿ ಚೆಲುವನಾರಾಯಣಸ್ವಾಮಿ ಸನ್ನಿಧಿಯ ಮುಂಭಾಗ ನವರಂಗದ ಮಧ್ಯ ಭಾಗದಲ್ಲಿ ರಾಜಮುಡಿ ತಿರುವಾಭರಣ ಪಟ್ಟಿಗೆಯನ್ನು ತೆರೆದು ರಾಜಮುಡಿ ಕಿರೀಟ, ಗಂಡಭೇರುಂಡ ಪದಕ, ಪನ್ನಪಾದ ಶಂಖ, ಚಕ್ರ ಗದಾಂಗಿ ಸೇರಿದಂತೆ 16 ವಿಧದ ವಜ್ರಾಭರಣಗಳನ್ನು ಸಚಿವ ಚಲುವರಾಯಸ್ವಾಮಿ, ಶಾಸಕರಾದ ದರ್ಶನ್ ಪುಟ್ಟಣ್ಣಯ್ಯ, ರಮೇಶ ಬಂಡಿಸಿದ್ದೇಗೌಡ ಸೇರಿದಂತೆ ಜಿಲ್ಲಾಧಿಕಾರಿ ಡಾ. ಕುಮಾರ್ ಹಾಗೂ ಅಧಿಕಾರಿಗಳ ಸಮಕ್ಷಮ ಪರಿಶೀಲಿಸಿ ಸ್ಥಾನಿಕರು, ಅರ್ಚಕರು ಪರಿಚಾರಕರಿಗೆ ಹಸ್ತಾಂತರ ಮಾಡಿದರು. ವೈರಮುಡಿ ತಿರುವಾಭರಣ ಪೆಟ್ಟಿಗೆಯನ್ನು ನೇರವಾಗಿ ದೇವರ ಅಲಂಕಾರಕ್ಕೆ ನೀಡಲಾಯಿತು. ರಾಜಮುಡಿ ಕಿರೀಟ, ತಿರುವಾಭರಣಗಳು ಏ.2ರವರೆಗೆ ಬ್ರಹೋತ್ಸವದಲ್ಲಿ ಚೆಲುವನಾರಾಯಣಸ್ವಾಮಿಯನ್ನು ಅಲಂಕರಿಸಲಿವೆ.

ರಂಗಭೂಮಿಯಲ್ಲಿ ನಾಟಕದ ಪರಿಕಲ್ಪನೆ ಬದಲಾಗಬೇಕು: ರಂಗಕರ್ಮಿ ಎಕ್ಬಾಲ್ ಅಹಮದ್

ಉದಯವಾಹಿನಿ ಚಿತ್ರ

• ಉದಯವಾಹಿನಿ, ರಾಮನಗರ

ಕಲಾವಿದರು ಇರುವ ವಿಚಾರಗಳನ್ನೇ ಹೇಳಿ ಅಥವಾ ತೋರಿಸಿ ಆ ಮೂಲಕ ಪ್ರೇಕ್ಷಕರಲ್ಲಿ ನೋವು ಸಂಕಟಗಳನ್ನು ತುಂಬುವುದಕ್ಕಿಂತ ಕಾಲಕ್ಕೆ ತಕ್ಕಂತೆ ನಾಟಕದ ಪರಿಭಾಷೆ ಬದಲಾಗಬೇಕಿದೆ ಎಂದು ಹಿರಿಯ ರಂಗಕರ್ಮಿ ಎಕ್ಬಾಲ್ ಅಹಮದ್ ಅಭಿಪ್ರಾಯಪಟ್ಟರು. ಕೃಷ್ಣಾಪುರದೊಡ್ಡಿಯ ಕೆ. ಎಸ್. ಮುದ್ದಪ್ಪ ಸ್ಮಾರಕ ಟ್ರಸ್ಟ್ ಮುದ್ದು ಶ್ರೀ ದಿಬ್ಬದಲ್ಲಿ ನೂತನವಾಗಿ ನಿರ್ಮಿಸಿರುವ ರಂಗಮಂದಿರ ಉದ್ಘಾಟಿಸಿ ಮಾತನಾಡಿದ ಅವರು, ನಿರ್ದೇಶಕರುಗಳ ನಾಟಕಗಳು ಇಂದು ನಿರ್ಮಾಣವಾಗುತ್ತಿವೆ. ಆದರೆ ನಾಟಕಗಳು ಕಲಾವಿದರ ನಾಟಕಗಳಾಗಬೇಕಾಗಿದೆ. ಸಂಪೂರ್ಣವಾಗಿ ಕಲಾವಿದರನ್ನು ಈ ಪ್ರಕ್ರಿಯೆಯಲ್ಲಿ ತೊಡಗಿಸಿದಾಗ ಮಾತ್ರ ನಿಜವಾದ ನಾಟಕದ ಆಶಯಗಳು ಈಡೇರಿದಂತಾಗುತ್ತದೆ. ಆ ದಿಕ್ಕಿನಲ್ಲಿ ಇಂದಿನ ರಂಗಪ್ರಕ್ರಿಯೆಗಳು ತಮ್ಮ ದಿಕ್ಕನ್ನು ಬದಲಿಸಿಕೊಳ್ಳಬೇಕಾದ ಅವಶ್ಯಕತೆ ಇದೆ ಎಂದರು. ಇಪ್ಪೋ ಜನಪದಮಹಾ ವಿದ್ಯಾಲಯದ ನಿರ್ದೇಶಕ ಡಾ ಎಂ ಬೈರೇಗೌಡ ಮಾತನಾಡಿ, ಮಕ್ಕಳ ಮನೋಭಿತ್ತಿಯ ಮೇಲೆ ಚಿತ್ತಾರ ಮೂಡಿಸುವ ಕಾರ್ಯ ನಡೆದಿದೆ. ರಾಮನಗರ ಜಿಲ್ಲಾಕೇಂದ್ರದಲ್ಲಿ ಒಂದು ವ್ಯವಸ್ಥಿತ ರಂಗಮಂದಿರದ ಕೊರತೆಯಿದ್ದು ಅದನ್ನು ತುಂಬಿಸುವ ನಿಟ್ಟಿನಲ್ಲಿ ಇದೊಂದು ಐತಿಹಾಸಿಕ ಘಟನೆ ಎಂದರು. ಚನ್ನಪಟ್ಟಣ ಬಾಲಕಿಯರ ಸರ್ಕಾರಿ ಪದವೀಪೂರ್ವ ಕಾಲೇಜು ಪ್ರಾಂಶುಪಾಲಾರದ ಉಮಾ ಮಾತನಾಡಿ, ನಮ್ಮ ಸಂಸ್ಕೃತಿಯ ಬೇರುಗಳನ್ನು ಗಟ್ಟಿಗೊಳಿಸುವಲ್ಲಿ ಟ್ರಸ್ಟ್‌ನ ಕಾರ್ಯ ಮೆಚ್ಚುವಂತಹದು ಎಂದರು. ಜಾನಪದ ಕತೆ ಆಧಾರಿತ ಡಾ ಎಂ ಬೈರೇಗೌಡ ವೀರಚಿತ ನಾಟಕ ಬುಡಬೆಳ್ಳಿ ನಡುಪಚ್ಚೆಗೊನೆ ಮುತ್ತು ನಾಟಕ ಪ್ರದರ್ಶನವಾಯಿತು. ನಿರ್ದೇಶಕ ಎಂ. ಸಿ. ನಾಗರಾಜು, ಇಪ್ಪೋ ಜಾನಪದ ಮಹಾವಿದ್ಯಾಲಯದ ಶೈಕ್ಷಣಿಕ ನಿರ್ದೇಶಕ ಪ್ರೊ ವ.ನಂ.ಶಿವರಾಮು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಿಲ್ಲೆಯ ಸಹಾಯಕ ನಿರ್ದೇಶಕ ಕೆ.ಸತೀಶ್, ನಾಟಕ ಅಕಾಡೆಮಿ ಸದಸ್ಯ ಕುಂಭಾಪುರ ಬಾಬು ವೇದಿಕೆಯಲ್ಲಿದ್ದರು. ಇದೇ ಸಂದರ್ಭದಲ್ಲಿ ರಂಗಮಂದಿರಕ್ಕೆ ಅಗತ್ಯವಾದ ಸ್ಕ್ರೀನ್ ಹೊಲಿದು ಅಳವಡಿಸಿದ ಟೈಲರ್ ರವಿ, ರೇಣುಕಾ ಹೋಟೆಲ್ ಮಾಲೀಕರಾದ ರೇಣುಕಮ್ಮ, ಪಾಪಣ್ಣ ಮಿಲಿಟರಿ ಹೋಟೆಲಿನ ಪಾಪಣ್ಣ ಅವರನ್ನು ಸನ್ಮಾನಿಸಲಾಯಿತು.

ಮೈಸೂರಿನ ಕಾರಂಜಿ ಕೆರೆಯಲ್ಲಿ ಶೀಘ್ರವೇ ದ.ಭಾರತದ ಮೊದಲ ಪೆಂಗ್ವಿನ್ ಪಾರ್ಕ್ ನಿರ್ಮಾಣ

ತಜ್ಞರ ತಂಡಕ್ಕಾಗಿ ಅರಣ್ಯ ಇಲಾಖೆ ಹುಡುಕಾಟ

• ಉದಯವಾಹಿನಿ, ಮೈಸೂರು



- ಮೈಸೂರಿನ ಕಾರಂಜಿ ಕರೆಯಲ್ಲಿ ಪೆಂಗ್ವಿನ್ ಪಾರ್ಕ್ ನಿರ್ಮಾಣಕ್ಕೆ ಸಿದ್ದತೆ
- ದಕ್ಷಿಣ ಭಾರತದಲ್ಲೇ ಮೊದಲ ಪೆಂಗ್ವಿನ್ ಪಾರ್ಕ್ ಎಂಬ ಹೆಗ್ಗಳಿಕೆ
- ಮುಂಬಯಿ ಹಾಗೂ ಅಲಹಾಬಾದ್ ಬಳಿಕ ಮೈಸೂರಿನಲ್ಲಿ ದೇಶದ ಮೂರನೇ ಪೆಂಗ್ವಿನ್ ಪಾರ್ಕ್ ನಿರ್ಮಾಣ, ತಜ್ಞರ ತಂಡಕ್ಕಾಗಿ ಹುಡುಕಾಟ

ಮೈಸೂರಿನ ಕಾರಂಜಿ ಕೆರೆಯಲ್ಲಿ ರಾಜ್ಯದ ಮೊದಲ 'ಪೆಂಗ್ವಿನ್ ಪಾರ್ಕ್' ನಿರ್ಮಿಸಲು ಸಮಗ್ರ ಯೋಜನಾ ವರದಿ (ಡಿಪಿಆರ್) ತಯಾರಿಸುವ ಪ್ರಕ್ರಿಯೆಗೆ ಚಾಲನೆ ದೊರೆತಿದ್ದು, ರಾಜ್ಯ ಸರಕಾರ ನುರಿತ ತಜ್ಞರ ಹುಡುಕಾಟದಲ್ಲಿದೆ.

ನಗರದಿಂದ 4 ಕಿ.ಮೀ. ದೂರದಲ್ಲಿರುವ ಕಾರಂಜಿ ಕೆರೆ ವಾಯು ವಿಹಾರಿಗಳು ಹಾಗೂ ಬೋಟಿಂಗ್ ಪ್ರಿಯರ ನೆಚ್ಚಿನ ತಾಣವಾಗಿದೆ. ಮೈಸೂರಿನ ಚಾಮರಾಜೇಂದ್ರ ಮೃಗಾಲಯ ಹಾಗೂ ಕಾರಂಜಿ ಕೆರೆಗೆ ಹೋಗಲು ನೇರ ಸಂಪರ್ಕ ವ್ಯವಸ್ಥೆಯಿದೆ. ಹೀಗಾಗಿ ವಿಶ್ವದರ್ಜೆಯ ಪೆಂಗ್ವಿನ್ ಪಾರ್ಕ್ ನಿರ್ಮಾಣದಿಂದ ಮೈಸೂರು ಮೃಗಾಲಯಕ್ಕೆ ಬರುವ ಪ್ರವಾಸಿಗರ ಸಂಖ್ಯೆ ಮತ್ತಷ್ಟು ಜಾಸ್ತಿಯಾಗಲಿದೆ. ಮೃಗಾಲಯಕ್ಕೆ ಉತ್ತಮ ಆದಾಯ ಬರುತ್ತದೆ ಎಂಬ ಆಶಾಭಾವನೆಯೊಂದಿಗೆ ಕಾರಂಜಿ ಕೆರೆಯಲ್ಲಿ ರಾಜ್ಯದ ಮೊದಲ 'ಪೆಂಗ್ವಿನ್ ಪಾರ್ಕ್' ನಿರ್ಮಿಸಲು ರಾಜ್ಯ ಸರಕಾರ 8 ತಿಂಗಳ ಹಿಂದೆ ಘೋಷಣೆ ಮಾಡಿತ್ತು.

ಪೆಂಗ್ವಿನ್ ಪಾರ್ಕ್ ರಾಜ್ಯದ ಯಾವ ಭಾಗಗಳಲ್ಲೂ ಇಲ್ಲ. ಹಾಗೆ ನೋಡಿದರೆ ಭಾರತದಲ್ಲಿ ಮುಂಬಯಿ, ಅಲಹಾಬಾದ್‌ನಲ್ಲಿ ಬಿಟ್ಟರೆ ಮತ್ತೆಲ್ಲೂ ಪೆಂಗ್ವಿನ್ ಕಾಣಸಿಗುವುದಿಲ್ಲ. ದಕ್ಷಿಣ ಭಾರತದಲ್ಲೂ ಪೆಂಗ್ವಿನ್ ಪಾರ್ಕ್ ಇಲ್ಲ. ಹೀಗಾಗಿ ಕರ್ನಾಟಕದಲ್ಲಿ ಮೊದಲ ಬಾರಿ 'ಪೆಂಗ್ವಿನ್ ಪಾರ್ಕ್' ನಿರ್ಮಿಸಲು ಅರಣ್ಯ ಇಲಾಖೆ ಮುಂದಾಗಿದೆ.

ತಜ್ಞರಿಗಾಗಿ ಹುಡುಕಾಟ: ''ಪೆಂಗ್ವಿನ್ ಪಾರ್ಕ್ ನಿರ್ಮಾಣಕ್ಕೆ ತಾಂತ್ರಿಕವಾಗಿ ಪರಿಣತಿ ಸಾಧಿಸಿರುವವರು ಬೇಕು. ಎಲ್ಲರಿಗೂ ಅದರ ಬಗ್ಗೆ ಮಾಹಿತಿ ಇರುವುದಿಲ್ಲ. ಮುಂಬಯಿಯಲ್ಲಿ ಇದರ ಬಗ್ಗೆ ಹೆಚ್ಚು ತಿಳಿದುಕೊಂಡಿರುವ ಹಾಗೂ ಅಧ್ಯಯನ ನಡೆಸಿರುವವರು ಇದ್ದಾರೆ. ಅಲ್ಲದೆ, ಪೆಂಗ್ವಿನ್‌ಗೆ ಬೇಕಾಗುವ ವಾತಾವರಣದಿಂದ ಹಿಡಿದು ಅವುಗಳ ವಾಸ ಸ್ಥಳ ಹೇಗಿರಬೇಕು? ಯಾವೆಲ್ಲಾ ಉಪಕರಣಗಳು ಬೇಕು ಎಂಬಿತ್ಯಾದಿ ಮಾಹಿತಿ ನೀಡಲು ನುರಿತ ತಜ್ಞರೇ ಬೇಕು. ಹೀಗಾಗಿ ತಜ್ಞರು ಸಿಕ್ಕ ಬಳಿಕ ಡಿಪಿಆರ್ ಸಿದ್ದಗೊಳ್ಳಲಿದೆ, ಎಂದು ಮೈಸೂರು ಚಾಮರಾಜೇಂದ್ರ ಮೃಗಾಲಯದ ಕಾರ್ಯನಿರ್ವಾಹಕ ನಿರ್ದೇಶಕಿ ಪಿ.ಅನುಷಾ ತಿಳಿಸಿದ್ದಾರೆ.

ಮುಂಬಯಿ ಝೂನಲ್ಲಿ ಪೆಂಗ್ವಿನ್: ಮಹಾರಾಷ್ಟ್ರದ ಮುಂಬೈ ಅಲ್ಲಿರುವ ವೀರಮಾತ ಜೀಜಾಬಾಯಿ ಬೋಸಲೆ ಉದ್ಯಾನ ಹಾಗೂ ಮೃಗಾಲಯದಲ್ಲಿ ಪೆಂಗ್ವಿನ್ ಪಾರ್ಕ್ ಇದೆ. ಇಲ್ಲಿ ಹಂಬೋಲ್ಟ್ ಪ್ರಭೇಧದ ಪೆಂಗ್ವಿನ್‌ಗಳು ಪ್ರವಾಸಿಗರ ಪ್ರಮುಖ ಆಕರ್ಷಣೆಯಾಗಿವೆ ಗುಜರಾತ್‌ನ ಅಲಹಬಾದ್‌ನ ಸೈನ್ಸ್ ಸಿಟಿಯಲ್ಲಿ ಪೆಂಗ್ವಿನ್‌ಗಳ ಆಟೋಟಗಳನ್ನು ಕಣ್ತುಂಬಿಕೊಳ್ಳಬಹುದು. 2021ರಲ್ಲಿ ಆಫ್ರಿಕಾದ ದಕ್ಷಿಣ ತುದಿಯಿಂದ ತಂದ ಐದು ಪೆಂಗ್ವಿನ್‌ಗಳನ್ನು ಇಲ್ಲಿ ಬಿಡಲಾಗಿದೆ. ಸಾಮಾನ್ಯವಾಗಿ ಎಲ್ಲಾ ಪೆಂಗ್ವಿನ್‌ಗಳು ದಕ್ಷಿಣ ಗೋಳಾರ್ಧದಲ್ಲಿ ವಾಸಿಸುತ್ತವೆ. ಅಂಟಾರ್ಕ್ಟಿಕಾ, ದಕ್ಷಿಣ ಆಫ್ರಿಕಾ, ದಕ್ಷಿಣ ಅಮೆರಿಕ, ಆಸ್ಟ್ರೇಲಿಯಾ ಮತ್ತು ನ್ಯೂಜಿಲೆಂಡ್‌ನ ಕೆಲವು ಭಾಗಗಳು ಮತ್ತು ಹಲವು ವಿಭಿನ್ನ ದ್ವೀಪಗಳಲ್ಲಿ ಇವುಗಳನ್ನು ಕಾಣಬಹುದು.

ಯಾವ ವಾತಾವರಣ ಬೇಕು?: ಪೆಂಗ್ವಿನ್‌ಗಳು ಶೀತ ವಾತಾವರಣ ಹಾಗೂ ತಂಪಾದ ಪ್ರದೇಶಗಳಲ್ಲಿ ವಾಸಿಸುತ್ತವೆ. ಆದರೆ, ಅಂಟಾರ್ಕ್ಟಿಕ್ ಪ್ರದೇಶದಿಂದ ಹುಟ್ಟಿದ ಪೆಂಗ್ವಿನ್ ಪ್ರಭೇದಗಳಿಗೆ ಮಾತ್ರ ಇದು ಅನ್ವಯಿಸುತ್ತದೆ. ಆಫ್ರಿಕನ್ ಪೆಂಗ್ವಿನ್‌ಗಳು ಸಮಶೀತೋಷ್ಣ ಹವಾಮಾನದಲ್ಲೂ ವಾಸಿಸುತ್ತವೆ. ಆದರೆ, ಆಕ್ವೇರಿಯಂನಲ್ಲಿ ವಾಸಸ್ಥಾನ ನಿರ್ಮಿಸಬೇಕಾದರೆ ತಾಪಮಾನದ ಬಗ್ಗೆ ಎಚ್ಚರ ವಹಿಸಬೇಕಿದೆ. ಜತೆಗೆ ಅರಣ್ಯ ಇಲಾಖೆಯು ಹಲವು ಸೌಲಭ್ಯಗಳನ್ನು ಕಲ್ಪಿಸಬೇಕಿದೆ. ಕೃತಕ ತಂಪಾದ ವಾತಾವರಣ ನಿರ್ಮಾಣವಾಗಬೇಕಾದರೆ ಫ್ರೀಜರ್‌ಗಳು ಮತ್ತು ಹವಾನಿಯಂತ್ರಣಗಳು ಬೇಕು. ಇದನ್ನು ನಿರ್ವಹಿಸಲು ದಿನದ 24 ಗಂಟೆಯೂ ಸಿಬ್ಬಂದಿ ವ್ಯವಸ್ಥೆ ಆಗಬೇಕು.

ಭಾರತದಲ್ಲೇ ಮೊದಲನೆಯದ್ದು

ಮೈಸೂರಿನ ಕಾರಂಜಿ ಕರೆಯಲ್ಲಿ ದಕ್ಷಿಣ ಭಾರತದಲ್ಲೇ ಮೊದಲ ಪೆಂಗ್ವಿನ್ ಪಾರ್ಕ್ ನಿರ್ಮಾಣಕ್ಕೆ ಸಿದ್ದತೆ ನಡೆಸುತ್ತಿದ್ದು, ಈಗಾಗಲೇ ಡಿಪಿಆರ್ ತಯಾರಿಸುವ ಕಾರ್ಯಕ್ಕೆ ಚಾಲನೆ ದೊರೆತಿದೆ. ಇನ್ನು, ಈ ಪೆಂಗ್ವಿನ್ ಪಾರ್ಕ್ ಕರ್ನಾಟಕದಲ್ಲಿ ಹಾಗೂ ದಕ್ಷಿಣ ಭಾರತದಲ್ಲೇ ಮೊದಲನೆಯದಾಗಿರಲಿದ್ದು, ದೇಶದಲ್ಲಿ ಮುಂಬಯಿ ಹಾಗೂ ಅಲಹಾಬಾದ್ ಬಳಿಕ ಮೂರನೆಯದಾಗಿರಲಿದೆ. ಇನ್ನು, ಇದರ ನಿರ್ಮಾಣಕ್ಕೆ ಪರಿಣತಿ ಹೊಂದಿರುವ ತಜ್ಞರ ಹುಡಕಾಟದಲ್ಲಿ ಅರಣ್ಯ ಇಲಾಖೆಯಿದೆ.

ನನ್ನ ಓಟು ಮಾರಾಟಕ್ಕಿಲ್ಲ: ಮನೆ ಮುಂದೆ ಫಲಕ ಹಾಕಿದ ಮಹಿಳೆ

• ಉದಯವಾಹಿನಿ, ಶ್ರೀರಂಗಪಟ್ಟಣ

ತಾಲ್ಲೂಕಿನ ಪಾಲಹಳ್ಳಿ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ಸದಸ್ಯೆಯೊಬ್ಬರು ತಮ್ಮ ಮನೆಯ ಮುಂದೆ 'ನನ್ನ ಓಟು ಮಾರಾಟಕ್ಕಿಲ್ಲ' ಎಂಬ ಫಲಕ ಹಾಕಿರುವುದು ಗಮನ ಸೆಳೆಯುತ್ತಿದೆ. ಪಾಲಹಳ್ಳಿ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ 11 ನಿರ್ದೇಶಕರ ಸ್ಥಾನಗಳ ಆಯ್ಕೆಗೆ ಭಾನುವಾರ ಚುನಾವಣೆ ನಡೆಯುತ್ತಿದೆ. ಸಂಘದ ಆಡಳಿತ ಮಂಡಳಿಯ ಚುನಾವಣೆ ಈ ಬಾರಿ ಬಿರುಸಾಗಿ ನಡೆಯುತ್ತಿದ್ದು, ಕಣದಲ್ಲಿರುವ ಸ್ಪರ್ಧಿಗಳು ಮತದಾರರಿಗೆ ಆಮಿಷ ಒಡ್ಡುತ್ತಿದ್ದಾರೆ ಎಂಬ ಮಾತುಗಳು ಕೇಳಿ ಬರುತ್ತಿವೆ.

ರುದ್ರಮ್ಮ ನಾಗರಾಜು ಅವರಿಗೂ ಕೆಲವರು ಆಮಿಷ ಒಡ್ಡಿದ್ದು ಅವರು ನೇರವಾಗಿ ತಿರಸ್ಕರಿಸಿದ್ದಾರೆ. ಪಾಲಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದಲ್ಲಿ ನಾನೂ ಸದಸ್ಯತ್ವ ಹೊಂದಿದ್ದು, ಮತದಾನದ ಹಕ್ಕು ಪಡೆದಿದ್ದೇನೆ. ಚುನಾವಣೆಗೆ ಸ್ಪರ್ಧಿಸಿರುವವರು ಮೇಲಿಂದ ಮೇಲೆ ನಮ್ಮ ಮನೆಗೆ ಬರುತ್ತಿದ್ದಾರೆ. ಈ ಪೈಕಿ ಕೆಲವರು ಹಣ ಇತರ ಆಮಿಷ ತೋರಿಸಿ ಓಟು ಕೊಡಿ ಎಂದು ಕೇಳುತ್ತಿದ್ದಾರೆ. ಓಟು ಮಾರಿಕೊಳ್ಳುವುದು ಅಪಚಾರ. ಓಟು ಮಾರಿಕೊಂಡರೆ ನೈತಿಕತೆ ಕಳೆದುಕೊಳ್ಳುತ್ತೇವೆ. ಇದು ಇತರರಿಗೂ ತಿಳಿಯಲಿ ಎಂಬ ಉದ್ದೇಶದಿಂದ ನಮ್ಮ ಮನೆಯ ಮುಂದೆ ಫಲಕ ಹಾಕಿದ್ದೇನೆ' ಎಂದು ರುದ್ರಮ್ಮ ಹೇಳಿದ್ದಾರೆ.

ಸರಗಳ್ಳರ ಬಂಧನ: 41 ಗ್ರಾಂ ಚಿನ್ನದ ಸರ ವಶಕ್ಕೆ

• ಉದಯವಾಹಿನಿ, ಕುದೂರು

ತಾಲ್ಲೂಕಿನ ಗುಡೇಮಾರನಹಳ್ಳಿ ಹ್ಯಾಂಡ್ ಪೋಸ್ಟ್ ಬಳಿ ಶುಕ್ರವಾರ ಮಧ್ಯಾಹ್ನ ಬೇಕರಿ ಬಳಿ ನಿಂತಿದ್ದ ಮಹಿಳೆಯೊಬ್ಬರ ಕತ್ತಿನಲ್ಲಿದ್ದ ಚಿನ್ನದ ಸರಗಳ್ಳತನ ಮಾಡಿ ಪರಾರಿಯಾಗಿದ್ದ ಇಬ್ಬರು ಕಳ್ಳರನ್ನು, ಕೃತ್ಯ ನಡೆದ 24 ತಾಸಿನಲ್ಲೇ ಶನಿವಾರ ಕುದೂರು ಠಾಣೆ ಪೊಲೀಸರು ಬಂಧಿಸಿದ್ದಾರೆ. ತುರುವೇಕೆರೆ ತಾಲ್ಲೂಕಿನ ಮೈಸಂದ್ರದ ಮುತ್ತುರಾಜು (26) ಮತ್ತು ಮಧುಗಿರಿ ತಾಲ್ಲೂಕಿನ ಕರಡಿಪುರದ ಶ್ರೀನಿವಾಸ್ (38) ಬಂಧಿತರಾಗಿದ್ದು, 41 ಗ್ರಾಂ ಚಿನ್ನದ ಸರವನ್ನು ವಶಪಡಿಸಿಕೊಳ್ಳಲಾಗಿದೆ. ಆರೋಪಿಗಳಿಬ್ಬರು ಬೆಂಗಳೂರಿನ ಟಿ. ದಾಸರಹಳ್ಳಿಯಲ್ಲಿ ವಾಸವಾಗಿದ್ದರು.

ಆರೋಪಿಗಳು ಶುಕ್ರವಾರ ಮಧ್ಯಾಹ್ನ 2 ಗಂಟೆ ಸುಮಾರಿಗೆ ಗುಡೇಮಾರನಹಳ್ಳಿಯ ಅನ್ನಪೂರ್ಣೇಶ್ವರಿ ಬೇಕರಿಗೆ ಬೈಕ್‌ಅಲ್ಲಿ ಬಂದು ಜ್ಯೂಸ್ ಕುಡಿಯುತ್ತಾ ನಿಂತಿದ್ದರು. ಇದೇ ಸಂದರ್ಭದಲ್ಲಿ ನೆಲಮಂಗಲಕ್ಕೆ ಹೊರಟಿದ್ದ ಅಂಬಿಕಾ ಎಂಬುವರು ಸಹ ಬೇಕರಿ ಬಳಿ ಬಂದು ನಿಂತಿದ್ದರು. ಅವರ ಕತ್ತಿನಲ್ಲಿದ್ದ ಚಿನ್ನದ ಸರ ಗಮನಿಸಿದ ಆರೋಪಿಗಳು ಕ್ಷಣಾರ್ಧದಲ್ಲೇ ಕದಿಯಲು ಯೋಜನೆ ರೂಪಿಸಿದರು ಎಂದು ಕುದೂರು ಠಾಣೆ ಪೊಲೀಸರು ತಿಳಿಸಿದರು. ಒಬ್ಬ ಆರೋಪಿ ಬೈಕ್ ಏರಿ ಸ್ಟಾರ್ಟ್ ಮಾಡಿ ಪರಾರಿಯಾಗಲು ಸನ್ನದ್ದ ಸ್ಥಿತಿಯಲ್ಲಿದ್ದ. ಮತ್ತೊಬ್ಬ ಆರೋಪಿ ಮಹಿಳೆ ಬಳಿಗೆ ಹೋಗಿ ಒಮ್ಮೆಲೆ ಕುತ್ತಿಗೆಗೆ ಕೈ ಹಾಕಿ ಸರ ಕಸಿದುಕೊಂಡ. ಆ ರಭಸಕ್ಕೆ ಮಹಿಳೆ ನೆಲಕ್ಕೆ ಕುಸಿದು ಬಿದ್ದರು. ಮಹಿಳೆ ಮೇಲಕ್ಕೇ

ಅಂತರಾಳದಿಂದ...
EDITORIAL

ಅಸ್ಪೃಶ್ಯತೆ, ಜಾತೀಯತೆ ದಲಿತರಿಗೆ ಸಂವಿಧಾನ ಕೊಟ್ಟ 'ಸ್ಥಾನಮಾನವೆ'?

ಹಿಂದೂ, ಸಿಖ್ ಅಥವಾ ಬೌದ್ಧ ಧರ್ಮಗಳನ್ನು ಹೊರತು ಪಡಿಸಿ ಇತರ ಧರ್ಮವನ್ನು ಆಚರಿಸುವ ಯಾವುದೇ ವ್ಯಕ್ತಿಯನ್ನು ಪರಿಶಿಷ್ಟ ಜಾತಿಯ ಸದಸ್ಯ ಎಂದು ಪರಿಗಣಿಸಲಾಗುವುದಿಲ್ಲ. ಇತರ ಯಾವುದೇ ಧರ್ಮಕ್ಕೆ ಮತಾಂತರವು ಪರಿಶಿಷ್ಟ ಜಾತಿ 'ಸ್ಥಾನಮಾನ'ದ ತಕ್ಷಣದ ಮತ್ತು ಸಂಪೂರ್ಣ ನಷ್ಟಕ್ಕೆ ಕಾರಣವಾಗುತ್ತದೆ ಎಂದು ಸುಪ್ರೀಂಕೋರ್ಟ್ ಮಂಗಳವಾರ ಹೇಳಿರುವುದು ಚರ್ಚೆಗೆ ಕಾರಣವಾಗಿದೆ. ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡು ಪಾದ್ರಿಯಾಗಿ ಕಾರ್ಯನಿರ್ವಹಿಸುತ್ತಿದ್ದ ವ್ಯಕ್ತಿಯೋರ್ವರು ತನ್ನ ಮೇಲೆ ಹಲ್ಲೆ ನಡೆಸಿದ್ದ ವ್ಯಕ್ತಿಗಳ ವಿರುದ್ಧ ಎಸ್‌ಸಿ-ಎಸ್‌ಟಿ ಕಾಯ್ದೆಯಡಿ ದಾಖಲಿಸಿದ್ದ ಪ್ರಕರಣಕ್ಕೆ ಸಂಬಂಧಿಸಿ ಉಚ್ಚ ನ್ಯಾಯಾಲಯ ಈ ತೀರ್ಪನ್ನು ನೀಡಿದೆ. ಈ ತೀರ್ಪು ನಿರ್ದಿಷ್ಟ ಹಲ್ಲೆ ಪ್ರಕರಣಕ್ಕಷ್ಟೇ ಸೀಮಿತವಾಗಿ ಉಳಿಯದೆ ದಲಿತರ ಒಟ್ಟಾರೆ ಸಾಮಾಜಿಕ ಬದುಕಿನ ಮೇಲೆ ಪರಿಣಾಮ ಬೀರುವ ಸಾಮರ್ಥ್ಯವನ್ನು ಹೊಂದಿದೆ. ತನ್ನೊಳಗೆ ಹಲವು ವಿರೋಧಾಭಾಸಗಳನ್ನು ಬಚ್ಚಿಟ್ಟುಕೊಂಡಿರುವ ಈ ತೀರ್ಪನ್ನು ಈಗಾಗಲೇ ಹಲವು ಚಿಂತಕರು ಪ್ರಶ್ನಿಸಿದ್ದಾರೆ. ಒಬ್ಬ ಎಸ್‌ಸಿ ಅಥವಾ ಪರಿಶಿಷ್ಟ ಜಾತಿಯ ವ್ಯಕ್ತಿ ಮತಾಂತರವಾಗುವುದಕ್ಕೆ ಸುಪ್ರೀಂಕೋರ್ಟ್‌ಗೆ ಯಾವ ಅಭ್ಯಂತರವೂ ಇಲ್ಲ. ಆದರೆ, ಆತ ಕ್ರೈಸ್ತ ಅಥವಾ ಇಸ್ಲಾಮ್ ಧರ್ಮಕ್ಕೆ ಮತಾಂತರವಾಗುವುದರ ಬಗ್ಗೆ ಮಾತ್ರ ತೀರ್ಪಿನಲ್ಲಿ ಆಕ್ಷೇಪವಿದ್ದಂತಿದೆ. ಸುಪ್ರೀಂಕೋರ್ಟ್ ಪರಿಶಿಷ್ಟ ಜಾತಿಯನ್ನು ಒಂದು 'ಸ್ಥಾನಮಾನ'ವಾಗಿ ಪರಿಗಣಿಸಿದೆ. ಆದರೆ ಈ 'ಸ್ಥಾನಮಾನ'ವನ್ನು ಪಡೆದ ಜನರು ತಲೆ ತಲಾಂತರಗಳಿಂದ ಪಡೆದ ಸವಲತ್ತುಗಳು ಯಾವುವು ಎನ್ನುವುದು ಸುಪ್ರೀಂಕೋರ್ಟ್‌ಗೆ ಗೊತ್ತಿಲ್ಲದಿರುವುದೇನೂ ಅಲ್ಲ. ಅದೊಂದು ಸ್ಥಾನವೂ ಅಲ್ಲ, ಮಾನವೂ ಅಲ್ಲ. ಬದಲಿಗೆ ಜಾತಿಯ ಹೆಸರಿನಲ್ಲಿ ಶತಶತಮಾನಗಳಿಂದ ಪಡೆದುಕೊಂಡು ಬಂದ ಅವಮಾನವನ್ನೇ ಸುಪ್ರೀಂಕೋರ್ಟ್ 'ಸ್ಥಾನಮಾನ' ಎಂದು ಹೇಳುತ್ತಿದೆ. ಈ ಸ್ಥಾನಮಾನ ರದ್ದಾಗುವುದು ಎಂದರೆ, ಜಾತೀಯತೆ, ಅಸ್ಪೃಶ್ಯತೆ, ಶೋಷಣೆ ಇತ್ಯಾದಿಗಳಿಂದ ಮುಕ್ತವಾಗುವುದು ಎಂದರ್ಥ. ಎಲ್ಲಿಯವರೆಗೆ ಇವೆಲ್ಲವುಗಳಿಂದ ಪರಿಶಿಷ್ಟ ಜಾತಿಯ ಜನರು ಮುಕ್ತರಾಗುವುದಿಲ್ಲವೋ ಅಲ್ಲಿಯವರೆಗೆ ಈ ಸ್ಥಾನಮಾನ' ಅವರ ಪಾಲಿಗೆ ಯಾವ ಸುಪ್ರೀಂಕೋರ್ಟ್ ಹೇಳಿದರೂ, ಯಾವ ಧರ್ಮಕ್ಕೆ ಮತಾಂತರವಾದರೂ ರದ್ದಾಗುವುದಿಲ್ಲ.



ಇದು ವಾಸ್ತವವಾಗಿದೆ. 'ಸ್ಥಾನಮಾನ'ವೆಂದು ಸುಪ್ರೀಂಕೋರ್ಟ್ ಯಾವುದನ್ನು ಉಲ್ಲೇಖಿಸಿ ತೀರ್ಪು ನೀಡಿದೆ ಎನ್ನುವುದನ್ನು ಊಹಿಸುವುದು ಕಷ್ಟವಿಲ್ಲ. ಕೋರ್ಟ್ ಕಣ್ಣಿಟ್ಟಿರುವುದು ಪರಿಶಿಷ್ಟ ಜಾತಿಯ ಜನರಿಗೆ ನೀಡಿರುವ ಮೀಸಲಾತಿಯ ಮೇಲೆ. ಹಾಗೆಯೇ ಶೋಷಣೆ, ದೌರ್ಜನ್ಯಗಳಿಂದ ಅವರನ್ನು ರಕ್ಷಿಸುವುದಕ್ಕಾಗಿ ರೂಪಿಸಿರುವ ಕಾನೂನು ಕಾಯ್ದೆಗಳ ಮೇಲೆ. ಇದನ್ನು ಪರೋಕ್ಷವಾಗಿ ಸುಪ್ರೀಂಕೋರ್ಟ್ ಪರಿಶಿಷ್ಟ ಜಾತಿಗಳಿಗೆ ನೀಡಿರುವ 'ಸವಲತ್ತು'ಗಳು ಎಂದು ಭಾವಿಸಿ ತೀರ್ಪು ನೀಡಿದಂತಿದೆ. ನೀವು ಹಿಂದೂ, ಬೌದ್ಧ ಸಿಖ್ ಧರ್ಮ ಇವುಗಳನ್ನು ಹೊರತು ಪಡಿಸಿ ಇಸ್ಲಾಂ ಅಥವಾ ಕ್ರೈಸ್ತ ಧರ್ಮಕ್ಕೆ ಮತಾಂತರವಾದರೆ ಈ ಸವಲತ್ತುಗಳಿಂದ ವಂಚಿತರಾಗುತ್ತೀರಿ ಎನ್ನುವ ನೇರ ಬೆದರಿಕೆಯನ್ನು ಪರಿಶಿಷ್ಟ ಜಾತಿಯ ಜನರಿಗೆ ನೀಡಲಾಗಿದೆ. ಬೌದ್ಧ, ಸಿಖ್ ಧರ್ಮ ಸ್ವತಂತ್ರ ಧರ್ಮವಾಗಿ ಈಗಾಗಲೇ ಗುರುತಿಸಿಕೊಂಡಿವೆ. ಅಷ್ಟೇ ಅಲ್ಲ, ಅಲ್ಪಸಂಖ್ಯಾತ ಸ್ಥಾನಮಾನವನ್ನೂ ಅವುಗಳು ಪಡೆದುಕೊಂಡಿವೆ. ಹೀಗಿರುವಾಗ ಕ್ರೈಸ್ತ ಧರ್ಮ ಮತ್ತು ಇಸಾಮ್ ಧರ್ಮಕ್ಕೆ ಮತಾಂತರವಾದರೆ ಮಾತ್ರ ಸ್ಥಾನಮಾನ ರದ್ದಾಗುವುದು ಹೇಗೆ? ಎನ್ನುವ ಪ್ರಶ್ನೆಯನ್ನು ಕೆಲವರು ಕೇಳುತ್ತಿದ್ದಾರೆ. ಈ ತೀರ್ಪಿನ ಮೂಲಕ ಸುಪ್ರೀಂಕೋರ್ಟ್ ಪರೋಕ್ಷವಾಗಿ ಬೌದ್ಧಧರ್ಮ ಮತ್ತು ಸಿಖ್ ಧರ್ಮದಲ್ಲಿ ಜಾತೀಯತೆ, ಅಸ್ಪೃಶ್ಯತೆಗಳು ತಾಂಡವವಾಡುತ್ತಿವೆ. ಆದುದರಿಂದ ಆ ಧರ್ಮಕ್ಕೆ ಮತಾಂತರವಾದರೆ ಪರಿಶಿಷ್ಟರ ಬದುಕಿನಲ್ಲಿ ಯಾವ ಬದಲಾವಣೆಯೂ ಆಗುವುದಿಲ್ಲ ಎಂದು ಹೇಳಿದಂತಾಯಿತು. ಇದೇ ಸಂದರ್ಭದಲ್ಲಿ, ಕ್ರೈಸ್ತ ಮತ್ತು ಇಸ್ಲಾಂ ಧರ್ಮಗಳಲ್ಲಿ ಜಾತೀಯತೆ, ಅಸ್ಪೃಶ್ಯತೆಗಳಿಲ್ಲ ಎಂದು ಸುಪ್ರೀಂಕೋರ್ಟ್ ಕ್ಲೀನ್‌ಚಿಟ್ ನೀಡಿದಂತಾಗಿದೆ. ಈ ಎರಡು ಧರ್ಮಗಳಿಗೆ ಪರಿಶಿಷ್ಟ ಜಾತಿಯ ಜನರು ಮತಾಂತರವಾದರೆ ಅವರಿಗೆ ಬೇರೆ ಕಾನೂನಿನ ರಕ್ಷಣೆಯ ಅಗತ್ಯವಿಲ್ಲ ಎಂದು ಸುಪ್ರೀಂಕೋರ್ಟ್ ಭಾವಿಸಿದೆ. ಇಸ್ಲಾಂ ಮತ್ತು ಕ್ರೈಸ್ತ ಧರ್ಮಕ್ಕೆ ಮತಾಂತರವಾದರೆ ಪರಿಶಿಷ್ಟ ಜಾತಿಯ ಜನರಿಗೆ ಅವರ ಹಿಂದಿನ 'ಸ್ಥಾನಮಾನ' ರದ್ದಾಗಿ ಸಂವಿಧಾನದಲ್ಲಿರುವ ಹೊಸ 'ಸ್ಥಾನಮಾನ'ಗಳು ಸಿಕ್ಕಂತಾಗುತ್ತದೆ ಎಂಬರ್ಥದಲ್ಲಿ ತೀರ್ಪು ಹೊರಬಿದ್ದಿದೆ.

ಆದರೆ, ವಾಸ್ತವ ಬೇರೆಯೇ ಇದೆ. ಈ ದೇಶದಲ್ಲಿ ಬೇರೆ ಬೇರೆ ಜಾತಿಗಳಿಂದ ಮತಾಂತರವಾದವರೇ ಅಧಿಕ. ಇಲ್ಲಿ ವೃತ್ತಿ ಮತ್ತು ಜಾತಿ ಒಂದನ್ನೊಂದು ಬೆಸೆದುಕೊಂಡಿವೆ. ವೃತ್ತಿಯ ಕಾರಣಕ್ಕಾಗಿಯೇ ಜಾತಿಯನ್ನೂ ನಿಕೃಷ್ಟವಾಗಿ ನೋಡಲಾಗುತ್ತಿದೆ. ಇತರ ಧರ್ಮಗಳಿಗೆ ಮತಾಂತರವಾದರೂ ಒಂದು ತಲೆಮಾರು ಜಾತಿಯನ್ನು ಪೂರ್ಣವಾಗಿ ಕಳಚಿಕೊಂಡು ಸಮಾಜದಲ್ಲಿ ಬದುಕುವುದು ಇಲ್ಲಿ ಸುಲಭವಿಲ್ಲ. ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡ ದಲಿತರು ಹೊಸ ಧರ್ಮದಲ್ಲಿ 'ದಲಿತ ಕ್ರಿಶ್ಚಿಯನ್ನ'ರಾಗಿ ಬದುಕಬೇಕಾದ ಸ್ಥಿತಿಯಿದೆ. ಹಿಂದೂ ಧರ್ಮದ ಜಾತೀಯತೆ, ಅಸ್ಪೃಶ್ಯತೆಯಿಂದ ಬಿಡುಗಡೆ ಪಡೆಯುವ ಉದ್ದೇಶದಿಂದ ಮತಾಂತರಗೊಂಡವರು, ಹೊಸ ಧರ್ಮದಲ್ಲೂ ತಮ್ಮ ಜಾತಿಯ ಕಾರಣಕ್ಕಾಗಿ ಶೋಷಣೆಯನ್ನು ಅನುಭವಿಸುವುದು ವಿಪರ್ಯಾಸವೇ ಸರಿ. ಕ್ರೈಸ್ತ, ಇಸ್ಲಾಂ ಧರ್ಮಗಳಿಗೆ ಮೇಲ್ ಜಾತಿಯಿಂದ ಮತಾಂತರಗೊಂಡ ಜನರು ದಲಿತ ಸಮುದಾಯದಿಂದ ಮತಾಂತರಗೊಂಡ ಜನರನ್ನು ಸರಿಸಮನಾಗಿ ಕಾಣುವುದಿಲ್ಲ. ಕ್ರೈಸ್ತ ಧರ್ಮದಲ್ಲಿ ದಲಿತ ಪಾದ್ರಿಗಳೂ ಈ ಜಾತೀಯತೆಯ ನೋವನ್ನನುಭವಿಸುತ್ತಾ ಬದುಕುತ್ತಿದ್ದಾರೆ. ಈ ಕಾರಣಕ್ಕಾಗಿಯೇ ದಲಿತ ಕ್ರಿಶ್ಚಿಯನ್ನರು ತಮ್ಮ ಹಕ್ಕುಗಳಿಗಾಗಿ ಪ್ರತ್ಯೇಕವಾಗಿ ಸಂಘಟಿತರಾಗಿ ಹೋರಾಟ ನಡೆಸುತ್ತಿದ್ದಾರೆ. ಹಾಗೆಯೇ ಬೇರೆ ಬೇರೆ ಜಾತಿಗಳಿಂದ ಇಸ್ಲಾಂ ಧರ್ಮಕ್ಕೆ ಮತಾಂತರವಾದ ನೂರಾರು ಜಾತಿಗಳು ತಮ್ಮ ಪೂರ್ವಾಶ್ರಮದ ಹೆಸರುಗಳ ಜೊತೆಗೇ ಬದುಕುತ್ತಿವೆ. ಮುಸ್ಲಿಮರ ನಡುವೆ ಇರುವ ಈ ಜಾತಿಗಳ ಬಗ್ಗೆಯೇ ಹಲವು ಅಧ್ಯಯನಗಳು ನಡೆದಿವೆ. ಇವುಗಳ ಬಗ್ಗೆ ಸುಪ್ರೀಂಕೋರ್ಟ್‌ಗೆ ಅರಿವಿಲ್ಲದೇ ಇರುವುದು ಖೇದಕರವಾಗಿದೆ. ಇಸ್ಲಾಂ ಮತ್ತು ಕ್ರೈಸ್ತ ಧರ್ಮದಲ್ಲಿ ಜಾತಿ ವ್ಯವಸ್ಥೆ ಇಲ್ಲದೇ ಇರಬಹುದು. ಆದರೆ ಭಾರತದ ಸಾಮಾಜಿಕ ವ್ಯವಸ್ಥೆಯಲ್ಲಿ ಒಬ್ಬ ಮತಾಂತರವಾದಾಕ್ಷಣ ತಮ್ಮ ಜಾತಿಯ ಕಳಂಕದಿಂದ ಸಂಪೂರ್ಣ ಹೊರಗೆ ಬರಲು ಸಾಧ್ಯವಿಲ್ಲ. ಮತಾಂತರದಿಂದ ಆರ್ಥಿಕವಾಗಿ, ಸಾಮಾಜಿಕವಾಗಿ ಒಮ್ಮೆಲೆ ಬಲಾಢ್ಯನಾಗಲು ಸಾಧ್ಯವಿಲ್ಲ. ಅದೊಂದು ಪ್ರತಿರೋಧ ಮಾತ್ರವಾಗಿದೆ. ಇಲ್ಲಿ ಮುಸ್ಲಿಮರೇ ತಾವು ಅನುಸರಿಸುತ್ತಿರುವ ಧರ್ಮದ ಕಾರಣಕ್ಕಾಗಿ ಇತರರಿಂದ ದೌರ್ಜನ್ಯಕ್ಕೊಳಗಾಗುತ್ತಿರುವ ದಿನಗಳು ಇವು ಸಾಚಾರ್ ವರದಿ ಈ ದೇಶದಲ್ಲಿರುವ ಮುಸ್ಲಿಮರನ್ನೇ 'ನವ ದಲಿತರು' ಎಂದು ಕರೆದಿರುವಾಗ, ದಲಿತರು ಕ್ರೈಸ್ತರು ಅಥವಾ ಮುಸ್ಲಿಮರಾಗಿ ಬದಲಾದಾಕ್ಷಣ ಸಂವಿಧಾನಕೊಟ್ಟ ಎಲ್ಲಾ ಹಕ್ಕುಗಳನ್ನು ಕಳೆದುಕೊಳ್ಳುತ್ತಾರೆ ಎನ್ನುವುದು ಅಮಾನವೀಯ ಮಾತ್ರವಲ್ಲ, ಹಿಂದೂ

• ಹಿಂದಿನ ಸಂಚಿಕೆಯಿಂದ 121ನೆಯ ಅಧ್ಯಾಯ

ಆ ಸಮಯದಲ್ಲಿ ರಾವಣನು ಜಟಾಯುವಿನ ಅಳ್ಳೆಯಮೇಲೆ ತಿವಿಯಲು ಆತನ ಖಡ್ಗದಿಂದ ಗಾಯ ಪಡೆದು ಬಿದ್ದು ಪ್ರಾಣವನ್ನು ಹಿಡಿದುಕೊಂಡಿದ್ದು ಶ್ರೀರಾಮನು ಅಲ್ಲಿಗೆ ಬಂದಾಗ ಸೀತಾದೇವಿಯ ವೃತ್ತಾಂತವನ್ನೂ ತಾನು ರಾವಣನೊಡನೆ ಯುದ್ಧ ಮಾಡಿದ ವೃತ್ತಾಂತ ವನ್ನೂ ಹೇಳಿ ತನ್ನ ಶರೀರವನ್ನು ಬಿಟ್ಟು ಉತ್ತಮವಾದ ಲೋಕವನ್ನು ಪಡೆದನು. ಆಮೇಲೆ ಶ್ರೀರಾಮನು ತನ್ನ ತಂದೆಯಾದ ದಶರಥರಾಯನ ಸಖನೆಂದೆಣಿಸಿ ಜಟಾಯುವಿಗೆ ಅಗ್ನಿಸಂಸ್ಕಾರವನ್ನು ಮಾಡಿ ಅಲ್ಲಿಂದ ಹೊರಟು ಸೀತಾದೇವಿಯನ್ನ ರಸುತ್ತ, ಮಹಾತ್ಮನಾಗಿ ನನಗೆ ಚಿಕ್ಕಪ್ಪನಾದ ಸುಗ್ರೀವ ನೊಡನೆ ಸ್ನೇಹವನ್ನು ಮಾಡಿಕೊಂಡು ತನ್ನ ಸಖನಾದ ಸುಗ್ರೀವನಿಗೆ ಪ್ರಿಯವನ್ನು ಮಾಡಬೇಕೆಂಬ ಬುದ್ಧಿಯಿಂದ ನನ್ನ ತಂದೆಯಾದ ವಾಲಿಯನ್ನು ಕೊಂದು ಸುಗ್ರೀವನಿಗೆ ಕಪಿರಾಜ್ಯಾಧಿಪತ್ಯವನ್ನು ಕಟ್ಟಿದನು. ಸುಗ್ರೀವನು ತನಗೆ ಉಪಕಾರವನ್ನು ಮಾಡಿದ ಶ್ರೀರಾಮನಿಗೆ ಪ್ರತ್ಯುಪಕಾರವನ್ನು ಮಾಡಬೇಕೆಂಬ ಬುದ್ಧಿಯಿಂದ ಶ್ರೀರಾಮನ ಪಟ್ಟದರಾಣಿಯಾದ ಸೀತಾದೇವಿಯನ್ನರಸಿ ತರಹೇಳಿ ಕಳುಹಿಸಲು ನಾವಿಲ್ಲಿಗೆ ಬಂದೆವು. ನಾವು ಎಲ್ಲಾ ಪ್ರದೇಶಗಳಲ್ಲಿಯೂ ಸೀತಾದೇವಿಯನ್ನ ರಸಿ ನೋಡಿ ರಾತ್ರಿಯಲ್ಲಿ ಸೂರ್ಯಪ್ರಭೆಯನ್ನು ಕಾಣಲಾರದಂತೆ ಆ ದೇವಿಯನ್ನು ಕಾಣದೆ ಹೋದೆವು. ಈ ಪ್ರಕಾರ ದಂಡಕಾರಣ್ಯವೇ ಮೊದಲಾದ ವನಗಳಲ್ಲಿಯೂ ಮಿಕ್ಕ ಪ್ರದೇಶಗಳಲ್ಲಿಯೂ ಆ ದೇವಿಯನ್ನು ಕಾಣದೆ ಮಯನೆಂಬ ದೇವಶಿಲ್ಪಿಯಿಂದ ನಿರ್ಮಿಸಲ್ಪಟ್ಟ ಒಂದು ಮಾಯಾಬಿಲವನ್ನು ಹೊಕ್ಕು ಅಲ್ಲಿಯೂ ಕಾಣದೆ ಕಂಗೆಟ್ಟೆವು. ಅಷ್ಟರೊಳಗೆ ಸುಗ್ರೀವನು ನೇಮಿಸಿದ ಒಂದು ತಿಂಗಳ ಮಿತಿಯು ಕಳೆಯಿತು. ಸುಗ್ರೀವನು ನಾವು ಹೊರಡುವಾಗ ಒಂದು ತಿಂಗಳೊಳಗಾಗಿ ಸೀತಾದೇವಿಯನ್ನರಸಿ ಕೊಂಡು ಬರದವರಿಗೆ ಶರೀರಾಂತವಾದ ಆಜ್ಞೆಯನ್ನು ಮಾಡಿಸುವುದಾಗಿ ಹೇಳಿಕಳುಹಿಸಿರುವನು. ನಾವು ಬಂದ ಕಾರ್ಯವನ್ನು ಸಾಧ್ಯಮಾಡದೆ ಸುಗ್ರೀವನು ಕಟ್ಟಳೆ ಮಾಡಿದ ಮಿತಿಯು ತುಂಬಿದಮೇಲೆ ಅಪರಾಧಿಗಳಾಗಿ ಕಿಷ್ಕಿಂಧಾಪಟ್ಟಣಕ್ಕೆ ಹೋದರೆ ಆತನೂ ರಾಮಲಕ್ಷ್ಮಣರೂ ಕೋಪಿಸಿಕೊಂಡು ನಮಗೆಲ್ಲರಿಗೂ ಮರಣಾಂತವಾದ ಆಜ್ಞೆಯನ್ನು ಮಾಡುವರು. ಆದಕಾರಣ ನಾವು ಅವರ ಆಜ್ಞೆ ಗೊಳಗಾಗಿ ಶರೀರವನ್ನು ಬಿಡುವುದಕ್ಕಿಂತಲೂ ಈ ಪುಣ್ಯಕ್ಷೇತ್ರವಾದ ಸಮುದ್ರತೀರದಲ್ಲಿ ಶರೀರವನ್ನು ಬಿಡುವುದೇ ಯೋಗ್ಯವೆಂದು ನಿಶ್ಚಯಿಸಿಕೊಂಡು ಇಲ್ಲಿ ಪ್ರಾಯೋಪವೇಶಕ್ಕೆ ಕುಳಿತೆವು ಎಂದು ಸಂಪಾತಿಗೆ ಹೇಳಿದನು.

ಮುಂದುವರಿಯುವುದು...

ಕಲಾ ಸಾಹಿತ್ಯ

ಕೃಷ್ಣಪ್ಪ
ಲೇಖಕರು
ಪ್ರಗತಿ ಪರ ಚಿಂತಕ ಹಾಗೂ ವಿಮರ್ಶಕರು

ಜ್ಞಾನ ಜ್ಯೋತಿ, ಅಹಿಂಸಾ ಕರುಣಾಮೂರ್ತಿ ಭಗವಾನ್ ಶ್ರೀ ವರ್ಧಮಾನ ಮಹಾವೀರರ ಜಯಂತಿ

• ಉದಯವಾಹಿನಿ, ವಿಶೇಷ

ವಿಶ್ವದ ಪ್ರಮುಖ ಮತಗಳಲ್ಲಿ ಜೈನ ಮತವೂ ಒಂದಾಗಿದೆ. ಜೈನ ಧರ್ಮದ ಪರಂಪರೆಯಲ್ಲಿ 24 ಜನ ತೀರ್ಥಂಕರರು ಪರಮ ಪೂಜ್ಯನೀಯರಾಗಿದ್ದಾರೆ. ಅವರಲ್ಲಿ ಕೊನೆಯವರು ಭಗವಾನ್ ಮಹಾವೀರರು. ಕ್ರಿ. ಪೂ. 597ರಲ್ಲಿ ಬಿಹಾರ್ ರಾಜ್ಯದ ವೈಶಾಲಿಯಲ್ಲಿ ಮಹಾವೀರರು ಜನಿಸಿದರು. ತಂದೆ ಸಿದ್ಧಾರ್ಥ, ತಾಯಿ ತ್ರಿಶಾಲಾ ಇವರದು ರಾಜಕುಟುಂಬ.

ಬಾಲ್ಯದಲ್ಲಿಯೇ ವರ್ಧಮಾನ ತನ್ನ ಶಕ್ತಿ ಸಾಮರ್ಥ್ಯಗಳಿಂದ ಮಹಾವೀರನಾಗಿ ತೀಕ್ಷ್ಣಬುದ್ಧಿಯ ಬಾಲಕನಾಗಿದ್ದನು. ಗುರುಗಳು ಅವರನ್ನು ಸನ್ಮತಿ ಎಂದು ಕರೆಯುತ್ತಿದ್ದರು. ತರ್ಕ, ವ್ಯಾಕರಣ ಮೊದಲಾದ ಶಾಸ್ತ್ರ ವಿದ್ಯೆಗಳಲ್ಲಿ ಅದ್ಭುತ ಪ್ರಾಢಿಮೆಯನ್ನು ಸಾಧಿಸಿದರು. ವರ್ಧಮಾನ ರಾಜಕುಮಾರನಾಗಿ ಸಕಲ ಭೋಗಭಾಗ್ಯಗಳನ್ನು ಪಡೆದಿದ್ದರೂ ಲೋಕ ಜೀವನದಲ್ಲಿರುವ ಅಪಾರ ನೋವನ್ನು ಕಂಡು ಅವನ ಅಂತಃಕರಣ ಕಲಕಿ ಹೋಗಿತ್ತು. ಹುಟ್ಟು ಸಾವಿನ ರಹಸ್ಯವನ್ನು ಕುರಿತು ಅವನ ಮನಸ್ಸು ಯೋಚಿಸುತ್ತಿತ್ತು. ಮಾನವನ ದುಃಖಕ್ಕೆ ಕಾರಣವಾದ ಆಸೆ, ಆಕರ್ಷಣೆಗಳು, ಅಜ್ಞಾನ, ಅಂಧಾನುಕರಣೆ ಇವುಗಳ ಬಗ್ಗೆಯೂ ಅವನು ಚಿಂತಿಸಿದನು. ಮನಸ್ಸಿನ ಅಂತರಾಳದಲ್ಲಿ ವೈರಾಗ್ಯ ಭಾವ ವಿಧಿಸಿತ್ತು. ಆದರೂ ತಾಯಿಯ ವಾತ್ಸಲ್ಯಕ್ಕೆ ಮಣಿದು ರಾಜಕುಮಾರಿ ಯಶೋಧರೆರೊಂದಿಗೆ ವಿವಾಹವಾಯಿತು. ನಂತರ ಪ್ರಿಯದರ್ಶನಿ ಎಂಬ ಹೆಣ್ಣುಮಗು ಜನಿಸಿತು. ಕಾಮ ಕ್ರೋಧಾದಿಗಳನ್ನು ಗೆದ್ದು ಸಮ್ಯಕ್ ಜ್ಞಾನ ಸಂಪಾದನೆಗೆ ಅವರ ಮನಸ್ಸು ಹಾತೊರೆಯುತ್ತಿತ್ತು. ಕ್ರಮೇಣ ಅವರ ಮನದಲ್ಲಿ ಲೋಕಕಲ್ಯಾಣದ ಭಾವನೆ ತೀವ್ರವಾಯಿತು. ಪ್ರಾಪಂಚಿಕವಾದ ಮಮಕಾರಗಳನ್ನು ತೊರೆದು ದೇಹದ ಸಕಲ ಭೋಗ ಭಾಗ್ಯಗಳನ್ನು ತ್ಯಜಿಸಿ ತಪಸ್ಸಿಗೆ ತೆರಳುವ ನಿರ್ಧಾರ ಮಾಡಿದರು. ಸುಮಾರು 12 ವರ್ಷಗಳ ಕಾಲ ಕಠಿಣ ತಪಸ್ಸುಗಳನ್ನು ಮಾಡಿ ಮಹಾಯೋಗಿಯಾದರು. ಮಹಾವೀರರು ಲೋಕಕ್ಕೆ ನೀಡಿದ ಉಪದೇಶಗಳನ್ನು ತಿಳಿಯುವುದಾದರೆ, ತಮ್ಮ ಕರ್ಮದ ಫಲವನ್ನು ಅನುಭವಿಸಲೇಬೇಕು. ತನ್ನ ಏಳಿಗೆ ಮತ್ತು ಅವನತಿ ಎಲ್ಲಕ್ಕೂ ಅವನೇ ಕಾರಣ, ಮನುಷ್ಯ ತನ್ನ ಆತ್ಮವಿಶ್ವಾಸದಿಂದ ಸ್ವಾವಲಂಬಿಯಾಗಿ ತನ್ನ ಉನ್ನತಿಯನ್ನು ಸಾಧಿಸಬೇಕು. ಆ ಸಾಧನೆಯ ಮಾರ್ಗದಲ್ಲಿ ಸತ್ಯ, ಧರ್ಮ, ಅಹಿಂಸೆ, ಪ್ರಾಮಾಣಿಕತೆ, ನಿಸ್ವಾರ್ಥ ಇವುಗಳೇ ವ್ರತಗಳು ಆಗಿರಬೇಕು. ಮನುಷ್ಯನ ಆಸೆಗೆ ಅಂತ್ಯವಿಲ್ಲ. ಅದು ಆಕಾಶದಷ್ಟು ಅನಂತವಾದದ್ದು. ಆದರೆ ಮಾನವ ತನ್ನ ಇಂದ್ರಿಯಗಳನ್ನು ತನ್ನ ಅಧೀನದಲ್ಲಿರಿಸಿಕೊಂಡು ಸಂಯಮದಿಂದ ಆಸೆ ಆಮಿಷಗಳಿಗೆ ಬಲಿಯಾಗದೇ ಶುದ್ಧ ಬಾಳ್ವೆ ನಡೆಸಬೇಕು. ಮಹಾವೀರರ ಮುಖ್ಯ ಜೀವನ ಸೂತ್ರಗಳಲ್ಲಿ ಅಹಿಂಸೆಗೆ ಪ್ರಮುಖ ಸ್ಥಾನ ದೊರೆತಿದೆ. ಲೋಕದಲ್ಲಿ ಪ್ರತಿಯೊಬ್ಬ ವ್ಯಕ್ತಿಗೂ ಅವನವನ ಜೀವನ ಪ್ರಿಯವಾಗಿದೆ. ಎಲ್ಲರೂ ಬದುಕಿನಲ್ಲಿ ನೆಮ್ಮದಿಗಳನ್ನು ಬಯಸುತ್ತಾರೆ. ಎಲ್ಲರಿಗೂ ಜೀವನದ ಬಗ್ಗೆ ಪ್ರೀತಿ ಇದೆ. ಇತರರ ಸುಖದುಃಖಗಳನ್ನು ಅರಿತುಕೊಳ್ಳಬೇಕು. ಅವರ ನೋವು-ನಲಿವುಗಳಲ್ಲಿ ಭಾಗಿಗಳಾಗಬೇಕು.

ತಮಗೆ ದುಃಖ ಉಂಟುಮಾಡುವ ಮಾತು, ಕ್ರಿಯೆ, ವಿಚಾರಗಳು ಇತರರಿಗೂ ದುಃಖದಾಯಕವಾದದ್ದು ತಮಗೆ ಸುಖಕರವಾದದ್ದು ಇತರರಿಗೂ ಸುಖ ನೀಡುತ್ತದೆ ಎಂಬ ಈ ಪರಸ್ಪರ ತಿಳುವಳಿಕೆಯೇ ಅಹಿಂಸೆಯ ಅಡಿಪಾಯ. ಇಂದು ವರ್ಧಮಾನ ಮಹಾವೀರರ ಜನ್ಮ ಜಯಂತಿಯನ್ನು ಭಾರತೀಯರಾದ ನಾವುಗಳು ಹಾಗೂ ಜಗತ್ತಿನ ಎಲ್ಲಾ ಮಾನವ ಜನಾಂಗದವರು ಇಂತಹ ಅಹಿಂಸಾ ಕರುಣಾಮೂರ್ತಿಯನ್ನು ಸ್ಮರಿಸಿ ನೆನೆಯುತ್ತಾ ಶ್ರದ್ಧಾಭಕ್ತಿಯಿಂದ ಆಚರಿಸುವುದರಲ್ಲಿ ಅರ್ಥವಿದೆಯೆಂದು ತಿಳಿದು ಆಚರಿಸುತ್ತಾ ಕೊನೆ ಪಕ್ಷ ಅವರ ಮಾರ್ಗದರ್ಶನ ಹಾಗೂ ತತ್ವ ಬೋಧನೆಗಳನ್ನು ಜೀವನದ ಬದುಕಿನಲ್ಲಿ ಅಳವಡಿಸಿಕೊಳ್ಳುವ ಸಂಕಲ್ಪ ಮಾಡೋಣ.

ಥಟ್ ಅಂತ ಮಾಡ್ಬೋದು ಮಸಾಲ ರೈಸ್

ದಿನಬೆಳಗಾದರೆ ಎಲ್ಲರಿಗೂ ಯಾವ ತಿಂಡಿ ಮಾಡುವುದು ಎಂಬುದೇ ದೊಡ್ಡ ಚಿಂತೆಯಾಗಿರುತ್ತದೆ. ಅದರಲ್ಲೂ ಕೆಲಸಕ್ಕೆ ಹೋಗುವ ಮಹಿಳೆಯರಂತೂ ಯಾವ ಅಡುಗೆ ಬೇಗನೆ ಮಾಡಬಹುದು ಎಂದು ಯೋಚಿಸುತ್ತಿರುತ್ತಾರೆ. ಕೆಲವೇ ನಿಮಿಷಗಳಲ್ಲಿ ಸುಲಭವಾಗಿ ಬಹುರುಚಿಕರವಾಗಿ ತಯಾರಿಸಬಲ್ಲ ಬೆಳ

24 ಗ್ರಾಮಗಳಲ್ಲಿ ನೀರಿನ ಸಮಸ್ಯೆ

• ಉದಯವಾಹಿನಿ ಹಾವೇರಿ

ಜಿಲ್ಲೆಯ 286 ಗ್ರಾಮಗಳು ಹಾಗೂ ನಗರ ಪ್ರದೇಶದಲ್ಲಿರುವ 60 ವಾರ್ಡ್‌ಗಳಲ್ಲಿ ಪ್ರಸಕ್ತ ಬೇಸಿಗೆಯಲ್ಲಿ ನೀರಿನ ಸಮಸ್ಯೆ ಉದ್ಭವಿಸಬಹುದೆಂದು ಜಿಲ್ಲಾ ಮಟ್ಟದ ಕಾರ್ಯಪಡೆ ಪಟ್ಟಿ ಸಿದ್ದಪಡಿಸಿದೆ. 286 ಗ್ರಾಮಗಳ ಪೈಕಿ 24 ಗ್ರಾಮಗಳಲ್ಲಿ ಈಗಾಗಲೇ ಕುಡಿಯುವ ನೀರಿಗೆ ಸಮಸ್ಯೆ ಉಂಟಾಗಿದೆ. ಈ ಗ್ರಾಮಗಳಲ್ಲಿ ಖಾಸಗಿ ಕೊಳವೆ ಬಾವಿಗಳನ್ನು ಬಾಡಿಗೆ ಆಧಾರದಲ್ಲಿ ಗುತ್ತಿಗೆ ಪಡೆದು ಜನರಿಗೆ ನೀರು ಪೂರೈಸಲಾಗುತ್ತಿದೆ.

ಬೇಸಿಗೆ ಸಂದರ್ಭದಲ್ಲಿ ಪ್ರತಿ ವರ್ಷವೂ ಜಿಲ್ಲೆಯ ಹಲವು ಗ್ರಾಮ ಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗುತ್ತಿದೆ. ಜಾನುವಾರುಗಳಿಗೂ ನೀರು ಸಿಗದ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಈ ವರ್ಷವೂ ಅದೇ ಸ್ಥಿತಿ ಮುಂದುವರಿಯುವ ಲಕ್ಷಣಗಳು ಗೋಚರಿಸುತ್ತಿವೆ. ಹಾವೇರಿ, ರಾಣೆಬೆನ್ನೂರು, ಹಾನಗಲ್, ಹಿರೇಕೆರೂರು, ರಟ್ಟಿಹಳ್ಳಿ, ಬ್ಯಾಡಗಿ, ಸವಣೂರು ಹಾಗೂ ಶಿಗ್ಗಾವಿ ತಾಲ್ಲೂಕಿನ 286 ಗ್ರಾಮಗಳಲ್ಲಿ ನೀರಿನ ಸಮಸ್ಯೆ ಉದ್ಭವಿಸಬಹುದು. 4.81 ಲಕ್ಷ ನಿವಾಸಿಗಳಿಗೆ ನೀರಿನ ತೊಂದರೆಯಾಗಬಹುದು ಎಂದು ಜಿಲ್ಲಾಡಳಿತ ವರದಿ ಸಿದ್ಧಪಡಿಸಿದೆ.

ಗ್ರಾಮೀಣ ಪ್ರದೇಶಗಳು ಮಾತ್ರವಲ್ಲದೇ ನಗರ ಪ್ರದೇಶಗಳಲ್ಲಿಯೂ ನೀರಿನ ಸಮಸ್ಯೆ ಕಾಣಿಸಿಕೊಳ್ಳುತ್ತಿದೆ. ಹಾವೇರಿ, ರಾಣೆಬೆನ್ನೂರು ನಗರಗಳು ಹಾಗೂ ತಾಲ್ಲೂಕು ಕೇಂದ್ರಗಳಲ್ಲಿರುವ ಒಟ್ಟು 60 ವಾರ್ಡ್‌ಗಳಲ್ಲಿ ನೀರಿನ ಸಮಸ್ಯೆ ಉದ್ಭವಿಸುವ ಲಕ್ಷಣವಿದೆ. ಜಿಲ್ಲೆಯ 24 ಗ್ರಾಮಗಳು ಈಗಾಗಲೇ ನೀರಿನ ಸಮಸ್ಯೆ ಎದುರಿಸುತ್ತಿವೆ. ಕುಡಿಯುವ ನೀರಿಗೂ ಹಾಹಾಕಾರ ಉಂಟಾಗಿದ್ದು, ನೀರಿಗಾಗಿ ತಳ್ಳುಗಾಡಿಯಲ್ಲಿ ಕಿ.ಮೀ.ಗಟ್ಟಲೇ ಹೋಗಿ ಬರಬೇಕಾದ ಸ್ಥಿತಿಯಿದೆ. ಇದಕ್ಕೆ ಪರಿಹಾರವಾಗಿ, 24 ಗ್ರಾಮಗಳಲ್ಲಿ ಲಭ್ಯವಿರುವ 31 ಖಾಸಗಿ ಕೊಳವೆಬಾವಿಯನ್ನು ಬಾಡಿಗೆ ಪಡೆದು ಅಲ್ಲಿಯ ಜನರಿಗೆ ನೀರು ಪೂರೈಸಲಾಗುತ್ತಿದೆ.

ಜಿಲ್ಲೆಯ ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ನೀರಿನ ವ್ಯವಸ್ಥೆಗಾಗಿ ರೂ.794.03 ಲಕ್ಷ ವೆಚ್ಚದಲ್ಲಿ 594 ಕಾಮಗಾರಿಗಳನ್ನು ಗುರುತಿಸಲಾಗಿದೆ' ಎಂದು ಜಿಲ್ಲಾಡಳಿತ ತಿಳಿಸಿದೆ.

ಜಿಲ್ಲಾಧಿಕಾರಿ ನೇತೃತ್ವದಲ್ಲಿ ಈಗಾಗಲೇ ಮೂರು ಬಾರಿ ಸಭೆ ನಡೆಸಿರುವ ಕಾರ್ಯಪಡೆ, ಜನರಿಗೆ ಕುಡಿಯುವ ನೀರು ಒದಗಿಸುವ ಜವಾಬ್ದಾರಿಯನ್ನು ತಹಶೀಲ್ದಾರ್‌ಗೆ ವಹಿಸಿದೆ.

ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿರುವ ಜನರಿಗೆ ಕುಡಿಯುವ ನೀರು ಒದಗಿಸುವ ಬಗ್ಗೆ ಹಾಗೂ ಖಾಸಗಿ ಕೊಳವೆಬಾವಿಗಳ ಬಗ್ಗೆ ಮಾಹಿತಿ ಸಿದ್ಧಪಡಿಸಬೇಕು' ಎಂದು ಜಿಲ್ಲಾಧಿಕಾರಿಯವರು ತಹಶೀಲ್ದಾರ್ ಅವರಿಗೆ ಸೂಚನೆ ನೀಡಿದ್ದಾರೆ.

• ಕೈದಿಗಳಿಗೆ ರಾಜಾತಿಥ್ಯ ಪ್ರಕರಣ ಬೆನ್ನಲ್ಲೇ 3 ಹಂತದ ಕಣ್ಗಾವಲು

ಉಪ ಕಾರಾಗೃಹದಲ್ಲಿ ಅಕ್ರಮ ಚಟುವಟಿಕೆ ತಡೆಗೆ ಕ್ರಮ

• ಉದಯವಾಹಿನಿ ಹುಬ್ಬಳ್ಳಿ

ರಾಜ್ಯದ ವಿವಿಧ ಜೈಲುಗಳಲ್ಲಿ ನಿಷೇಧಿತ ವಸ್ತುಗಳ ಬಳಕೆ ಜತೆಗೆ ಅಕ್ರಮ ಚಟುವಟಿಕೆ ನಡೆಯುತ್ತಿರುವ ಸಂಗತಿಗಳು ನಿರಂತರವಾಗಿ ಬೆಳಕಿಗೆ ಬರುತ್ತಲೇ ಇವೆ.

ಧಾರವಾಡದ ಜೈಲಿನಲ್ಲಿ ಇಂತಹ ಕೃತ್ಯದಲ್ಲಿ ತೊಡಗಿದ್ದ ಜೈಲು ಸಿಬ್ಬಂದಿಯೇ ಅಮಾನತುಗೊಂಡಿದ್ದಾರೆ. ಇವೆಲ್ಲದರ ನಡುವೆ ಇಂತಹ ಚಟುವಟಿಕೆಗಳನ್ನು ಪೂರ್ಣ ಪ್ರಮಾಣದಲ್ಲಿ ತಡೆಗಟ್ಟಲು ಹುಬ್ಬಳ್ಳಿಯ ಉಪ ಕಾರಾಗೃಹದಲ್ಲಿ ಹದ್ದಿನ ಕಣ್ಣಿನ (ಮೂರು ಹಂತದ ತಪಾಸಣೆ) ವ್ಯವಸ್ಥೆ ಮಾಡಲಾಗಿದೆ.

ಇತ್ತೀಚೆಗೆ ಉಪ ಕಾರಾಗೃಹದಲ್ಲಿ ಕೈದಿಗಳಿಗೆ ರಾಜಾತಿಥ್ಯ ಸಿಗುವ ವಿಚಾರ ಭಾರಿ ಸಂಚಲನ ಸೃಷ್ಟಿಸಿತ್ತು. ಇದರ ಬೆನ್ನಲ್ಲೇ

- ಹುಬ್ಬಳ್ಳಿಯ ಉಪ ಕಾರಾಗೃಹದಲ್ಲಿ ಅಕ್ರಮ ಚಟುವಟಿಕೆ ತಡೆಗಟ್ಟಲು ಜೈಲಿನ ಮೇಲೆ ಅಧಿಕಾರಿಗಳ ಹದ್ದಿನ ಕಣ್ಗಾವಲು
- ಉಪ ಕಾರಾಗೃಹದಲ್ಲಿ ಕೈದಿಗಳಿಗೆ ರಾಜಾತಿಥ್ಯ ಪ್ರಕರಣದ ಬೆನ್ನಲ್ಲೇ, ಎಚ್ಚೆತ್ತ ಅಧಿಕಾರಿಗಳಿಂದ 3 ಹಂತದ ತಪಾಸಣೆ
- ಜೈಲಿನಲ್ಲಿ ಕೈದಿಗಳ ಮನಃಪರಿವರ್ತನೆಗೂ ಆದ್ಯತೆ ನೀಡಿದ ಜೈಲಾಧಿಕಾರಿಗಳು

ಎಚ್ಚೆತ್ತ ಅಧಿಕಾರಿಗಳು ಉಪ ಕಾರಾಗೃಹದಲ್ಲಿ ಬಿಗಿ ಕ್ರಮ ವಹಿಸುವ ಜತೆಗೆ ತಪಾಸಣೆ ಕಾರ್ಯವನ್ನು ಚುರುಕುಗೊಳಿಸಿದ್ದಾರೆ. ಈ ಮೊದಲು ಕೈದಿಗಳ ಭೇಟಿಗೆ ಬರುವವರ ವಸ್ತುಗಳನ್ನು ಒಂದೇ ಬಾರಿ ಪರಿಶೀಲನೆ ನಡೆಸಲಾಗುತ್ತಿತ್ತು. ಇದರಿಂದ ಜೈಲಿನಲ್ಲಿ ನಿಷೇಧಿತ ಗಾಂಜಾ , ಸಿಗರೇಟ್, ಮೊಬೈಲ್, ಎಲೆ ಅಡಿಕೆ, ಗುಟ್ಕಾ ಸೇರಿದಂತೆ ಹತ್ತಾರು ಬಗೆಯ ಹೊರಗಡೆಯ ವಸ್ತುಗಳು ಸರಾಗವಾಗಿ ಕಾರಾಗೃಹಕ್ಕೆ ಸಾಗಣೆ ಆಗುತ್ತಿದ್ದವು. ಆದರೀಗ ಮೂರು ಸುತ್ತಿನಲ್ಲಿ ಪರಿಶೀಲನೆ ನಡೆಸುವ ಮೂಲಕ ಅಕ್ರಮ ವಸ್ತುಗಳ ಸಾಗಣೆಗೆ ಬ್ರೇಕ್ ಹಾಕಲು ಮುಂದಾಗಿದೆ.

3 ಹಂತದ ಪರಿಶೀಲನೆ ಹೇಗೆ?: ಕೈದಿಗಳ ಜತೆಗೆ ಅವರ ಭೇಟಿಗೆ ಬರುವವರ ಮೇಲೆ ವಿಶೇಷ ನಿಗಾ ವಹಿಸುತ್ತಿರುವ ಜೈಲಿನ ಸಿಬ್ಬಂದಿ, ಜೈಲಿಗೆ ಯಾರೇ ಬಂದರೂ ಮುಖ್ಯ ಗೇಟ್‌ನಲ್ಲಿ 2-3 ಜನ ಸಿಬ್ಬಂದಿ ಪರಿಶೀಲನೆ ನಡೆಸಿದರೆ, ಒಳ ಹೋಗುವ ಆವರಣದಲ್ಲಿ ಮುಖ್ಯದ್ವಾರದ ಬಳಿ 2-3 ಸಿಬ್ಬಂದಿ ಪುನಃ ಅವರ ಪರಿಶೀಲನೆ ನಡೆಸಿ ಕೈದಿಗಳ ಭೇಟಿಗೆ ಅವಕಾಶ ನೀಡಲಾಗುತ್ತದೆ. ನಂತರ ಕೈದಿಗಳು ಸಂಬಂಧಿಕರಿಂದ ವಸ್ತುಗಳನ್ನು ಪಡೆದು ಜೈಲಿನೊಳಗೆ ಹೋಗುವ ಪೂರ್ವದಲ್ಲಿ ಮತ್ತೊಮ್ಮೆ ಸೂಕ್ತವಾಗಿ ತಪಾಸಣೆ ನಡೆಸಿ ಒಳಗೆ ಬಿಡಲಾಗುತ್ತಿದೆ. ಇದರೊಟ್ಟಿಗೆ ನಿರಂತರ ಕೈದಿಗಳ ಮೇಲೆ ನಿಗಾ ವಹಿಸುವ ಕೆಲಸ ಆಗುತ್ತಿದೆಯಲ್ಲದೇ, ಹಿರಿಯ ಅಧಿಕಾರಿಗಳು ದಿಢೀರ್ ಭೇಟಿ ನೀಡಿ ಹತ್ತಾರು ಆಯಾಮದಲ್ಲಿ ಪರಿಶೀಲನೆ ಕೂಡ ಮಾಡುತ್ತಿದ್ದಾರೆ. ಹೀಗಾಗಿ ಜಾಗೃತರಾಗಿರುವ ಕೈದಿಗಳ ಸಂಬಂಧಿಗಳು ಜೈಲು ಬಳಿ ಅಕ್ರಮ ವಸ್ತುಗಳನ್ನು ತರುವುದನ್ನೇ ನಿಲ್ಲಿಸಿದ್ದಾರೆ ಎಂಬುದು ವಿಶೇಷ.

ಉದಯವಾಹಿನಿ ಚಿತ್ರ

ಹಿರಿಯ ಅಧಿಕಾರಿಗಳ ಮಾರ್ಗದರ್ಶನದಲ್ಲಿ ಉಪ ಕಾರಾಗೃಹದಲ್ಲಿ ಅಕ್ರಮ ಚಟುವಟಿಕೆಗಳಿಗೆ ಕಡಿವಾಣ ಹಾಕಲು ಸಾಕಷ್ಟು ಬಿಗಿ ಕ್ರಮ ಕೈಗೊಳ್ಳಲಾಗಿದೆ. ಒಟ್ಟು ಆವರಣಕ್ಕೆ ಬರುವವರನ್ನು ಮೂರು ಸುತ್ತಿನಲ್ಲಿ ಪರಿಶೀಲನೆ, ತಡೆಗೋಡೆ ಸುತ್ತು ವಾಚ್ ಮಾಡುವುದು, ಸಿಸಿಟಿವಿ ದೃಶ್ಯಾವಳಿ ಮೇಲೆ ನಿರಂತರ ನಿಗಾ ವಹಿಸಲಾಗಿದೆ. ಹೀಗಾಗಿ ನಿಷೇಧಿತ ವಸ್ತುಗಳ ಸಾಗಣೆಗೆ ಬ್ರೇಕ್ ಬಿದ್ದಿದೆ.
-ಶಾಬುದ್ದೀನ್ ಕಾಲೇಖಾನ್,
ಹುಬ್ಬಳ್ಳಿ ಉಪ ಕಾರಾಗೃಹ ಅಧೀಕ್ಷಕ

ಕೈದಿಗಳ ಮನಃಪರಿವರ್ತನೆಗೂ ಆದ್ಯತೆ

ಸದ್ಯ ಹುಬ್ಬಳ್ಳಿಯ ಉಪ ಕಾರಾಗೃಹದಲ್ಲಿರುವ 140ಕ್ಕೂ ಹೆಚ್ಚು ವಿಚಾರಣಾಧೀನ ಕೈದಿಗಳ ಕಾಳಜಿಗೂ ಒತ್ತು ನೀಡಲಾಗಿದೆ. ಕೈದಿಗಳಿಗೆ ಯೋಗ, ಧ್ಯಾನ, ನಾಡಗೀತೆ, ರಾಷ್ಟ್ರಗೀತೆ, ಕೌಶಲ ಅಭಿವೃದ್ಧಿಯಂತಹ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ. ಅಲ್ಲದೇ, ವ್ಯಸನ ಮುಕ್ತಗೊಳಿಸಲು ನುರಿತ ತಜ್ಞರಿಂದ ಕಾರ್ಯಾಗಾರ ಮತ್ತು ವ್ಯಸನದಿಂದ ಮುಕ್ತವಾಗಿರುವ ವ್ಯಕ್ತಿಗಳಿಂದ ಬೋಧನೆ ನಡೆಸಲಾಗುತ್ತಿದೆ. ಹಾಗೆಯೇ ಹೃದಯ, ಚರ್ಮರೋಗ ಸೇರಿದಂತೆ ವಿವಿಧ ಬಗೆಯ ಆರೋಗ್ಯ ಶಿಬಿರಗಳನ್ನೂ ಆಯೋಜಿಸಿ ಅವರ ಆರೋಗ್ಯದ ಬಗ್ಗೆಯೂ ಕಾಳಜಿ ವಹಿಸಲಾಗುತ್ತಿದೆ. ಆ ಮೂಲಕ ಅವರನ್ನು ವಿಶ್ವಾಸಕ್ಕೆ ಪಡೆದು ಅವರ ಮನಃಪರಿವರ್ತನೆಗೆ ಹೆಚ್ಚಿನ ಆದ್ಯತೆ ನೀಡುವ ಕೆಲಸ ಉಪ ಕಾರಾಗೃಹದಲ್ಲಿ ಆಗುತ್ತಿದೆ.

ಸಿಸಿಟಿವಿ ಕಣ್ಗಾವಲು?

ಜೈಲು ಪ್ರವೇಶವನ್ನು ಬಿಗಿಗೊಳಿಸಿದ ಹಿನ್ನೆಲೆಯಲ್ಲಿ ಕೆಲ ಕಿಡಿಗೇಡಿಗಳು ತಡೆಗೋಡೆ ಮಾರ್ಗವಾಗಿ ನಿಷೇಧಿತ ವಸ್ತುಗಳನ್ನು ಎಸೆದಿರುವುದು ಇತ್ತೀಚೆಗೆ ಬೆಳಕಿಗೆ ಬಂದಿತ್ತು. ಈ ಸಂಬಂಧ ಅಶೋಕನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ಕೂಡ ದಾಖಲಾಗಿದೆ. ಈ ಹಿನ್ನೆಲೆಯಲ್ಲಿ ಜೈಲು ಆವರಣದಲ್ಲಿರುವ ಸಿಸಿಟಿವಿ ಕಾವಲು ಹೆಚ್ಚಿಸಲಾಗಿದೆ. ಸದ್ಯ 22 ಸಿಸಿಟಿವಿ ಕ್ಯಾಮೆರಾ ಆ್ಯಕ್ಟಿವ್‌ಗೊಳಿಸಲಾಗಿದೆ. ಅಲ್ಲದೇ, ತಡೆಗೋಡೆ ಸುತ್ತಲೂ ಕಟ್ಟೆಚ್ಚರ ವಹಿಸಲು ಗಸ್ತು ವ್ಯವಸ್ಥೆ ಸುಧಾರಣೆ ಜತೆಗೆ ಕೆಲ ಸ್ಪಾಟ್‌ಗಳನ್ನು ಗುರುತಿಸಿ ನಿರಂತರ ನಿಗಾ ವಹಿಸಲಾಗುತ್ತಿದೆ. ಹೀಗಾಗಿ ಜೈಲು ಹಕ್ಕಿಗಳ ಹಾರಾಟದ ಜತೆಗೆ ಇದಕ್ಕೆ ಕುಮ್ಮಕ್ಕು ನೀಡುತ್ತಿದ್ದವರ ಬಾಲವನ್ನೂ ಕತ್ತರಿಸಿದಂತಾಗಿದೆ.

ಶ್ರೀ ರಾಮನವಮಿ ಜಯಂತಿ ಆಚರಣೆ

• ಉದಯವಾಹಿನಿ ಹಾಸನ

28:3:2026 ರಂದು ಹಾಸನದ ನಗರದ ಹೇಮಾವತಿ ಪ್ರತಿಮೆ ಸಮೀಪದ ಕಾರು ನಿಲ್ದಾಣದಲ್ಲಿ ಶ್ರೀರಾಮ ಸೇನೆವತಿಯಿಂದ ವಿಶೇಷ ಪೂಜೆ ಮಾಡಿ. ಪಾನಕ -ಮಜ್ಜಿಗೆ ವಿತರಣಾ ಕಾರ್ಯಕ್ರಮ ಯಶಸ್ವಿಯಾಗಿ ಜರುಗಿತು.

ಮೊದಲು ಶ್ರೀರಾಮನಿಗೆ ವಿಶೇಷ ಪೂಜೆ ಸಲ್ಲಿಸಿ ಜಯಘೋಷಗಳ ನಡುವೆ ಆಧ್ಯಾತ್ಮಿಕ ವಾತಾವರಣದಿಂದ ಕಂಗೊಳಿಸಿತು. ಬಿಸಿಲಿನ ತೀವ್ರತೆಯನ್ನು ಮನಗಂಡು ಸಾರ್ವಜನಿಕರಿಗೆ ರುಚಿಕರ ಪಾನಕ ಹಾಗೂ ಮಜ್ಜಿಗೆ ವಿತರಣೆ ಮಾಡಲಾಯಿತು. ಕಾರ್ಯಕ್ರಮವು ಕೇವಲ ಧಾರ್ಮಿಕ ಆಚರಣೆಯಷ್ಟೇ ಅಲ್ಲದೆ, ಸಮಾಜದಲ್ಲಿ ಸಹಕಾರ, ಸೇವಾ ಮನೋಭಾವ ಹಾಗೂ ಸಾಂಸ್ಕೃತಿಕ ಏಕತೆಯನ್ನು ಪ್ರತಿಬಿಂಬಿಸುವಂತಿತ್ತು. ಕಾರ್ಯಕ್ರಮದಲ್ಲಿ ಜಿಲ್ಲಾಧ್ಯಕ್ಷರು ಧರ್ಮ ನಾಯಕ್, ಸಾಹಿತಿ ಶ್ರೀಮತಿ ಹೆಚ್. ಎಸ್. ಪ್ರತಿಮಾ ಹಾಸನ್, ಹಾಸನ ಜಿಲ್ಲಾ ಕಾರ್ಯಧ್ಯಕ್ಷರು ಪುನೀತ್ ಕೆಕೆ. ಹಾಸನ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಹೇಶ್ ಬಾಗಲಕೋಟೆ ಹಾಸನ ಜಿಲ್ಲಾ ಗೋರಕ್ಷಕ ವಿನಯ್ ಕೆರೆಹಳ್ಳಿ ಹಾಸನಜಿಲ್ಲಾ ನಗರ ಅಧ್ಯಕ್ಷರು ದರ್ಶನ್ ಅರಕಲಗೂಡು ತಾಲ್ಲೂಕು ಅಧ್ಯಕ್ಷರು ಮಂಜುಕೆ ಹಾಸನ ತಾಲ್ಲೂಕು ಅಧ್ಯಕ್ಷರು ಜಗದೀಶ್ ಸಂಘಟನಾ ಕಾರ್ಯದರ್ಶಿ ಶಶಿ ಇನ್ನೂ ಹಲವರು ಉಪಸ್ಥಿತರಿದ್ದರು.

ಉದಯವಾಹಿನಿ ಚಿತ್ರ

ರಂಗಮಂದಿರಕ್ಕೆ ನಿಲ್ದದ ಹುಡುಕಾಟ

• ಉದಯವಾಹಿನಿ ಚಿಕ್ಕೋಡಿ

ಜಿಲ್ಲಾ ಕೇಂದ್ರವಾಗುವ ನಿಟ್ಟಿನಲ್ಲಿ ಬೆಳೆದು ನಿಂತಿರುವ ಚಿಕ್ಕೋಡಿ ಪಟ್ಟಣದಲ್ಲಿ ರಂಗಮಂದಿರ ಇಲ್ಲದ್ದರಿಂದ ರಂಗಭೂಮಿ ಬಡವಾಗಿದೆ. ನಾಟಕ, ನೃತ್ಯ, ಸಂಗೀತ, ಜಾನಪದ, ಸಾಹಿತ್ಯ, ಸಾಂಸ್ಕೃತಿಕ ಚಟುವಟಿಕೆಗಳ ನಿರ್ವಹಣೆಗೆ ತೊಂದರೆಯಾಗುತ್ತಿದೆ. ಜಿಲ್ಲಾ ಮಟ್ಟದ ರಂಗಮಂದಿರವೂ ಇಲ್ಲ, ತಾಲ್ಲೂಕು ಮಟ್ಟದ ರಂಗಮಂದಿರವೂ ಇಲ್ಲ.

ವೃತ್ತಿರಂಗಭೂಮಿಯ ಕಲಾವಿದರು ಚಿಕ್ಕೋಡಿ ಪಟ್ಟಣಕ್ಕೆ ಆಗಾಗ ಆಗಮಿಸಿ ತಮ್ಮ ಕಲೆ ಪ್ರದರ್ಶನ ಮಾಡುತ್ತಾರೆ. ಹೀಗೆ ಆಗಮಿಸಿದ ವಿವಿಧ ನಾಟಕ ಕಂಪನಿಯ ಕಲಾವಿದರು ಬರಿಗೈಯಲ್ಲಿ ಮರಳಿದ ನಿದರ್ಶನಗಳೇ ಇಲ್ಲ. ವಿವಿಧ ಕಂಪನಿಯ ನಾಟಕಗಳು ನೂರಕ್ಕೂ ಹೆಚ್ಚು ಪ್ರದರ್ಶನ ಕಂಡ ಉದಾಹರಣೆಗಳು ಸಾಕಷ್ಟಿವೆ. ಪಟ್ಟಣದ ಮಧ್ಯ ಭಾಗದಲ್ಲಿ ಖಾಸಗಿ ಜಾಗದಲ್ಲಿ ತಾತ್ಕಾಲಿಕ ಟೆಂಟ್ ಹಾಕಿ ನಾಟಕ ಪ್ರದರ್ಶನ ಮಾಡುವುದು ನಾಟಕ ಕಂಪನಿಗಳಿಗೆ ಹೊರೆಯಾಗುತ್ತಿದೆ. ಅಲ್ಲದೇ, ಸ್ಥಳೀಯವಾಗಿ ನೂರಾರು ಕಲಾವಿದರು ಇದ್ದು, ಇವರು ತಮ್ಮ ಕಲಾಪ್ರದರ್ಶನಕ್ಕೆ ಖಾಸಗಿ ಕಲ್ಯಾಣಮಂಟಪ, ಕಿರಿದಾದ ಸಮುದಾಯ ಭವನ ಆಧರಿಸುವುದು ಅನಿವಾರ್ಯವಾಗಿದೆ. ದುಬಾರಿ ಬಾಡಿಗೆ ಕಟ್ಟುವುದು ಅಸಾಧ್ಯವಾಗಿದೆ. ಸರ್ಕಾರಿ ಸಭಾಂಗಣಗಳು ಇಲ್ಲಿ ತುಂಬಾ ಕಿರಿದಾಗಿವೆ. ಹೀಗಾಗಿ ಕಲಾವಿದರು ತಮ್ಮ ಕಲಾಪ್ರದರ್ಶನಕ್ಕೆ ಸಮರ್ಪಕ ವೇದಿಕೆ ಸಿಗಬೇಕಾದರೆ ರಂಗಮಂದಿರ ನಿರ್ಮಾಣದ ಅವಶ್ಯಕತೆ ತುಂಬಾ ಇದೆ. ದಶಕದ ಹಿಂದೆ ಚಿಕ್ಕೋಡಿ ಪಟ್ಟಣದಲ್ಲಿ ರಂಗಮಂದಿರ ನಿರ್ಮಾಣಕ್ಕಾಗಿ ರೂ.1 ಕೋಟಿ ಅನುದಾನ ಮಂಜೂರಾಗಿತ್ತು. ಸ್ಥಳೀಯ ಜನಪ್ರತಿನಿಧಿಗಳ ನಿರ್ಲಕ್ಷ್ಯದಿಂದ ಚಿಕ್ಕೋಡಿ ಪಟ್ಟಣದಲ್ಲಿ ನಿರ್ಮಾಣವಾಗಬೇಕಾದ ರಂಗಮಂದಿರ ಬೇರೊಂದು ತಾಲ್ಲೂಕಿಗೆ ಸ್ಥಳಾಂತರವಾಯಿತು.

ಪಟ್ಟಣದಲ್ಲಿ ಜಿಲ್ಲಾ ಮಟ್ಟದ ಬಹುತೇಕ ಕಚೇರಿಗಳಿದ್ದು, ಸುತ್ತಮುತ್ತಲಿನ ತಾಲ್ಲೂಕುಗಳಿಗೆ ಚಿಕ್ಕೋಡಿ ಕೇಂದ್ರಸ್ಥಾನವಾಗಿದೆ. ಹೀಗಾಗಿ ಚಿಕ್ಕೋಡಿ ಪಟ್ಟಣದಲ್ಲೊಂದು ಜಿಲ್ಲಾ ಮಟ್ಟದ ರಂಗಮಂದಿರ ನಿರ್ಮಾಣವಾಗಬೇಕಿದೆ.

ಉದಯವಾಹಿನಿ ಚಿತ್ರ

ಹಣವಿದ್ದವರೂ ದೊಡ್ಡವರಲ್ಲ ಗುಣವಿದ್ದವರೂ ದೊಡ್ಡವರು

• ಉದಯವಾಹಿನಿ ಔರಾದ್

ಪಟ್ಟಣದ ಪತ್ರಿಸ್ವಾಮಿ ಪದವಿಪೂರ್ವ ಕಾಲೇಜು ಸಭಾಂಗಣದಲ್ಲಿ ಸಂಭ್ರಮ ಸಾಮಾಜಿಕ ಹಾಗೂ ಸಾಂಸ್ಕೃತಿಕ ಸಂಸ್ಥೆ (ರಿ) ಬೀದರ ವತಿಯಿಂದ ನಡೆದ ಅಮರವಾಡಿ ಸಂಸ್ಕೃತಿ ಚಿಂತನ ಹಾಗೂ ಅಮರವಾಡಿ ರತ್ನ ಪ್ರಶಸ್ತಿ ಪ್ರದಾನ ಸಮಾರಂಭ ಉದ್ಘಾಟಿಸಿ ಮಾತನಾಡಿದರು. ಪ್ರಶಸ್ತಿ ಸ್ವೀಕರಿಸಿದ ಹಿರಿಯರು ಮೌಲ್ಯಗಳನ್ನು ಬದುಕಿನಲ್ಲಿ ಅಳವಡಿಸಿಕೊಂಡು ಇತರರಿಗೆ ಮಾದರಿಯಾಗಿದ್ದಾರೆ.

ಅವರಲ್ಲಿ ಹಣವಿಲ್ಲ ಆದರೆ ಗುಣ ಇಡೀ ಪ್ರಪಂಚವೇ ಮೆಚ್ಚುವಂತಿದೆ. ಯುವಕರು ಬದುಕನ್ನು ಕೇವಲ ಮನರಂಜನೆಗೆ ಸೀಮಿತ ಮಾಡಿಕೊಂಡು ಮೊಬೈಲ್, ಸಾಮಾಜಿಕ ಜಾಲತಾಣ, ವಾಟ್ಸಪ್‌ಗಳಿಗೆ ಮಾರಿ ಹೋಗಿದ್ದು ದುರಂತ. ಫ್ಯಾಶನ್ ಹೆಸರಲ್ಲಿ ಯುವ ಸಮೂಹ ನಮ್ಮ ನಾಡಿನ ಸಂಸ್ಕೃತಿ ಹಾಳು ಮಾಡುತ್ತಿರುವುದು ಸರಿಯಲ್ಲ. ಹರಿದ ಬಟ್ಟೆಗಳ ಜೊತೆ ಬದುಕು ಕಟ್ಟಿಕೊಂಡ ಅಂದಿನ ಹಿರಿಯರು ಮತ್ತು ಉದ್ದೇಶಪೂರ್ವಕವಾಗಿ ಹರಿದ ಬಟ್ಟೆಗಳು ಹಾಕಿಕೊಂಡು ಓಡಾಡುತ್ತಿರುವ ಇಂದಿನ ಯುವಕರ ನಡುವೆ ದೊಡ್ಡ ವ್ಯತ್ಯಾಸ ಇದೆ ಎಂದು ತಿಳಿಯಬೇಕಿದೆ. ಕಾಂಕ್ರೀಟ್ ನಾಡಿಗೆ ಮಹತ್ವ ನೀಡಿ ಕೃಷಿಯನ್ನು ಮರೆತಿದ್ದು ಅಪಾಯಕಾರಿ ನಡೆಯಾಗಿದೆ. ಬಡತನ ಸಿರಿತನದ ವ್ಯತ್ಯಾಸದ ಅರಿಬೇಕು, ಸೌಹಾರ್ದತೆ, ಸಾಮರಸ್ಯದಿಂದ ಮಾತ್ರ ದೇಶ ಪ್ರಗತಿ ಹೊಂದಲು ಸಾಧ್ಯ. ಬಸವಾದಿ ಶರಣರು ನಿರ್ಮಿಸಿದ ಕಾಯಕ ಪ್ರಧಾನ ಸಮಾಜವೇ ಸುಂದರ ಸಮಾಜ. ಇಂದಿನ ಕಾರ್ಯಕ್ರಮ ಅರ್ಥಪೂರ್ಣ ವಿಚಾರಗಳಿಂದ ಕೂಡಿದ್ದು ಹೆತ್ತವರಿಗೆ ನೀಡುವ ಸಾರ್ಥಕ ಗೌರವ ಇದಾಗಿದೆ ಎಂದರು. ಮಾಜಿ ಶಾಸಕ ಗುಂಡಪ್ಪ ವಕೀಲ ಮಾತನಾಡಿ, ಮೌಲ್ಯಗಳಿಂದ ತುಂಬಿರುವ ಅಂದಿನ ಕಳೆದು ಹೋದ ಜೀವನ ಪುನಃ ಸೃಷ್ಟಿಸುವ ಅಗತ್ಯತೆ ಇದೆ. ಸಾಮಾನ್ಯರಂತೆ ಬದುಕಿ ಸಾರ್ಥಕ ಜೀವನ ನಡೆಸಿದ ತನ್ನ ತಂದೆ ಭೀಮಗೊಂಡ ಅವರ ಸ್ಮರಣಾರ್ಥ ಅಮರವಾಡಿ ರತ್ನ ಪ್ರಶಸ್ತಿ ನೀಡುತ್ತಿರುವ ಬಾಲಾಜಿ ಹಾಗೂ ಅವರ ಕುಟುಂಬದ ಕಾರ್ಯ ಅನುಕರಣೀಯ. ನಮ್ಮ ಕಾಲೇಜಿನಲ್ಲಿ ಇಂತಹ ಸ್ಫೂರ್ತಿದಾಯಕ ಕಾರ್ಯಕ್ರಮ ಇಟ್ಟುಕೊಂಡಿದ್ದು ಸಂತಸ ತಂದಿದೆ ಎಂದರು.

ಉದಯವಾಹಿನಿ ಚಿತ್ರ

ಹಿಪ್ಪರಗಿ ಬ್ಯಾರೇಜ್ ಗೇಟ್ ಮುರಿದು ನೀರು ವ್ಯರ್ಥ

• ಉದಯವಾಹಿನಿ ಜಮಖಂಡಿ

ಬೇಸಿಗೆ ಆರಂಭವಾಗುತ್ತಿದ್ದಂತೆಯೇ ಕೃಷ್ಣಾ ನದಿಯ ನೀರಿನ ಮಟ್ಟ ವೇಗವಾಗಿ ಕುಸಿಯುತ್ತಿದ್ದು, ಈ

ದಿನ ಭವಿಷ್ಯ

ರಾಹುಕಾಲ	ಬೆಳಿಗ್ಗೆ	07:30 ರಿಂದ 09:00
ಗುಳಿಕ ಕಾಲ	ಮಧ್ಯಾಹ್ನ	01:30 ರಿಂದ 03:00
ಯಮಗಂಡ ಕಾಲ	ಬೆಳಿಗ್ಗೆ	10:30 ರಿಂದ 12:00

ಮೇಷ ಕೆಲವು ಹಿನ್ನಡೆ ಎದುರಿಸುವ ಸಾಧ್ಯತೆಯಿದೆ. ಧೃತಿಗೆಡಬೇಡಿ ಹಾಗೂ ನಿರೀಕ್ಷಿತ ಫಲಿತಾಂಶ ಪಡೆಯಲು ಕಠಿಣ ಪರಿಶ್ರಮಪಡಿ. ಈ ಹಿನ್ನಡೆಗಳು ನಿಮ್ಮ ಯಶಸ್ಸಿನ ಸೋಪಾನಗಳಾಗಿರಲಿ.

ವೃಷಭ ಹಾಸಿಗೆಯಿಂದ ಎದ್ದನಂತರ ನಿಮ್ಮ ಅಮೂಲ್ಯ ಸಮಯವನ್ನು ನೀವು ವ್ಯರ್ಥ ಮಾಡಿದ್ದೀರಿ ಎಂದು ನಿಮಗೆ ತಿಳಿಯುತ್ತದೆ. ನೀವು ನಿಮ್ಮ ಸಂಗಾತಿಯ ಜೊತೆಗೆ ನಿಮ್ಮ ಜೀವನದ ಅತ್ಯುತ್ತಮ ದಿನವನ್ನು ಕಳೆಯುತ್ತೀರಿ.

ಮಿಥುನ ಈ ರಾಶಿಚಕ್ರದ ಜನರು ಇಂದು ಜನರನ್ನು ಭೇಟಿಯಾಗುವುದಕ್ಕಿಂತ ಒಂಟಿಯಾಗಿ ಸಮಯವನ್ನು ಕಳೆಯಲು ಇಷ್ಟಪಡುತ್ತಾರೆ. ಇಂದು ನಿಮ್ಮ ಉಚಿತ ಸಮಯ ಮನೆಯನ್ನು ಸ್ವಚ್ಛಗೊಳಿಸುವಲ್ಲಿ ಕಳೆಯಬಹುದು.

ಕರ್ಕಾಟಕ ನಿಮ್ಮ ಹತ್ತಿರದ ಜನರು ವೈಯಕ್ತಿಕ ಮಟ್ಟದಲ್ಲಿ ನಿಮಗೆ ಸಮಸ್ಯೆಗಳನ್ನು ಸೃಷ್ಟಿಸುತ್ತಾರೆ. ಸ್ಪಷ್ಟವಾಗಿ ಅರ್ಥಮಾಡಿಕೊಳ್ಳುವ ಮೂಲಕ ಮಾತ್ರ ನೀವು ನಿಮ್ಮ ಪತ್ನಿಗೆ ಭಾವನಾತ್ಮಕ ಬೆಂಬಲ ನೀಡಬಹುದು.

ಸಿಂಹ ಒಟ್ಟಾರೆ ಆರೋಗ್ಯ ಉತ್ತಮವಾಗಿದ್ದರೂ ಪ್ರಯಾಣ ಒತ್ತಡಮಯವೂ ಮತ್ತು ಕಷ್ಟಕರವೂ ಆಗಿರುತ್ತದೆ. ಇಂದು ಹಣದ ಆಗಮನವು ನಿಮ್ಮನ್ನು ಯಾವುದೇ ಸಮಸ್ಯೆಗಳಿಂದ ಮುಕ್ತಗೊಳಿಸಬಹುದು.

ಕನ್ಯಾ ನಿಮ್ಮ ಹಾಸ್ಯಪ್ರಜ್ಞೆ ಇನ್ನೊಬ್ಬರಿಗೆ ಸಂತೋಷ ಹೊಂದುವುದರಲ್ಲದೇ ನಮ್ಮೊಳಗೇ ಇದೆಯೆಂದು ಅರ್ಥ ಮಾಡಿಸುವುದರಿಂದ ಅವರು ಸ್ವತಃ ಈ ಕೌಶಲ್ಯವನ್ನು ಹೊಂದಲು ಪ್ರೋತ್ಸಾಹಿಸಿದಂತಾಗುತ್ತದೆ.

ತುಲಾ ನಿಮ್ಮ ಮುಂಗೋಪ ನಿಮ್ಮನ್ನು ಹೆಚ್ಚು ತೊಂದರೆಯಲ್ಲಿ ಸಿಲುಕಿಸಬಹುದು. ಪ್ರಾಚೀನ ವಸ್ತುಗಳು ಮತ್ತು ಆಭರಣಗಳಲ್ಲಿ ಹೂಡಿಕೆ ಲಾಭ ಮತ್ತು ಸಮೃದ್ಧಿ ತರುತ್ತದೆ. ಸಂಬಂಧಿಗಳು ಅದ್ಭುತ ಸಂಜೆಗಾಗಿ ಬರುತ್ತಾರೆ.

ವೃಶ್ಚಿಕ ಸ್ನೇಹಿತರು ನಿಮ್ಮ ವೈಯಕ್ತಿಕ ಜೀವನದ ಬಗ್ಗೆ ನಿಮಗೆ ಉತ್ತಮ ಸಲಹೆ ನೀಡುತ್ತಾರೆ. ನಿಮ್ಮ ಶಕ್ತಿ ಮತ್ತು ಉತ್ಸಾಹವನ್ನು ಮರಳಿ ತರುವ ಒಂದು ಆನಂದಮಯ ಪ್ರವಾಸಕ್ಕೆ ಹೋಗುವ ಸಾಧ್ಯತೆಯಿದೆ.

ಧನಸ್ಸು ನೀವು ಪ್ರಯಾಣಿಸಲು ತುಂಬಾ ದುರ್ಬಲರಾಗಿದ್ದರಿಂದ ದೀರ್ಘ ಪ್ರಯಾಣವನ್ನು ತಪ್ಪಿಸಲು ಪ್ರಯತ್ನಿಸಿ. ನೀವು ಹಣಕಾಸಿನ ಲಾಭ ತರುವ ಅದ್ಭುತವಾದ ಹೊಸ ಕಲ್ಪನೆಗಳನ್ನು ಪ್ರಸ್ತುತಪಡಿಸುತ್ತೀರಿ.

ಮಕರ ನೀವು ಮಾಡುವ ಕೆಲವು ದೈಹಿಕ ಬದಲಾವಣೆಗಳು ಖಂಡಿತವಾಗಿಯೂ ನಿಮ್ಮ ನೋಟವನ್ನು ವರ್ಧಿಸುತ್ತವೆ. ಯೋಜಿತವಲ್ಲದ ಮೂಲಗಳಿಂದ ಹಣದ ಲಾಭ ನಿಮ್ಮ ದಿನವನ್ನು ಬೆಳಗಿಸುತ್ತದೆ.

ಕುಂಭ ಸ್ನೇಹ ಕಳೆದುಕೊಳ್ಳುವ ಸಾಧ್ಯತೆಗಳು ಇಂದು ಹೆಚ್ಚಾಗಿರುವುದರಿಂದ ಎಚ್ಚರಿಕೆಯಿಂದಿರಿ. ನೀವು ನಿರಾಸೆ ಅನುಭವಿಸುತ್ತೀರಿ ? ಅದೇಕೆಂದರೆ ನೀವು ಬಯಸುತ್ತಿದ್ದ ಗುರುತಿಸುವಿಕೆ , ಪ್ರತಿಫಲಗಳು ಮುಂದೂಡಲ್ಪಡುತ್ತವೆ.

ಮೀನ ನಿಮ್ಮ ಕೆಲಸವನ್ನು ನೋಡುತ್ತಾ ಇಂದು ನಿಮ್ಮ ಪ್ರಗತಿಯೂ ಸಹ ಸಾಧ್ಯವಿದೆ. ಉದ್ಯಮಿಗಳು ಇಂದು ಅನುಭವಿ ಜನರಿಂದ ವ್ಯಾಪಾರವನ್ನು ಮುಂದುವರಿಸುವ ಸಲಹೆಯನ್ನು ತೆಗೆದುಕೊಳ್ಳಬಹುದು.

ಅನ್ಯ ಜಿಲ್ಲೆಗೆ ಕುಡಿಯುವ ನೀರು ಸರಬರಾಜು ಆಗುತ್ತಿದ್ದರೂ ಹುಕ್ಕೇರಿ ತಾಲ್ಲೂಕು ಸಂಪೂರ್ಣ ಜಲ ಸಮಸ್ಯೆಯಿಂದ ಮುಕ್ತವಾಗಿಲ್ಲ

ಡ್ಯಾಂನಲ್ಲಿ ನೀರು ಕಮ್ಮಿ ಇದೆ ಎಚ್ಚರ ! ಖಾಲಿಯಾದ ಹಿಡಕಲ್ ಜಲಾಶಯ

ಉದಯವಾಹಿನಿ ಚಿತ್ರ

• ಉದಯವಾಹಿನಿ ಹುಕ್ಕೇರಿ

ಹುಕ್ಕೇರಿ ತಾಲ್ಲೂಕಿನಲ್ಲಿ ಎರಡು ಜಲಾಶಯಗಳಿದ್ದರೂ ಪ್ರತಿ ವರ್ಷ ಬೇಸಿಗೆ ಪ್ರಾರಂಭವಾದರೆ ಕುಡಿಯುವ ನೀರಿನ ಸಮಸ್ಯೆ ಕಾಡುವುದು ಸಾಮಾನ್ಯ ಎಂಬಂತಾಗಿದೆ. ಬೃಹತ್ ಹಿಡಕಲ್ ಜಲಾಶಯದಿಂದ ಜಿಲ್ಲೆ ಹಾಗೂ ಅನ್ಯ ಜಿಲ್ಲೆಗೆ ಕುಡಿಯುವ ನೀರು ಸರಬರಾಜು ಆಗುತ್ತಿದ್ದರೂ ಹುಕ್ಕೇರಿ ತಾಲ್ಲೂಕು ಸಂಪೂರ್ಣ ಜಲ ಸಮಸ್ಯೆಯಿಂದ ಮುಕ್ತವಾಗಿಲ್ಲ.

ತಾಲ್ಲೂಕಿನ ಹಿಡಕಲ್ ಜಲಾಶಯ (ರಾಜಾ ಲಖಮಗೌಡ ಅಣೆಕಟ್ಟು) ನೀರಿನ ಮಟ್ಟ ಈಗಾಗಲೇ ಕುಸಿತ ಕಂಡಿದ್ದು, ಮುಂದೆ ಕುಡಿಯುವ ನೀರು ಮತ್ತು ಕೃಷಿಗೆ ಆತಂಕ ಎದುರಾಗುವ ಸಂಭವವಿದೆ. 51.16 ಟಿಎಂಸಿ ನೀರಿನ ಸಾಮರ್ಥ್ಯದ ಜಲಾಶಯದಲ್ಲಿ ನೀರು ಹಂತ ಹಂತವಾಗಿ ಬರಿದಾಗುತ್ತಿದ್ದು, ಕೆಳಹಂತದ ಗ್ರಾಮಗಳಲ್ಲಿ ನೀರಿನ ಅಭಾವ ತಲೆದೋರುವ ಸಂಭವ ಇದೆ. ತಾಲ್ಲೂಕಿನ ಜತೆಗೆ ಬೆಳಗಾವಿ ನಗರ, ಗೋಕಾಕ, ಮೂಡಲಗಿ, ಬಾಗಲಕೋಟೆ, ಮುಧೋಳ ಸೇರಿದಂತೆ ಹಲವು ಪಟ್ಟಣ ಮತ್ತು ಗ್ರಾಮಗಳಿಗೆ ಕುಡಿಯುವ ನೀರಿನ ಸೌಲಭ್ಯ ಒದಗಿಸುವ ಹಿಡಕಲ್ ಜಲಾಶಯ ಕಳೆದ ವರ್ಷಕ್ಕಿಂತ ಈ ವರ್ಷ ನೀರಿನ ಮಟ್ಟದಲ್ಲಿ ಭಾರಿ ಕುಸಿತ ಕಂಡಿದೆ.

ಏಪ್ರಿಲ್ ಅಂತ್ಯಕ್ಕೆ ಕೊರತೆ ಸಾಧ್ಯತೆ: ಬೇಸಿಗೆ ಆರಂಭದಲ್ಲಿಯೇ ತಾಲ್ಲೂಕಿನ ಕೆಲ ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಆರಂಭವಾಗಿದೆ. ಸಮಸ್ಯೆ ತಲೆದೋರಬಹುದಾದ ಗ್ರಾಮಗಳಿಗೆ ಟ್ಯಾಂಕರ್ ಮೂಲಕ ನೀರು ಒದಗಿಸಲು ಜಿಲ್ಲಾಡಳಿತ ಸೂಚಿಸಿದೆ. ಆದರೆ, ಏಪ್ರಿಲ್ ಕೊನೆಯ ವಾರದಿಂದ ಕುಡಿಯುವ ನೀರಿನ ಸಮಸ್ಯೆ ಕಾಡಬಹುದು ಎಂದು ಅಂದಾಜಿಸಲಾಗಿದೆ.

ಕ್ಷೇತ್ರದಲ್ಲಿ ಹುಲ್ಲೋಳಿ, ಹುಲ್ಲೋಳಿ ಹಟ್ಟಿ, ಯಾದಗೂಡ, ಹರಗಾಪುರ, ಹರಾಗಾಪುರಘಡ ಸೇರಿದಂತೆ ಕೆಲ ಗ್ರಾಮಗಳಿಗೆ ಕುಡಿಯುವ ನೀರು ಕೊರತೆಯಾಗದಂತೆ ಟ್ಯಾಂಕರ್ ಮೂಲಕ ನೀರು ಪೂರೈಕೆಗೆ ತಾಲೂಕಾಡಳಿತಕ್ಕೆ ಸೂಚಿಸಲಾಗಿದೆ. -ನಿಖಿಲ ಕತ್ತಿ, ಶಾಸಕರು, ಹುಕ್ಕೇರಿ

ಚಸಾರ್ವಜನಿಕರು ನೀರು ಮಿತವಾಗಿ ಬಳಕೆ ಮಾಡುವ ಮೂಲಕ ಬೇಸಿಗೆ ಪರಿಸ್ಥಿತಿ ನಿಭಾಯಿಸಲು ಕೈಜೋಡಿಸಬೇಕು. -ರಾಜಶೇಖರ ಪಾಟೀಲ, ಸಹಾಯಕ ನಿರ್ದೇಶಕರು ನೀರಾವರಿ ಇಲಾಖೆ, ಹಿಡಕಲ್ ಡ್ಯಾಂ

ನೀರು ಹಂಚಿಕೆಯೇ ಸವಾಲು

ಬೇಸಿಗೆಯಲ್ಲಿ ಬೆಳೆ ರಕ್ಷಿಸಿಕೊಳ್ಳುವ ಉದ್ದೇಶದಿಂದ ಕಾಲುವೆಗೆ ನೀರು ಹರಿಸಲು ರೈತರು ಆಗ್ರಹಿಸುತ್ತಿದ್ದಾರೆ. ಅವರ ಬೇಡಿಕೆ ನ್ಯಾಯಯುತವಾದರೂ ಜಲಾಶಯದಲ್ಲಿ ನೀರಿನ ಸಂಗ್ರಹವನ್ನೂ ಪರಿಗಣಿಸಬೇಕಾಗುತ್ತದೆ. ಜುಲೈ ಅಂತ್ಯದವರೆಗೂ ಜನ-ಜಾನುವಾರುಗಳಿಗಾಗಿ ಸಂಗ್ರಹಿತ ನೀರು ಕಾಪಾಡಿಕೊಳ್ಳುವುದೂ ಅತ್ಯವಶ್ಯ. ಕುಡಿಯುವ ನೀರು, ಬೇಸಿಗೆ ಬೆಳೆ ಸಂರಕ್ಷಿಸಿಕೊಳ್ಳಲು ಮತ್ತು ಜಲಚರಗಳ ಉಳಿಯುವಿಕೆಗಾಗಿ ನೀರು ಹಂಚುವ ದೊಡ್ಡ ಜವಾಬ್ದಾರಿ ಪ್ರಾದೇಶಿಕ ಆಯುಕ್ತರ ಹೆಗಲಿಗೆ ಬಿದ್ದಿದೆ.

- ಹುಕ್ಕೇರಿ ತಾಲ್ಲೂಕಿಗೆ ಏಪ್ರಿಲ್ ಅಂತ್ಯಕ್ಕೆ ಸಮಸ್ಯೆ ಸಾಧ್ಯತೆ
- ಬೆಳಗಾವಿ ನಗರ, ಗೋಕಾಕ, ಮೂಡಲಗಿ, ಬಾಗಲಕೋಟೆ, ಮುಧೋಳ ಸೇರಿದಂತೆ ಹಲವು ಪಟ್ಟಣ ಮತ್ತು ಗ್ರಾಮಗಳಿಗೆ ಕುಡಿಯುವ ನೀರಿಗೆ ಆತಂಕ
- ಬೆಳಗಾವಿ ನಗರ, ಗೋಕಾಕ, ಮೂಡಲಗಿ, ಬಾಗಲಕೋಟೆ, ಮುಧೋಳ ಸೇರಿದಂತೆ ಹಲವು ಪಟ್ಟಣ ಮತ್ತು ಗ್ರಾಮಗಳಿಗೆ ಕುಡಿಯುವ ನೀರಿನ ಸೌಲಭ್ಯ



ಸಾರ್ವಜನಿಕ ಜವಾಬ್ದಾರಿ ನಿಭಾಯಿಸಲಿ

ಬೇಸಿಗೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ತಲೆದೋರದಂತೆ ಸಾರ್ವಜನಿಕರು ಸಹಕರಿಸಬೇಕು. ಡ್ಯಾಂನಿಂದ ಪೂರೈಕೆಯಾಗುವ ನೀರನ್ನು ಕುಡಿಯಲು ಮಾತ್ರ ಬಳಸಬೇಕು. ನಲ್ಲಿಯಿಂದ ನೀರು ಕೇಡು ಮಾಡುವುದು, ವ್ಯರ್ಥವಾಗಿ ಹರಿಬಿಡದಂತೆ ನೋಡಿಕೊಳ್ಳಬೇಕು. ಬಳಕೆ ಕಾರ್ಯಕ್ಕೆ ಹಿತಮಿತವಾಗಿ ನೀರು ಬಳಸಬೇಕು. ನೀರು ಬಳಕೆಯನ್ನು ಸಾಮಾಜಿಕ ಹೊಣೆಗಾರಿಕೆ ಎಂಬಂತೆ ನಿಭಾಯಿಸಿದರೆ ಬೇಸಿಗೆಯಲ್ಲಿ ನೀರಿನ ಸಮಸ್ಯೆ ಕಡಿಮೆ ಆಗಬಹುದು ಎನ್ನುವುದು ಅಧಿಕಾರಿಗಳ ಕಳಕಳಿ.

4.907 ಟಿಎಂಸಿ ನೀರು ಕುಸಿತ

51.16 ಟಿಎಂಸಿ ಸಾಮರ್ಥ್ಯದ ಹಿಡಕಲ್ ಜಲಾಶಯದಲ್ಲಿ ಹೂಳು ಮತ್ತು ಜಲಚರಗಳಿಗೆ ಕಾಯ್ದಿಟ್ಟ ನೀರಿನ ಪ್ರಮಾಣ 2.02 ಟಿಎಂಸಿ ಪರಿಗಣಿಸಿದಲ್ಲಿ 48.980 ಟಿಎಂಸಿ ನೀರಿನ ಸಂಗ್ರಹ ಮಾತ್ರ ಸಾಧ್ಯವಿದೆ. ಕಳೆದ ವರ್ಷ ಈ ಸಮಯದಲ್ಲಿ 25.899 ಟಿಎಂಸಿ ನೀರಿನ ಸಂಗ್ರಹ ಇತ್ತು. ಆದರೆ, ಈ ಬಾರಿ ಕೇವಲ 20.992 ಟಿ.ಎಂ.ಸಿ ನೀರಿದೆ. ಅಂದರೆ ಕಳೆದ ವರ್ಷಕ್ಕಿಂತ 4.907 ಟಿಎಂಸಿ ನೀರು ಕಡಿಮೆ ಇರುವುದು ಕಂಡುಬಂದಿದೆ. ಅದರಲ್ಲಿ ಅಂದಾಜು 9 ಟಿಎಂಸಿ ನೀರು ಕುಡಿಯಲು ಅಗತ್ಯಕ್ಕೇ ಬೇಕಾಗುತ್ತದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮೂಲಭೂತ ಸೌಕರ್ಯ ಒದಗಿಸಲು ಮನವಿ

• ಉದಯವಾಹಿನಿ ನಿಂಬರ್ಗಾ

ಗ್ರಾಮದ ಡಾ.ಬಾಬು ಜಗಜೀವನ ರಾಮ್ ನಗರಕ್ಕೆ ಮೂಲಭೂತ ಸೌಕರ್ಯ ಒದಗಿಸುವಂತೆ ಆಗ್ರಹಿಸಿ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ ಬಾಬು ಜಗಜೀವನ ರಾಮ್ ನಗರ ನಿವಾಸಿಗಳಿಂದ ಮನವಿ ಪತ್ರ ಸಲ್ಲಿಸಲಾಯಿತು.

ಮನವಿ ಪತ್ರ ಸಲ್ಲಿಸಿ ಮಾತನಾಡಿದ ಕಾರ್ಮಿಕ ಸಂಘದ ಅಧ್ಯಕ್ಷರಾದ ಯಲ್ಲಪ್ಪ ಎಸ್ ಕಟ್ಟಿಮನಿ ಅವರು, ಡಾ.ಬಾಬು ಜಗಜೀವನ ರಾಮ್ ನಗರದಲ್ಲಿ ಮೂಲಭೂತ ಸೌಕರ್ಯಗಳಾದ ಕುಡಿಯುವ ನೀರಿನ ವ್ಯವಸ್ಥೆ, ಒಳ ಚರಂಡಿ ವ್ಯವಸ್ಥೆ ಇಲ್ಲದೆ ರಸ್ತೆ ಮೇಲೆ ಕಸ ಕಡ್ಡಿ ಬಿದ್ದು ಜಗಜೀವನ್ ರಾಮ್ ನಗರ ಸಂಪೂರ್ಣವಾಗಿ ಗಬ್ಬೆದ್ದು ನಾರುತ್ತಿದೆ ಎಂದು ಯಲ್ಲಪ್ಪ ಕಟ್ಟಿಮನಿ ಅವರು ಆರೋಪಿಸಿದರು.

ಅದರ ಜೊತೆಗೆ ಡಾ.ಬಾಬು ಜಗಜೀವನ್ ರಾಮ್ ರವರ 119 ನೇ ಜಯಂತ್ಯೋತ್ಸವಕ್ಕೆ ಧನ ಸಹಾಯ ಮಾಡಬೇಕು ಎಂದು ಗ್ರಾಮ ಪಂಚಾಯತ್ ಅಧಿಕಾರಿಗಳಲ್ಲಿ ಮನವಿ ಮಾಡಿಕೊಂಡರು.

ಉದಯವಾಹಿನಿ ಚಿತ್ರ

ಮುಂಬರುವ ದಿನಗಳಲ್ಲಿ ಮೂಲಭೂತ ಸೌಕರ್ಯಗಳಾದ ಕುಡಿಯುವ ನೀರಿನ ವ್ಯವಸ್ಥೆ ಹಾಗೂ ಒಳ ಚರಂಡಿ ಸೇರಿದಂತೆ ಮುಂತಾದವುಗಳನ್ನು ಒದಗಿಸದಿದ್ದರೆ ಗ್ರಾಮ ಪಂಚಾಯತ್ ಗೆ ಬೀಗ ಜಡಿದು ಬೃಹತ್ ಪ್ರತಿಭಟನೆ ಮಾಡಲಾಗುವುದು ಎಂದು ಎಚ್ಚರಿಸಿದರು.

ಈ ಸಂದರ್ಭದಲ್ಲಿ ಧರ್ಮರಾಯ ಕಟ್ಟಿಮನಿ, ಆಕಾಶ್ ದೊಡ್ಡಮನಿ, ವಿಠ್ಠಲ್ ಕಟ್ಟಿಮನಿ, ಪ್ರಜ್ವಲ್ ಜವಳಿ, ಸಚಿನ್ ಕಟ್ಟಿಮನಿ ಹಾಗೂ ಗಂಗಾರಾಮ ಕಟ್ಟಿಮನಿ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.

ಜ್ಞಾನವಂತರನ್ನು ಸಮಾಜ ಹರಿಸಿ ಮೆರೆಸುತ್ತದೆ : ನ್ಯಾ. ಶಶಿಧರ ಯರನಾಳ

• ಉದಯವಾಹಿನಿ ಬಸವನಬಾಗೇವಾಡಿ

ಜ್ಞಾನವನ್ನು ಮೀರಿಸುವುದು ಜಗತ್ತಿನಲ್ಲಿ ಬೇರೆ ಯಾವುದೂ ಇಲ್ಲ, ಹೀಗಾಗಿ ಸಂಪತ್ತಿಗಿಂತ ಜ್ಞಾನಕ್ಕೆ ಹೆಚ್ಚು ಮಹತ್ವ ಕೊಡುವಂತೆ ಪಟ್ಟಣದ ನ್ಯಾಯವಾದಿ ಶಶಿಧರ ಎ ಯರನಾಳ ಅಭಿಪ್ರಾಯಪಟ್ಟರು.

ತಾಲ್ಲೂಕಿನ ಮುತ್ತಗಿ ಗ್ರಾಮದ ಲಿಂ. ರುದ್ರಮುನಿ ಶಿವಾಚಾರ್ಯ 88ನೇ ಪುಣ್ಯಾರಾಧನೆಯ ಜಾತ್ರಾ ಮಹೋತ್ಸವ ನಿಮಿತ್ಯ ವೀರ ರುದ್ರಮನಿ ಶಿವಾಚಾರ್ಯ ಸ್ವಾಮೀಜಿಯವರ ತುಲಾಭಾರ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದ ಅವರು, ಜ್ಞಾನ ವೃದ್ಧಿ ಸಂದೇಶ ನೀಡುವುದೇ ತುಲಾಭಾರದ ಉದ್ದೇಶವಾಗಿದೆ. ಸಮಾಜದ ಅಭಿವೃದ್ಧಿಗೆ ತುಲಾಭಾರ ಸಹಕಾರಿಯಾಗಿದೆ.

ಜ್ಞಾನದಿಂದ ಮಾತ್ರವೇ ಸಂಪತ್ತು ವೃದ್ಧಿಯಾಗಲು ಸಾಧ್ಯ. ಮಕ್ಕಳಿಗೆ ಸಂಪತ್ತಿಗಿಂತ ಜ್ಞಾನದ ಮಹತ್ವ ತಿಳಿಸುವಂತೆ ಪಾಲಕರಿಗೆ ಕರೆ ನೀಡಿದ ಅವರು. ಪಾಲಕರ ಕಷ್ಟವನ್ನರಿತು ಸಮಾಜದಲ್ಲಿ ಮಾದರಿ

ಉದಯವಾಹಿನಿ ಚಿತ್ರ

ಮಕ್ಕಳ ಸಂಖ್ಯೆ ಕ್ಷೀಣಿಸುತ್ತಿರುವುದು ನಿಜಕ್ಕೂ ದುರಂತದ ವಿಷಯ. ಸಮಾಜ ಸುಧಾರಣೆಗೆ ಸಾಧು-ಸಂತರ ತ್ಯಾಗ ಜೀವನ ನಿಜಕ್ಕೂ ಶ್ಲಾಘನೀಯವಾದುದು. ಭಕ್ತಿ, ಜ್ಞಾನ ಹಾಗೂ ದಾನದಿಂದ ಮಾತ್ರ ಮಠಗಳು ಅಭಿವೃದ್ಧಿ ಹೊಂದಲು ಸಾಧ್ಯ ಎಂದರು.

ತಾಳಿಕೋಟೆಯ ಶ್ರೀ ಮಹಾಂತ ದೇವರು ಕಲಬುರ್ಗಿಯ ಶರಣಬಸವೇಶ್ವರ ಪುರಾಣ ನಡೆಸಿಕೊಟ್ಟರು. ಕೊಡೆಕಲ್ ಈರಸಂಗಯ್ಯ ಶ್ರೀಗಳು, ಮುತ್ತತ್ತಿಯ ಶ್ರೀಗಳು, ಭಾಜಪ ಮುಖಂಡ ಜಗದೀಶ ಸುನಗದ, ಬಾಲರಾಜ ರೆಡ್ಡಿ, ನ್ಯಾ. ರಮೇಶ ವಗ್ಗರ ಮಾತನಾಡಿದರು. ವೈ.ಕೆ ಪತ್ತಾರ ನಿರೂಪಿಸಿದರು.

ಸಾಕಷ್ಟು ಸಂಪತ್ತು ಮಾಡಿದವರನ್ನು ಸಮಾಜ ಗೌರವಿಸುವುದಿಲ್ಲ ಜ್ಞಾನ ಉಳ್ಳವರನ್ನು ಮಾತ್ರ ಸಮಾಜ ಹರಿಸಿ ಮೆರೆಸುತ್ತದೆ. -ಶಶಿಧರ ಯರನಾಳ, ನ್ಯಾಯವಾದಿಗಳು ಬಸವನಬಾಗೇವಾಡಿ.

ಸಂಪತ್ತಿಗಿಂತ ಜ್ಞಾನಕ್ಕೆ ಹೆಚ್ಚು ಮಹತ್ವ ಕೊಡುವಂತೆ ಅಭಿಪ್ರಾಯ

ವೀರರುದ್ರಮನಿ ಶಿವಾಚಾರ್ಯ ಸ್ವಾಮೀಜಿ ಅವರಿಗೆ ಮಠಪತಿ ಪರಿವಾರದವರು ಬೆಲ್ಲದಿಂದ ತುಲಾಭಾರ ನಡೆಸಿದರು. ಲೀಲಾವು ಜರುಗಿದವು. ಅನ್ನಪ್ರಸಾದ ವ್ಯವಸ್ಥೆ ಮಾಡಲಾಗಿತ್ತು.

ಇಂದು ಸಂಜೆ ಶ್ರೀ ರುದ್ರ ಸ್ವಾಮೀಜಿ ಯುತ್ ಫೌಂಡೇಶನ್ ವತಿಯಿಂದ ಹಾಸ್ಯ ಕಲಾವಿದೆ ಇಂದುಮತಿ ಸಾಲಿಮಠ ತಂಡದಿಂದ ಹರಟೆ ಕಾರ್ಯಕ್ರಮ ಜರುಗಲಿದೆ ಎಂದು ಶ್ರೀ ಮಠ ಪ್ರಕಟಣೆಯಲ್ಲಿ ತಿಳಿಸಿದೆ.

ಶ್ರೀ ಅಗ್ನಿಬನ್ನಿರಾಯ ಜಯಂತಿ ಆಚರಣೆ

• ಉದಯವಾಹಿನಿ ಚಿತ್ರದುರ್ಗ

ವಿಶ್ವವಿಖ್ಯಾತ ಬೆಂಗಳೂರಿನ ಲಾಲ್‌ಬಾಗ್ ಉದ್ಯಾನವನವನ್ನು ಸಸ್ಯಕಾಶಿಯಾಗಿ ರೂಪಿಸುವಲ್ಲಿ ಹಾಗೂ ಐತಿಹಾಸಿಕ ಕರಗ ಉತ್ಸವವನ್ನು ಉಳಿಸಿ ಬೆಳೆಸುವಲ್ಲಿ ತಿಗಳ ಸಮುದಾಯದ ಕೊಡುಗೆ ಅನನ್ಯವಾಗಿದೆ ಎಂದು ಚಿತ್ರದುರ್ಗ ಸರ್ಕಾರಿ ಕಲಾ ಕಾಲೇಜು (ಸ್ವಾಯತ್ತ) ಕನ್ನಡ ಉಪನ್ಯಾಸಕ ಡಾ.ಜಿ.ಎನ್.ಯಶೋಧರ ಅಭಿಪ್ರಾಯಪಟ್ಟರು. ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ನಗರಸಭೆ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ್ದ ಶ್ರೀ ಅಗ್ನಿಬನ್ನಿರಾಯ ಜಯಂತಿಯಲ್ಲಿ ಉಪನ್ಯಾಸ ನೀಡಿದರು.

ಅಗ್ನಿ ಪುರಾಣದ ಪ್ರಕಾರ, ಶಂಭು ಮಹರ್ಷಿಗಳು ನಡೆಸಿದ ಯಜ್ಞ ಕುಂಡದಿಂದ ಶಿವನ ಮೂರನೇ ಕಣ್ಣಿನ ಹನಿಯ ಮೂಲಕ ಜನ್ಮತಾಳಿದ ಅಗ್ನಿಬನ್ನಿರಾಯ ಈ ಸಮುದಾಯದ ಮೂಲ ಪುರುಷ. ತಮಿಳುನಾಡಿನ ಚೋಳರ ಕಾಲದಲ್ಲಿ ಸೈನಿಕರಾಗಿ ಸೇವೆ ಸಲ್ಲಿಸುತ್ತಿದ್ದ ಈ ಜನಾಂಗಕ್ಕೆ ''ತಿಗಳ''' ಎಂಬ ಹೆಸರು ಬರಲು ಅಗ್ನಿ (ತಿ) ಮತ್ತು ಸಮೂಹ (ಗಳ) ಎಂಬ ಅರ್ಥವಿದೆ. ಚಂದ್ರನನ್ನು ''ತಿಂಗಳು' ಎನ್ನುವಂತೆ ಇವರನ್ನು ''ತಿಂಗಳರು'' ಎಂದು ಕರೆಯಲಾಗುತ್ತಿತ್ತು, ಅದು ಕಾಲಕ್ರಮೇಣ ''ತಿಗಳ'' ಎಂದಾಗಿದೆ ಎಂದು ತಿಳಿಸಿದರು. 18ನೇ ಶತಮಾನದಲ್ಲಿ ಹೈದರ್ ಅಲಿ ಆರ್ಕಾಟ್ ಪ್ರಾಂತ್ಯ ಗೆದ್ದಾಗ, ಅಲ್ಲಿನ ತಿಗಳ ಸಮುದಾಯದವರ ಕೃಷಿ ಮತ್ತು ತೋಟಗಾರಿಕಾ ನೈಪುಣ್ಯತೆ ಕಂಡು ಬೆರಗಾಗಿ ಅವರನ್ನು ಮೈಸೂರಿಗೆ ಕರೆತಂದನು. ಇಂದು ನಾವು ಕಾಣುವ 60 ಎಕರೆ

ಉದಯವಾಹಿನಿ ಚಿತ್ರ

ವಿಸ್ತೀರ್ಣದ ಲಾಲ್‌ಬಾಗ್ ಸಸ್ಯಕಾಶಿಯನ್ನು ನಿರ್ಮಿಸಿದ ಕೀರ್ತಿ ಈ ಸಮುದಾಯಕ್ಕೆ ಸಲ್ಲುತ್ತದೆ.

ಇದರೊಂದಿಗೆ ಬೆಂಗಳೂರಿನಲ್ಲಿ ಕಳೆದ ಐದು ಶತಮಾನಗಳಿಂದ ನಡೆಯುತ್ತಿರುವ ಐತಿಹಾಸಿಕ ಕರಗ ಉತ್ಸವವು ತಿಗಳ ಸಮುದಾಯದ ಸಾಂಸ್ಕೃತಿಕ ಅಸ್ಮಿತೆಯಾಗಿದೆ ಎಂದು ಹೇಳಿದರು. ಸಮುದಾಯದ ಶೈಕ್ಷಣಿಕ ಅಭಿವೃದ್ಧಿಗಾಗಿ ತುಮಕೂರು ವಿಶ್ವವಿದ್ಯಾಲಯದಲ್ಲಿ ಅಧ್ಯಯನ ಪೀಠ ಹಾಗೂ ಸರ್ಕಾರದ ವತಿಯಿಂದ

ಇರಾನ್ ಮೇಲಿನ ಯುದ್ಧವನ್ನು ಖಂಡಿಸಿರುವ ಯೆಮೆನ್‌ನ ಇರಾನ್ ಬೆಂಬಲಿತ ಹೌತಿ ಬಂಡುಕೋರರು

ಹೊರ್ಮುಜ್ ಬಳಿಕ ಬಾಬ್ ಅಲ್-ಮಂಡೇಬ್ ಜಲಸಂಧಿ ಬಂದ್ ಭೀತಿ

ಟೆಹ್ರಾನ್: ಮಧ್ಯಪ್ರಾಚ್ಯದಲ್ಲಿ ಇಸ್ರೇಲ್-ಅಮೆರಿಕಾ ಹಾಗೂ ಇರಾನ್ ನಡುವಿನ ಯುದ್ಧ ಆರಂಭವಾಗಿ ಒಂದು ತಿಂಗಳು ಕಳೆದಿದ್ದು, ಈ ಯುದ್ಧಕ್ಕೆ ಇದೀಗ ಯೆಮೆನ್‌ನ ಹೌತಿ ಬಂಡುಕೋರ ಪಡೆ ಎಂಟ್ರಿ ಕೊಟ್ಟಿದ್ದು, ಇರಾನ್ ಪರವಾಗಿ ಯುದ್ಧಕ್ಕೀಳಿದಿದೆ. ಈಗಾಗಲೇ ಇರಾನ್ ವಾರ್‌ನಿಂದಾಗಿ ಜಾಗತಿಕವಾಗಿ ಪ್ರಮುಖ ಚೋಕ್‌ಪಾಯಿಂಟ್ ಆಗಿರುವ ಹೊರ್ಮುಜ್ ಜಲಸಂಧಿ ಸ್ಥಗಿತವಾಗಿ ಇಂಧನ ವಲಯದಲ್ಲಿ ಸಾಕಷ್ಟು ತಲ್ಲಣ ಸೃಷ್ಟಿಯಾಗಿದೆ. ಈ ಬೆನ್ನಲ್ಲೇ, ಈಗ ಹೌತಿ ಪಡೆಗಳ ಎಂಟ್ರಿ ಜಾಗತಿಕವಾಗಿ ಮಹತ್ವ ಪಡೆದಿರುವ ಮತ್ತೊಂದು ಚೋಕ್ ಪಾಯಿಂಟ್ ಸ್ಥಗಿತಗೊಳ್ಳುವ ಆತಂಕ ಎದುರಾಗಿದೆ.

ಯುದ್ಧಕ್ಕೆ ಹೌತಿ ಬಂಡುಕೋರರ ಎಂಟ್ರಿಯಿಂದ ಅಪಾಯದಲ್ಲಿ ಮತ್ತೊಂದು ಜಲಸಂಧಿ: ಇರಾನ್ ಮೇಲಿನ ಯುದ್ಧವನ್ನು ಖಂಡಿಸಿರುವ ಯೆಮೆನ್‌ನ ಇರಾನ್ ಬೆಂಬಲಿತ ಹೌತಿ ಬಂಡುಕೋರ ಪಡೆ ಸದ್ಯ ಇಸ್ರೇಲ್ ವಿರುದ್ಧ ಯುದ್ಧಕ್ಕೆ 24 ಗಂಟೆಗಳಲ್ಲೇ 2 ಸುತ್ತಿನ ಕ್ಷಿಪಣಿ ಹಾಗೂ ಡ್ರೋನ್ ದಾಳಿಗಳನ್ನು ಮಾಡಿದ್ದು, ಮಧ್ಯಪ್ರಾಚ್ಯದಲ್ಲಿ ಉದ್ವಿಗ್ನತೆಯನ್ನು ಮತ್ತಷ್ಟು ಹೆಚ್ಚಾಗುವಂತೆ ಮಾಡಿದೆ. ಅಲ್ಲದೆ, ಇಸ್ರೇಲಿ ಪಡೆಗಳು ಇರಾನ್, ಲೆಬನಾನ್, ಇರಾಕ್ ಮತ್ತು ಪ್ಯಾಲೆಸ್ಟೀನಿಯನ್ ಪ್ರದೇಶಗಳನ್ನು ಗುರಿಯಾಗಿಸಿಕೊಂಡಿದ್ದಕ್ಕೆ ಪ್ರತಿಕ್ರಿಯೆಯಾಗಿ ಸೂಕ್ಷ್ಮ ಇಸ್ರೇಲಿ ಮಿಲಿಟರಿ ತಾಣಗಳನ್ನು ಗುರಿಯಾಗಿಸಿಕೊಂಡು ಬ್ಯಾಲಿಸ್ಟಿಕ್ ಕ್ಷಿಪಣಿಗಳ ದಾಳಿ ನಡೆಸಿದ್ದು, ಇಸ್ರೇಲ್ ಆಕ್ರಮಣ ಸಂಪೂರ್ಣವಾಗಿ ನಿಲ್ಲುವವರೆಗೂ ಕಾರ್ಯಚರಣೆ ನಡೆಸುತ್ತೇವೆ. ಅಲ್ಲದೆ,ಬಾಬ್ ಎಲ್-ಮಂಡೇಬ್ ಜಲಸಂಧಿಯನ್ನು ಸ್ಥಗಿತಗೊಳಿಸುವ ಚಿಂತನೆ ನಡೆಸುತ್ತಿದ್ದೇವೆ ಎಂದು ಎಚ್ಚರಿಕೆ ನೀಡಿದೆ. ಯುದ್ಧದಿಂದಾಗಿ ಈಗಾಗಲೇ ಇರಾನ್ ತನ್ನ ಭಾಗದಲ್ಲಿರುವ ಹೊರ್ಮುಜ್ ಜಲಸಂಧಿಯನ್ನು ಸ್ಥಗಿತಗೊಳಿಸುವ ಮೂಲಕ ಜಾಗತಿಕವಾಗಿ ಪೂರೈಕೆಯಾಗುತ್ತಿದ್ದ ಶೇ.20ರಷ್ಟು ಇಂಧನದಲ್ಲಿ ವ್ಯತ್ಯಯ ಉಂಟಾಗಿದ್ದಕ್ಕೆನೇ ಇಡೀ ಜಗತ್ತು ನಲುಗುತ್ತಿದೆ. ಹೀಗಿರುವಾಗಲೇ ಯೆಮನ್ ಹೌತಿ ಬಂಡುಕೋರರು ಯುದ್ಧದಲ್ಲಿ ಸಕ್ರಿಯವಾಗಿ ಭಾಗಿಯಾಗಿರುವುದು

- ಮಧ್ಯಪ್ರಾಚ್ಯದ ಯುದ್ಧಕ್ಕೆ ಎಂಟ್ರಿ ಕೊಟ್ಟ ಇರಾನ್ ಬೆಂಬಲಿತ ಯೆಮೆನ್ ನ ಹೌತಿ ಬಂಡುಕೋರ ಪಡೆ
- ಯುದ್ಧದಲ್ಲಿ ಹೌತಿಗಳ ಎಂಟ್ರಿಯಿಂದ ಹೆಚ್ಚಾಯ್ತು ಹೊರ್ಮುಜ್ ಜಲಸಂಧಿ ಬಳಿಕ ಮತ್ತೊಂದು ಜಲಸಂಧಿ ಸ್ಥಗಿತವಾಗುವ ಆತಂಕ
- ಬಾಬ್ ಎಲ್-ಮಂಡೇಬ್ ಜಲಸಂಧಿ ಸ್ಥಗಿತವಾದ್ರೆ ಜಾಗತಿಕ ಮಾರುಕಟ್ಟೆ ಹಾಗೂ ಭಾರತದ ಮೇಲೆ ಏನು ಪರಿಣಾಮವಾಗಲಿದೆ?

ಹೊರ್ಮಜ್ ನಿಂದ ಸುಮಾರು 1,200 ಮೈಲುಗಳಷ್ಟು ದೂರದಲ್ಲಿನ ಕೆಂಪು ಸಮುದ್ರದ ದಕ್ಷಿಣ ತುದಿಯಲ್ಲಿರುವ ಬಾಬ್ ಎಲ್-ಮಂಡೇಬ್ ಜಲಸಂಧಿಯ ಅಪಾಯದಲ್ಲಿರುವ ಸಾಧ್ಯತೆಯಿದ್ದು, ಇದು ಜಾಗತಿಕ ಇಂಧನ ಮಾತ್ರವಲ್ಲದೆ ಇತರೆ ಸರಕುಗಳ ವ್ಯಾಪಾರದ ಮೇಲೂ ಭಾರಿ ಪರಿಣಾಮ ಬೀಳಲಿದೆ. ಇನ್ನು, ಇದು ಭಾರತಕ್ಕೂ ಸಂಕಷ್ಟ ತಂದೊಡ್ಡಲಿದೆ.

ಬಾಬ್ ಎಲ್-ಮಂಡೇಬ್ ನ ಜಾಗತಿಕ ಪ್ರಾಮುಖ್ಯತೆ

ಇದು ಜಾಗತಿಕವಾಗಿ ಆರ್ಥಿಕತೆಯ ದೃಷ್ಟಿಯಿಂದ ಸಾಕಷ್ಟು ಮಹತ್ವವನ್ನು ಪಡೆದುಕೊಂಡಿದೆ. ಇದಕ್ಕೆ ಕಾರಣ ಏಷ್ಯಾ ಹಾಗೂ ಯುರೋಪ್ ನಡುವೆ ನಡೆಯುವ ಬಹುತೇಕ ಎಲ್ಲಾ ವಾಣಿಜ್ಯ ಚಟುವಟಿಕೆಗಳು ಈ ಜಲಸಂಧಿಯನ್ನು ದಾಟಿ ಸೂಯೆಜ್ ಕಾಲುವೆಯ ಮೂಲಕವೇ ನಡೆಯುತ್ತದೆ. ಹಾಗಾಗಿ ಇದು ವಿಶ್ವದ ಅತ್ಯಂತ ಜನನಿಬಿಡ ಹಾಗೂ ಕಾರ್ಯತಂತ್ರದ ಜಲಮಾರ್ಗಗಳಲ್ಲಿ ಒಂದಾಗಿದೆ. ಜಾಗತಿಕ ತೈಲ ಮತ್ತು ನೈಸರ್ಗಿಕ ಅನಿಲ ಸಾಗಣೆಯ ಸುಮಾರು ಶೇಕಡಾ 10 ರಿಂದ 12 ರಷ್ಟು ಬಾಬ್ ಎಲ್-ಮಂಡೇಬ್ ಮೂಲಕ ಸಾಗುತ್ತದೆ. ಇದು ಪರ್ಷಿಯನ್ ಕೊಲ್ಲಿಯಿಂದ ಅಮೆರಿಕಾ ಹಾಗೂ ಯುರೋಪ್ ದೇಶಗಳಿಗೆ ಸಾಗಾಟವಾಗುವ ಇಂಧನದ ಪ್ರಮುಖ ಕೇಂದ್ರವಾಗಿದೆ. ಇನ್ನೂ ಪ್ರಮುಖವಾಗಿ ಭಾರತಕ್ಕೆ ರಷ್ಯಾದಿಂದ ಪೂರೈಕೆಯಾಗುವ ಬಹುತೇಕ ತೈಲವೂ ಇದೇ ಮಾರ್ಗವಾಗಿ ಬರುತ್ತದೆ.

ಬಾಬ್ ಎಲ್-ಮಂಡೇಬ್ ಜಲಸಂಧಿಯ ಭೌಗೋಳಿಕ ಮಹತ್ವ

ಬಾಬ್ ಎಲ್-ಮಂಡೇಬ್ ಎಂದರೆ ಅರೇಬಿಕ್ ಭಾಷೆಯಲ್ಲಿ ಕಣ್ಣೀರಿನ ದ್ವಾರ ಎಂದರ್ಥ. ಸರಿಸುಮಾರು 100 ಕಿಲೋಮೀಟರ್ ಉದ್ದ ಮತ್ತು 30 ಕಿಲೋಮೀಟರ್ ಅಗಲವಿರುವ ಇದು ಕೆಂಪು ಸಮುದ್ರವನ್ನು ಅಡೆನ್ ಕೊಲ್ಲಿ ಮತ್ತು ಹಿಂದೂ ಮಹಾಸಾಗರಕ್ಕೆ ಸಂಪರ್ಕಿಸುತ್ತದೆ. ಅಲ್ಲದೆ, ಅರೇಬಿಯನ್ ಪರ್ಯಾಯ ದ್ವೀಪದಲ್ಲಿರುವ ಯೆಮನ್ ಮತ್ತು ಆಫ್ರಿಕಾದ ಡಿಜಿಬೌಟಿ ಹಾಗೂ ಎರಿಟ್ರಿಯಾವನ್ನು ಪ್ರತ್ಯೇಕಿಸುವ ಕಿರಿದಾದ ಜಲಸಂಧಿಯಾಗಿದೆ. ಇದು ಏಷ್ಯಾ ಹಾಗೂ ಯುರೋಪ್ ನಡುವಿನ ಸರಕುಗಳು ಹಾದು ಹೋಗಲು ಇರುವ ಸೂಯೆಜ್ ಕಾಲುವೆಯ ದಕ್ಷಿಣ ದ್ವಾರವಾಗಿದ್ದು, ಭೌಗೋಳಿಕವಾಗಿ ನೋಡಲು ಕಿರಿದಾಗಿ ಕಂಡರೂ ಈ ಜಲಸಂಧಿ ಜಾಗತಿಕವಾಗಿ ಸಾಕಷ್ಟು ಮಹತ್ವವನ್ನು ಪಡೆದುಕೊಂಡಿದೆ.

ಅಷ್ಟೇ ಅಲ್ಲದೆ, ಜಾಗತಿಕ ವ್ಯಾಪಾರದ ಸರಿಸುಮಾರು ಶೇಕಡಾ 12 ರಷ್ಟು ಇದೇ ಜಲಸಂಧಿಯ ಮೂಲಕ ಸಾಗುತ್ತದೆ, ಹೀಗೆ ಜಾಗತಿಕ ಕಡಲ ವ್ಯಾಪಾರದ ಸುಮಾರು ಶೇಕಡಾ 10ರಷ್ಟು ಸೇರಿದಂತೆ ಶೇ.40 ರಷ್ಟು ಕಂಟೇನರ್ ಸಂಚಾರ ದಟ್ಟಣೆ ಈ ಜಲಸಂಧಿಯ ಮೂಲಕ ಸೂಯೆಜ್ ಕಾಲುವೆಯಲ್ಲಿ ನಡೆಯುತ್ತದೆ. ಈ ಮಾರ್ಗದಲ್ಲಿ ಹೌತಿಗಳ ಪ್ರಾಬಲ್ಯ ಹೆಚ್ಚಾಗಿದ್ದು, ಪರಿಸ್ಥಿತಿ ಉಲ್ಬಣವಾದರೆ, ಇರಾನ್ ಬೆಂಬಲಕ್ಕೆ ಕಾರ್ಯತಂತ್ರದ ಭಾಗವಾಗಿ ಈ ಜಲಸಂಧಿಯನ್ನು ಸ್ಥಗಿತಗೊಳಿಸುವ ಸಾಧ್ಯತೆಗಳಿವೆ. ಈಗಾಗಲೇ ಯುದ್ಧದಿಂದಾಗಿ ಹೊರ್ಮುಜ್ ಜಲಸಂಧಿ ಸ್ಥಗಿತವಾಗಿದ್ದು, ಜಾಗತಿಕವಾಗಿ ಇಂಧನ ಅನಿಶ್ಚಿತತೆ ಎದುರಾಗಿದ್ದು, ಮಾರುಕಟ್ಟೆಯಲ್ಲಿ ಹಣದುಬ್ಬರ ಹೆಚ್ಚಾಗುವ ಆತಂಕ ಎದುರಾಗಿದೆ. ಇದರ ಜೊತೆಗೆ ಈ ಬಾಬ್ ಎಲ್-ಮಂಡೇಬ್ ಜಲಸಂಧಿ ಸಹ ಸ್ಥಗಿತವಾದರೆ, ಸೂಯೆಜ್ ಕಾಲುವೆಯ ಮೂಲಕ ಚಲಿಸುವ ತೈಲ ಮತ್ತು ಅನಿಲ ಸರಕುಗಳನ್ನು ಆಫ್ರಿಕಾದ ಕೇಪ್ ಆಫ್ ಗುಡ್ ಹೋಪ್ ಮೂಲಕ ತಿರುಗಿಸಬೇಕಾಗುತ್ತದೆ. ಇದು ದೂರದ ಹಾದಿಯಾಗಲಿದ್ದು, ಸಾಕಷ್ಟು ಸಮಯ ವೆಚ್ಚದ ಜೊತೆಗೆ ಸರಕುಗಳ ಸಾಗಾಟದಲ್ಲಿ ವಿಳಂಬವಾಗಿ ಮತ್ತಷ್ಟು ಅನಿಶ್ಚಿತತೆಯನ್ನು ಎದುರಿಸುವಂತಾಗುತ್ತದೆ.

ಇರಾನ್ ಮೇಲೆ ಮುಂದಿನ ವಾರ ಭೂದಾಳಿ?

ಟೆಹ್ರಾನ್: ಇರಾನ್ ಮೇಲಿನ ಭೂದಾಳಿಗೆ ಅಮೆರಿಕ ಭೂ ಸೇನೆಯ 17 ಸಾವಿರ ತುಕಡಿಗಳು ಸಜ್ಜಾಗಿವೆ. ಅಮೆರಿಕ ಅಧ್ಯಕ್ಷರ ಅಂತಿಮ ಅನುಮೋದನೆ ಕಾಯುತ್ತಿವೆ ಎಂದು ಅಮೆರಿಕದ ನ್ಯೂಯಾರ್ಕ್ ಮೂಲದ ವಾಲ್‌ಸ್ಟ್ರೀಟ್ ಜರ್ನಲ್ ವರದಿ ಮಾಡಿದೆ. ಕಳೆದ ಒಂದು ತಿಂಗಳಿಂದ ನಡೆಯುತ್ತಿರುವ ವೈಮಾನಿಕ ಕಾರ್ಯಾಚರಣೆಗೆ ಬಗ್ಗದ ಇರಾನ್ ವಿರುದ್ಧ ಭೂಸೇನೆಯನ್ನು ಯುದ್ಧಭೂಮಿಗೆ ಇಳಿಸಲು ಟ್ರಂಪ್ ಆಡಳಿತ ಆಲೋಚನೆ ನಡೆಸಿದೆ. ಆರಂಭಿಕ ಹಂತದಲ್ಲಿ ಪ್ರಮುಖ ದ್ವೀಪ ಪ್ರದೇಶಗಳು, ಪರಮಾಣು ಕೇಂದ್ರಗಳ ಮೇಲೆ ಹಿಡಿತ ಸಾಧಿಸುವ ಗುರಿಯೊಂದಿಗೆ ಭೂದಾಳಿಗೆ ಯೋಜನೆ ರೂಪಿಸಲಾಗಿದೆ. ಆದರೆ, ಪ್ರಬಲ ಭೂ ಸೇನೆ ಹೊಂದಿರುವ ಇರಾನ್ ವಿರುದ್ಧ ಭೂದಾಳಿ ಅಪಾಯಕಾರಿ ಎಂಬುದು ಟ್ರಂಪ್ ಆಡಳಿತಕ್ಕೆ ಅರಿವಿದೆ. 6 ಲಕ್ಷ ಯೋಧರು, 3.50 ಲಕ್ಷ ಸೇನಾ ತುಕಡಿಗಳು, 1.90 ಲಕ್ಷ ಐಆರ್‌ಜಿಸಿ ಯೋಧರ ಪಡೆ ಹೊಂದಿರುವ ಇರಾನ್, ಭೂದಾಳಿಗೆ ಪ್ರಬಲ ಪ್ರತಿರೋಧ ತೋರುವ ಸಾಧ್ಯತೆಗಳಿವೆ.

ಹೆಜ್ಬೊಲ್ಲಾ ಕಮಾಂಡರ್ ಹತ್ಯೆ: ಇಸ್ರೇಲ್ ವೈಮಾನಿಕ ದಾಳಿಯಲ್ಲಿ ಹೆಜ್ಬೊಲ್ಲಾ ಬಂಡುಕೋರ ಪಡೆಯ ಯುದ್ಧ ಟ್ಯಾಂಕ್ ನಿಗ್ರಹ ದಳದ ಕಮಾಂಡರ್ ಹಸನ್ ಮೊಹಮ್ಮದ್ ಬಶೀರ್ ಹತನಾಗಿದ್ದಾನೆ. ದಕ್ಷಿಣ ಲೆಬನಾನ್‌ನ ಲಿಟಾನಿ ಪ್ರದೇಶದ ಮೇಲೆ ಇಸ್ರೇಲ್ ನಡೆಸಿದ ವೈಮಾನಿಕ ದಾಳಿಯಲ್ಲಿ ಬಶೀರ್ ಹತರಾಗಿದ್ದಾರೆ ಎಂದು ಐಡಿಎಫ್ ಹೇಳಿಕೊಂಡಿದೆ.

ನಿಲ್ಲದ ದಾಳಿ-ಪ್ರತಿದಾಳಿ: ಅಮೆರಿಕದ ಕದನ ವಿರಾಮ ಪ್ರಸ್ತಾಪದ ನಡುವೆಯೂ ಇರಾನ್-ಇಸ್ರೇಲ್ ದಾಳಿ ಮುಂದುರಿಸಿವೆ. ಟೆಹ್ರಾನ್ ಸೇರಿ ಹಲವು ಪ್ರಮುಖ ಇರಾನಿಯನ್ ಮಿಲಿಟರಿ, ಕೈಗಾರಿಕೆ ನೆಲೆಗಳು, ಪರಮಾಣು ಕೇಂದ್ರಗಳ ಮೇಲೆ ಇಸ್ರೇಲ್ ವೈಮಾನಿಕ ದಾಳಿ ನಡೆಸಿದೆ. ಅರಾಕ್ ಬಳಿಯ ಖೊಂಡಾಬ್ ಹೆವಿ ವಾಟರ್ ಕಾಂಪ್ಲೆಕ್ಸ್, ಯಾಜ್ದ್ ಪ್ರಾಂತ್ಯದ ಅರ್ಡಕನ್ ಪರಮಾಣು ಕೇಂದ್ರ, ಖಿಜೇಸ್ತಾನ್, ಮೊಬರಾಕೇಜ್ ಉಕ್ಕು ಕೇಂದ್ರಗಳ ಮೇಲೆ ಇಸ್ರೇಲ್ ದಾಳಿ ನಡೆಸಿದೆ. ಇದೇ ವೇಳೆ ಟೆಹ್ರಾನ್‌ನಲ್ಲಿರುವ ಕ್ಷಿಪಣಿ ಉತ್ಪಾದನಾ ಘಟಕದ ಮೇಲೂ ವೈಮಾನಿಕ ದಾಳಿ ನಡೆಸಲಾಗಿದೆ ಎಂದು ವರದಿಯಾಗಿದೆ. ಪ್ರತಿದಾಳಿ ನಡೆಸಿರುವ ಇರಾನ್, ನೆರೆಯ ಕೊಲ್ಲಿ ದೇಶಗಳಾದ ಸೌದಿ ಅರೇಬಿಯಾ, ಯುಎಇ, ಕತಾರ್, ಕುವೈತ್, ಬಹರೇನ್ ಮೇಲೆವೈಮಾನಿಕ ದಾಳಿ ನಡೆಸಿದೆ. ಸೌದಿ ಅರೇಬಿಯಾದ ಪ್ರಿನ್ಸ್ ಸುಸ್ತಾಲ್ ವಾಯುನೆಲೆ ಮೇಲೆ ದಾಳಿ ನಡೆಸಲಾಗಿದೆ.

ಶ್ರೀಲಂಕಾದಲ್ಲಿ ತೈಲ ಸಂಕಷ್ಟ

ರಕ್ಷಣೆಗೆ ಧಾವಿಸಿದ ಭಾರತದಿಂದ 38,000 ಮೆಟ್ರಿಕ್ ಟನ್ ಇಂಧನ ಪೂರೈಕೆ

ಕೊಲಂಬೋ: ಮಧ್ಯಪ್ರಾಚ್ಯದಲ್ಲಿ ಯುದ್ಧದಿಂದಾಗಿ ಜಗತ್ತಿನಾದ್ಯಂತ ಇಂಧನ ಅನಿಶ್ಚಿತತೆ ಎದುರಾಗಿದ್ದು, ಭಾರತದ ನೆರೆಯ ರಾಷ್ಟ್ರ ಶ್ರೀಲಂಕಾ ಮೇಲೆ ಇದರ ಪರಿಣಾಮ ಹೆಚ್ಚಾಗಿದೆ. ಈ ಅನಿಶ್ಚಿತತೆ ನಡುವೆ ಸ್ಪಂದಿಸಿದ ಭಾರತ ಶ್ರೀಲಂಕಾಗೆ ತುರ್ತು ಬೆಂಬಲವನ್ನು ನೀಡಿದ್ದು, ಬರೋಬ್ಬರಿ 38,000 ಮೆಟ್ರಿಕ್ ಟನ್ ಪೆಟ್ರೋಲಿಯಂ ಅನ್ನು ರವಾನೆ ಮಾಡಲಾಗಿದೆ ಎಂದು ಕೊಲಂಬೊದಲ್ಲಿರುವ ಭಾರತೀಯ ಹೈಕಮಿಷನ್ ತಿಳಿಸಿದೆ.

ಶ್ರೀಲಂಕಾಗೆ ಭಾರತದಿಂದ 38ಸಾವಿರ ಮೆಟ್ರಿಕ್ ಟನ್ ಇಂಧನ ಪೂರೈಕೆ: ಈ ಕುರಿತು ಹೇಳಿಕೆ ನೀಡಿರುವ ಕೊಲಂಬೊದಲ್ಲಿನ ಭಾರತೀಯ ಹೈಕಮಿಷನ್ ಪಶ್ಚಿಮ ಏಷ್ಯಾ ಸಂಘರ್ಷದಿಂದ ಉಂಟಾದ ಪೂರೈಕೆ ಅಡಚಣೆಗಳಿಂದ ಕೊಲಂಬೊ ಬಳಲುತ್ತಿರುವಾಗ, ಭಾರತವು ಶ್ರೀಲಂಕಾಕ್ಕೆ 20,000 ಮೆಟ್ರಿಕ್ ಟನ್ ಡೀಸೆಲ್ ಮತ್ತು 18,000 ಮೆಟ್ರಿಕ್ ಟನ್ ಪೆಟ್ರೋಲ್ ಸೇರಿದಂತೆ 38,000 ಮೆಟ್ರಿಕ್ ಟನ್ ಪೆಟ್ರೋಲಿಯಂ ಅನ್ನು ಹೈಕಮೀಷನ್ ಪ್ರಕಾರ, ಪಶ್ಚಿಮ ಏಷ್ಯಾ ಮತ್ತು ಸಿಂಗಾಪುರದಿಂದ ಪಡೆಯುತ್ತಿದ್ದ ಇಂಧನ ಪೂರೈಕೆ ಉದ್ವಿಗ್ನತೆಯ ಕಾರಣದಿಂದಾಗಿ ಪೂರೈಕೆ ಸರಪಳಿ ಅಡಚಣೆಗಳು ಮತ್ತು ಹಡಗುಗಳ ಅಲಭ್ಯತೆಯನ್ನು ಉಲ್ಲೇಖಿಸಿ ಪೂರೈಕೆ ಸ್ಥಗಿತಗೊಳಿಸಿದ ಬಳಿಕ ಎದುರಾದ ಅನಿಶ್ಚಿತತೆ ಎದುರಾಗಿದ್ದು, ಶ್ರೀಲಂಕಾ ಭಾರತದ ತುರ್ತು ಸಹಾಯವನ್ನು ಕೋರಿದ್ದು, ಇದಕ್ಕೆ ಪ್ರತಿಕ್ರಿಯಿಸಿದ ಭಾರತ ಇಂಡಿಯನ್ ಆಯಿಲ್ ಕಾರ್ಪೊರೇಷನ್ ನಿಂದ ಲಂಕಾ ಮೂಲಕ ಕೊಲಂಬೋಗೆ ತುರ್ತು ಸರಕು ರವಾನೆ ಮಾಡಿದೆ.

ಈ ಕುರಿತು ಪ್ರಧಾನಿ ನರೇಂದ್ರ ಮೋದಿ ಶ್ರೀಲಂಕಾ ಅಧ್ಯಕ್ಷ ಅನುರ ಕುಮಾರ ದಿಸಾನಾಯಕೆ ಅವರೊಂದಿಗೆ ಮಾತನಾಡಿದ್ದು ಪಶ್ಚಿಮ ಏಷ್ಯಾದಲ್ಲಿ ವಿಕಸನಗೊಳ್ಳುತ್ತಿರುವ ಪರಿಸ್ಥಿತಿಯ ಬಗ್ಗೆ ಚರ್ಚಿಸಿದ್ದೇನೆ. ಅದರಲ್ಲೂ ನಿರ್ದಿಷ್ಟವಾಗಿ ಜಾಗತಿಕ ಇಂಧನ ಭದ್ರತೆಯ ಮೇಲೆ ಪರಿಣಾಮ ಬೀರುವ ಅಡಚಣೆಗಳ ಬಗ್ಗೆ ಕೇಂದ್ರಿತವಾಗಿ ಚರ್ಚೆ ನಡೆದಿದೆ ಎಂದಿದ್ದರು.

ಭಾರತಕ್ಕೆ ಧನ್ಯವಾದ ತಿಳಿಸಿದ ಶ್ರೀಲಂಕಾದ ವಿರೋಧ ಪಕ್ಷದ ನಾಯಕ: ಅನಿಶ್ಚಿತತೆಯ ನಡುವೆ ಇಂಧನ ಪೂರೈಕೆ

ಸರಣಿ ರಾಜತಾಂತ್ರಿಕ ಮಾತುಕತೆಗಳ ಫಲಿತ

ಜಾಗತಿಕ ಇಂಧನ ಅನಿಶ್ಚಿತತೆಯ ನಡುವೆ ಶ್ರೀಲಂಕಾ ಹಾಗೂ ಭಾರತದ ನಡುವಿನ ಸರಣಿ ಮಾತುಕತೆಗಳ ಬೆನ್ನಲ್ಲೇ, ಈ ಬೆಳವಣಿಗೆ ಆಗಿದೆ. ಮಾ.23ರಂದು ಭಾರತದ ವಿದೇಶಾಂಗ ಸಚಿವ ಎಸ್. ಜೈಶಂಕರ್ ಮತ್ತು ಶ್ರೀಲಂಕಾದ ವಿದೇಶಾಂಗ ಸಚಿವೆ ವಿಜಿತಾ ಹೆರಾತ್ ದೂರವಾಣಿ ಸಂಭಾಷಣೆ ಮೂಲಕ ಮಾತುಕತೆ ನಡೆಸಿದ್ದು, ಇದಾದ ಬಳಿಕ ಮಾ.24ರಂದು ಭಾರತದ ಪ್ರಧಾನಿ ನರೇಂದ್ರ ಮೋದಿ ಹಾಗೂ ಶ್ರೀಲಂಕಾ ಅಧ್ಯಕ್ಷ ಅನುರ ಕುಮಾರ ದಿಸಾನಾಯಕ ಮಾತುಕತೆ ನಡೆಸಿದ್ದರು.

ಹಿನ್ನಲೆಯಲ್ಲಿ ಶ್ರೀಲಂಕಾದ ವಿರೋಧ ಪಕ್ಷದ ನಾಯಕ ಸಜಿತ್ ಪ್ರೇಮದಾಸ ಅವರು ಭಾರತಕ್ಕೆ ತುರ್ತು ಇಂಧನ ಪೂರೈಕೆಗಾಗಿ ಧನ್ಯವಾದ ಅರ್ಪಿಸಿದ್ದು ತುರ್ತು ಇಂಧನ ಬೆಂಬಲಕ್ಕಾಗಿ ನಾವು ಭಾರತಕ್ಕೆ ಧನ್ಯವಾದ ಹೇಳುತ್ತೇವೆ. ಈ ಕ್ರಮ ಸಂಬಂಧಗಳನ್ನು ಬಿಕ್ಕಟ್ಟಿನಲ್ಲಿ ಪರೀಕ್ಷಿಸಲಾಗುತ್ತದೆ, ಸೌಕರ್ಯದ ಸಮಯದಲ್ಲ ಎಂಬುದನ್ನು ನೆನಪಿಸುತ್ತದೆ. ಅವಶ್ಯಕತೆ ಇದ್ದಾಗ ನಮ್ಮೊಂದಿಗೆ ನಿಂತವರನ್ನು ನಾವು ಮರೆಯಬಾರದು ಎಂದು ಎಕ್ಸ್‌ನಲ್ಲಿ ಬರೆದುಕೊಂಡಿದ್ದಾರೆ.

ಬಿಕ್ಕಟ್ಟಿನಲ್ಲಿ ನೆರೆರಾಷ್ಟ್ರಗಳ ನೆರವಿಗೆ ಭಾರತದ ಇಂಧನ: ಅನಿಶ್ಚಿತತೆಯ ಸಮಯದಲ್ಲಿ ಭಾರತದಲ್ಲಿ 5.3 ಮಿಲಿಯನ್ ಮೆಟ್ರಿಕ್ ಟನ್‌ಗಳಿಗಿಂತ ಹೆಚ್ಚು ಕಾರ್ಯತಂತ್ರದ ಪೆಟ್ರೋಲಿಯಂ ನಿಕ್ಷೇಪಗಳನ್ನು ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ಅಲ್ಲದೆ, ಈ ಬಿಕ್ಕಟ್ಟಿನನಿ ಪರಿಸ್ಥಿತಿಯಲ್ಲಿ ಕೇವಲ ಶ್ರೀಲಂಕಾ ಮಾತ್ರವಲ್ಲದೆ, ತನ್ನ ನೆರೆರಾಷ್ಟ್ರಗಳಾದ ಬಾಂಗ್ಲಾದೇಶ ಮತ್ತು ಮಾಲ್ಡೀವ್ಸ್‌ನಂತಹ ದೇಶಗಳಿಗೆ ಭಾರತ ಇಂಧನ ಪೂರೈಸುತ್ತಿದೆ. ಬಾಂಗ್ಲಾದೇಶಕ್ಕೆ ಈಗಾಗಲೇ 5,000 ಟನ್ ಇಂಧನ ಪೂರೈಸಿದ್ದು, ಏಪ್ರಿಲ್ ವೇಳೆಗೆ 45,000 ಟನ್ ಡೀಸೆಲ್ ಪೂರೈಸುವ ನಿರೀಕ್ಷೆಯಿದೆ ಎಂದು ವರದಿಯಾಗಿದೆ.

ಟ್ರಂಪ್ ವಿರುದ್ಧ ಜನಾಕ್ರೋಶ: ಅಮೆರಿಕಾದಲ್ಲಿ ನೋಕಿಂಗ್ಸ್ ಪ್ರತಿಭಟನೆ

ವಾಷಿಂಗ್ಟನ್: ಮಧ್ಯಪ್ರಾಚ್ಯದಲ್ಲಿ ಯುದ್ಧಕ್ಕೆ ಒಂದು ತಿಂಗಳು ಆಗಿದ್ದು, ಮತ್ತೊಂದು ಹಂತವನ್ನು ತಲುಪಿದೆ. ಈ ನಡುವೆ ಅಮೆರಿಕಾ ಅಮೆರಿಕಾ ಸೇರಿದಂತೆ ಯುರೋಪ್‌ನ ಹಲವು ಕಡೆಗಳಲ್ಲಿ ಲಕ್ಷಾಂತರ ಜನರು ಅಮೆರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಇರಾನ್ ಮೇಲಿನ ಯುದ್ಧ ಹಾಗೂ ವಲಸೆ ನೀತಿ ಸೇರಿದಂತೆ ಹಲವು ಕಠಿಣ ನೀತಿಗಳ ಜಾರಿಯನ್ನು ವಿರೋಧಿಸಿ ನೋ ಕಿಂಗ್ಸ್ ಪ್ರತಿಭಟನೆ ನಡೆಸಿದ್ದಾರೆ.

ಅಮೆರಿಕಾದ ಎಲ್ಲಾ 50 ರಾಜ್ಯಗಳಲ್ಲಿ ವ್ಯಾಪಕ ಪ್ರತಿಭಟನಾ ರ್‍ಯಾಲಿ ನಡೆದಿದ್ದು, ಬರೋಬ್ಬರಿ 3ಸಾವಿರಕ್ಕೂ ಅಧಿಕ ರ್‍ಯಾಲಿಗಳು ನೋಂದಾಯಿತವಾಗಿದೆ. ಇದರಲ್ಲಿ ಇತ್ತೀಚೆಗೆ ಟ್ರಂಪ್ ವಲಸೆ ವಿರೋಧಿ ನೀತಿಯಿಂದಾಗಿ ಹಲವು ದಾರುಣ ಘಟನೆಗೆ ಸಾಕ್ಷಿಯಾಗಿದ್ದ ಮಿನ್ನೇಸೋಟ ಈ ಪ್ರತಿಭಟನೆಗಳಿಗೆ ಕೇಂದ್ರ ಬಿಂದುವಾಗಿ ಹೊರಹೊಮ್ಮಿದೆ. ಮಿನ್ನೇಸೋಟದ ರಾಜಧಾನಿ ಸೇಂಟ್ ಪಾಲ್ಸ್‌ನಲ್ಲಿ ಸಾವಿರಾರು ಪ್ರತಿಭಟನಾಕಾರರು ಜಮಾಯಿಸಿದ್ದು, ನೋ ಕಿಂಗ್ಸ್ ಎಂಬ ಫಲಕಗಳು ಸೇರಿದಂತೆ ಯುಎಸ್ ರಾಷ್ಟ್ರಧ್ವಜವನ್ನು ತಲೆಕೆಳಗ

‘ಪೆದ್ದಿ’ ಸಿನಿಮಾಕ್ಕಾಗಿ ಜಾಗ ಬಿಟ್ಟುಕೊಟ್ಟ ‘ಲೆನಿನ್’

ಯಶ್ ನಟನೆಯ ‘ಟಾಕ್ಸಿಕ್’ ಸಿನಿಮಾ ಮಾರ್ಚ್ 19ರಂದು ಬಿಡುಗಡೆ ಆಗಬೇಕಿತ್ತು. ಆದರೆ ಯುದ್ಧ ಪರಿಸ್ಥಿತಿಯ ಕಾರಣದಿಂದಾಗಿ ಸಿನಿಮಾ ಬಿಡುಗಡೆ ಮುಂದೂಡಲಾಯ್ತು. ಆದರೆ ಅದೊಂದು ಸಿನಿಮಾ ಬಿಡುಗಡೆ ದಿನಾಂಕ ಮುಂದೆ ಹೋಗಿದ್ದು, ಆ ನಂತರದ ಹಲವು ಸಿನಿಮಾಗಳ ಬಿಡುಗಡೆ ಮೇಲೆ ಪರಿಣಾಮ ಬೀರಿದೆ. ಸುಮಾರು ಆಗಸ್ಟ್ ತಿಂಗಳ ವರೆಗೆ ಅದರ ನಂತರದ ಕೆಲವು ಸಿನಿಮಾಗಳ ಬಿಡುಗಡೆ ದಿನಾಂಕಗಳು ಸಹ ಬದಲಾಗಿವೆ. ಇದೀಗ ತೆಲುಗಿನ ‘ಲೆನಿನ್’ ಸಿನಿಮಾದ ಬಿಡುಗಡೆ ಸಹ ಮುಂದೂಡಲಾಗಿದೆ. ಅದಕ್ಕೂ ಸಹ ಪರೋಕ್ಷವಾಗಿ ‘ಟಾಕ್ಸಿಕ್’ ಕಾರಣ ಇದ್ದಂತಿದೆ. ‘ಟಾಕ್ಸಿಕ್’ ಸಿನಿಮಾ ಮಾರ್ಚ್ 19ರಂದು ಬಿಡುಗಡೆ ಆಗಲಿದ್ದ ಕಾರಣ, ಪವನ್ ಕಲ್ಯಾಣ್ ‘ಉಸ್ತಾದ್ ಭಗತ್ ಸಿಂಗ್’ ಸಿನಿಮಾ ಬಿಡುಗಡೆ ಮಾರ್ಚ್ 26ಕ್ಕೆ ಘೋಷಿಸಲಾಗಿತ್ತು.

‘ಟಾಕ್ಸಿಕ್’ ರಿಲೀಸ್ ಮುಂದೂಡಿಕೆ ಆಗುತ್ತಲೇ ‘ಉಸ್ತಾದ್ ಭಗತ್ ಸಿಂಗ್’ ಮಾ.19ಕ್ಕೆ ಬಿಡುಗಡೆ ಆಯ್ತು. ಇದೇ ಕಾರಣದಿಂದಾಗಿ ರಾಮ್ ಚರಣ್ ಅವರ ‘ಪೆದ್ದಿ’ ಸಿನಿಮಾದ ಬಿಡುಗಡೆ ದಿನಾಂಕದಲ್ಲಿಯೂ ಬದಲಾವಣೆ ಆಗಿ, ಏಪ್ರಿಲ್ 30ರಂದು ಸಿನಿಮಾ ಬಿಡುಗಡೆ ಮಾಡುವುದಾಗಿ ಘೋಷಿಸಲಾಯ್ತು. ಸಮಯದಲ್ಲಿ ಬಿಡುಗಡೆ ಯೋಜನೆ ಹಾಕಿಕೊಂಡಿದ್ದ ಅಖಿಲ್ ಅಕ್ಕಿನೇನಿ ನಟನೆಯ ‘ಲೆನಿನ್’ ಸಿನಿಮಾಕ್ಕೆ ಇದು ಸಮಸ್ಯೆ ಆಗಿದ್ದು, ಇದೀಗ ‘ಲೆನಿನ್’ ಸಿನಿಮಾದ ಬಿಡುಗಡೆಯನ್ನು ಮುಂದೂಡಲಾಗಿದೆ. ಅಖಿಲ್ ಅಕ್ಕಿನೇನಿ ನಟನೆಯ ‘ಲೆನಿನ್’ ಇದೀಗ ಜೂನ್ 26ಕ್ಕೆ ಬಿಡುಗಡೆ ಆಗಲಿದೆ.

‘ಪೆದ್ದಿ’ ಸಿನಿಮಾ ಏಪ್ರಿಲ್ 30ರಂದು ಬಿಡುಗಡೆ ಆಗುತ್ತಿರುವ ಕಾರಣ ತಮ್ಮ ಸಿನಿಮಾದ ಬಿಡುಗಡೆಯನ್ನು ಮುಂದೂಡಿರುವುದಾಗಿ ಚಿತ್ರತಂಡ ಹೇಳಿಕೊಂಡಿದೆ. ಮೇ1ಕ್ಕೆ ಲೆನಿನ್ ಸಿನಿಮಾ ಬಿಡುಗಡೆ ಆಗಬೇಕಿತ್ತು. ಆದರೆ ಪೆದ್ದಿ ಸಿನಿಮಾ ಏಪ್ರಿಲ್ 30ಕ್ಕೆ ರಿಲೀಸ್ ಆಗುತ್ತಿರುವ ಕಾರಣ ಸಿನಿಮಾ ಬಿಡುಗಡೆ ಮುಂದೂಡಲಾಗಿದೆ. ನಮ್ಮ ಪ್ರೀತಿಯ ಮೆಗಾ ಪವರ್ ಸ್ಟಾರ್ ರಾಮ್ ಚರಣ್ ಅವರ ‘ಪೆದ್ದಿ’ ಸಿನಿಮಾ ಏಪ್ರಿಲ್ 30ರಂದು ಬಿಡುಗಡೆ ಆಗುತ್ತಿದ್ದು, ಇದು ಎಲ್ಲರೂ ಒಟ್ಟಿಗೆ ಸೇರಿ ಸಿನಿಮಾಗಳನ್ನು ಸಂಭ್ರಮಿಸಲು ಇದು ಸಕಾಲ ಎನಿಸಿದ್ದರಿಂದ ಈ ನಿರ್ಣಯ ತೆಗೆದುಕೊಳ್ಳಲಾಗಿದೆ. ರಾಮ್ ಚರಣ್ ಮತ್ತು ಅಖಿಲ್ ಇಬ್ಬರು ಬಲು ಆಪ್ತರು ಮತ್ತು ಪರಸ್ಪರರ ಯಶಸ್ಸು ಬಯಸುವವರು ಹಾಗಾಗಿ ಇಬ್ಬರ ಗೆಲುವು, ಯಶಸ್ಸು ದೃಷ್ಟಿಯಲ್ಲಿಟ್ಟುಕೊಂಡು ಈ ನಿರ್ಧಾರ ಪ್ರಕಟಿಸಲಾಗಿದೆ ಎಂದಿದೆ ಚಿತ್ರತಂಡ.

ಲೆನಿನ್’ ಸಿನಿಮಾವನ್ನು ಜೂನ್ 26ಕ್ಕೆ ಬಿಡುಗಡೆ ಮಾಡುತ್ತಿದ್ದು, ಪ್ರೇಕ್ಷಕರು ಸಿನಿಮಾವನ್ನು ಅದ್ಧೂರಿಯಾಗಿ ಎಂಜಾಯ್ ಮಾಡುತ್ತಾರೆ ಎಂಬ ನಿರೀಕ್ಷೆ ಇದೆ ಎಂದು ಚಿತ್ರತಂಡ ಹೇಳಿದೆ. ‘ಲೆನಿನ್’ ಸಿನಿಮಾನಲ್ಲಿ ಅಖಿಲ್ ಅಕ್ಕಿನೇನಿ ನಟಿಸಿದ್ದಾರೆ. ಅದರ ಜೊತೆಗೆ ನಾಯಕಿಯಾಗಿ ಭಾಗ್ಯ ಶ್ರೀ ಬೋರ್ಸೆ ನಟಿಸಿದ್ದಾರೆ.

‘ಧುರಂಧರ್ 2’ ಆರ್ಭಟಕ್ಕೆ ಬೆದರಿದ ‘ಭೂತ್ ಬಂಗ್ಲ’: ಅಕ್ಷಯ್ ಕುಮಾರ್ ಚಿತ್ರದ ಬಿಡುಗಡೆ ಮುಂದೂಡಿಕೆ

ಬಾಲಿವುಡ್ ನಟ ಅಕ್ಷಯ್ ಕುಮಾರ್ ಮತ್ತು ಖ್ಯಾತ ನಿರ್ದೇಶಕ ಪ್ರಿಯದರ್ಶನ್ ಕಾಂಬಿನೇಶನ್‌ನ ಬಹುನಿರೀಕ್ಷಿತ ಹಾರರ್-ಕಾಮಿಡಿ ಚಿತ್ರ ಭೂತ್ ಬಂಗ್ಲ’ ಬಿಡುಗಡೆ ದಿನಾಂಕದಲ್ಲಿ ಮಹತ್ವದ ಬದಲಾವಣೆಯಾಗಿದೆ. ಈ ಹಿಂದೆ ಘೋಷಿಸಿದಂತೆ ಏಪ್ರಿಲ್ 10ರಂದು ತೆರೆಗೆ ಬರಬೇಕಿದ್ದ ಈ ಚಿತ್ರ, ಈಗ ಏಪ್ರಿಲ್ 17ಕ್ಕೆ ಮುಂದೂಡಲ್ಪಟ್ಟಿದೆ ಎಂಬ ಮಾಹಿತಿ ಕೇಳಿಬಂದಿದೆ. ಅಂದಹಾಗೆ, ಈ ಬದಲಾವಣೆಗೆ ಕಾರಣ ಆಗಿರುವುದು ಧುರಂಧರ್ 2 ಸಿನಿಮಾದ ಅಬ್ಬರ. ಈ ಸಿನಿಮಾದ ಆರ್ಭಟಕ್ಕೆ ಅಕ್ಷಯ್ ಕುಮಾರ್ ಅವರಂತಹ ಸ್ಟಾರ್ ಹೀರೋ ಕೂಡ ಸೈಲೆಂಟ್ ಆಗಬೇಕಾಗಿದೆ. ಬಾಕ್ಸ್ ಆಫೀಸ್‌ನಲ್ಲಿ ರಣವೀರ್ ಸಿಂಗ್ ಅಭಿನಯದ ‘ಧುರಂಧರ್ 2’ ಸಿನಿಮಾ ಸುನಾಮಿ ಎಬ್ಬಿಸಿದೆ. ಚಿತ್ರಮಂದಿರಗಳಲ್ಲಿ ಬಹುತೇಕ ಸ್ಕ್ರೀನ್‌ಗಳನ್ನು ಈ ಚಿತ್ರವೇ ಆಕ್ರಮಿಸಿಕೊಂಡಿದೆ. ಆದ್ದರಿಂದ, ಹೊಸ ಸಿನಿಮಾಗಳಿಗೆ ಜಾಗ ಸಿಗುವುದು ಕಷ್ಟವಾಗಿದೆ. ಹಾಲಿವುಡ್ ಸ್ಟಾರ್ ಹೀರೋ ರಿಯಾನ್ ಗೋಸ್ಲಿಂಗ್ ಅವರ ‘ಪ್ರಾಜೆಕ್ಟ್ ಹೇಲ್ ಮೇರಿ’ ಚಿತ್ರ ಕೂಡ ಈ ಕಾರಣದಿಂದ ಪ್ರದರ್ಶನ ಕಾಣಲು ಪರದಾಡುತ್ತಿದೆ. ಈ ಹಿನ್ನೆಲೆಯಲ್ಲಿ ಯಾವುದೇ ರಿಸ್ಕ್ ತೆಗೆದುಕೊಳ್ಳಲು ಇಷ್ಟಪಡದ ಭೂತ್ ಬಂಗ್ಲ ತಂಡ, ಬಿಡುಗಡೆಯನ್ನು ಒಂದು ವಾರ ಮುಂದಕ್ಕೆ ಹಾಕಿದೆ. ಇದು ಅತ್ಯಂತ ಬುದ್ಧಿವಂತಿಕೆಯ ನಿರ್ಧಾರ ಎಂಬ ಅಭಿಪ್ರಾಯ ಕೇಳಿಬಂದಿದೆ. ದೊಡ್ಡ ಚಿತ್ರಗಳ ನಡುವೆ ಪೈಪೋಟಿಗಿಂತ ಲಾಭ ಮುಖ್ಯ. ಈ ಹಿಂದೆ ಯಶ್ ಅಭಿನಯದ ‘ಟಾಕ್ಸಿಕ್’ ಚಿತ್ರ ಕೂಡ ‘ಧುರಂಧರ್ 2’ ಜೊತೆಗಿನ ಸಂಘರ್ಷವನ್ನು ತಪ್ಪಿಸಿತ್ತು. ಈಗ ‘ಭೂತ್ ಬಂಗ್ಲ’ ಮುಂದಕ್ಕೆ ಹೋಗುತ್ತಿರುವುದಕ್ಕೆ ಈ ಸಿನಿಮಾದ ನಿರ್ಮಾಪಕರು ಕೂಡ ಸಮ್ಮತಿಸಿದ್ದಾರೆ ಎಂದು ವರದಿ ಆಗಿದೆ. ವಿಶೇಷವೆಂದರೆ, ಏ.17ರಂದು ಈ ಹಿಂದೆ ಸಲ್ಮಾನ್ ಖಾನ್ ಅಭಿನಯದ ಮಾತೃಭೂಮಿ ಚಿತ್ರ ಬಿಡುಗಡೆ ಆಗಬೇಕಿತ್ತು.

ಆದರೆ ಆ ಚಿತ್ರದ ಕೆಲಸಗಳು ವಿಳಂಬವಾಗಿ ಮುಂದೂಡಲ್ಪಟ್ಟಿದೆ. ಈಗ ಆ ದಿನಾಂಕವನ್ನು ಭೂತ್ ಬಂಗ್ಲಾಆಕ್ರಮಿಸಿಕೊಳ್ಳುತ್ತಿದೆ. ಸದ್ಯಕ್ಕಂತೂ ಎಲ್ಲಾ ಚಿತ್ರಮಂದಿರಗಳಲ್ಲಿ ‘ಧುರಂಧರ್ 2’ ಸಿನಿಮಾದ ಹವಾ ಜೋರಾಗಿದೆ. ಹಾಗಾಗಿ ಹೊಸ ಸಿನಿಮಾಗಳ ಬಿಡುಗಡೆಗೆ ಹಿಂದೇಟು ಹಾಕುವಂತಾಗಿದೆ. ಭೂತ್ ಬಂಗ್ಲ ಸಿನಿಮಾದ ಬಿಡುಗಡೆ ದಿನಾಂಕ ಮುಂದೂಡಲ್ಪಟ್ಟಿದ್ದರಿಂದ ಟ್ರೇಲರ್ ಬಿಡುಗಡೆಯಲ್ಲೂ ಬದಲಾವಣೆಯಾಗಿದೆ. ಈ ಮೊದಲು ಮಾರ್ಚ್ 30ರಂದು ಟ್ರೇಲರ್ ಬಿಡುಗಡೆ ಮಾಡಲು ಪ್ಲ್ಯಾನ್ ಮಾಡಲಾಗಿತ್ತು. ಅದರ ಬದಲು ಏಪ್ರಿಲ್ ಮೊದಲ ವಾರದಲ್ಲಿ ಟ್ರೇಲರ್ ಬಿಡುಗಡೆ ಮಾಡಲು ಚಿತ್ರತಂಡ ಆಲೋಚಿಸಿದೆ ಎನ್ನಲಾಗಿದೆ.

ಬಿಡುಗಡೆಗೆ ಸಜ್ಜಾಗಿದೆ ರಾಯರ ಕುರಿತ ಹೊಸ ಕನ್ನಡ ಸಿನಿಮಾ ‘ಅಮಲಾಮೃತ’

ರಾಘವೇಂದ್ರ ಸ್ವಾಮಿಗಳ ಕುರಿತಾದ ಭಕ್ತಿ ಪ್ರಧಾನ ಕಥೆ ಹೊಂದಿರುವ ‘ಅಮಲಾಮೃತ’ ಸಿನಿಮಾದ ಎಲ್ಲಾ ಕೆಲಸಗಳು ಮುಗಿದಿವೆ. ‘ಸಿರಿ ಪ್ರೊಡಕ್ಷನ್ಸ್’ ಮೂಲಕ ಈ ಸಿನಿಮಾ ಸಿದ್ಧವಾಗಿದೆ. ಮೈಸೂರು ಮೂಲದ ಗುರುರಾಜ ರಾವ್ ಎಂ.ಎಸ್. ಅವರು ಈ ಚಿತ್ರವನ್ನು ನಿರ್ಮಿಸಿದ್ದಾರೆ. ಅಲ್ಲದೇ ಅವರೇ ನಿರ್ದೇಶನ ಕೂಡ ಮಾಡಿದ್ದಾರೆ. ಇತ್ತೀಚೆಗೆ ಈ ಸಿನಿಮಾದ ವಿಶೇಷ ಪ್ರದರ್ಶನ ಏರ್ಪಡಿಸಲಾಗಿತ್ತು. ಯತಿಗಳು, ಸರ್ಕಾರಿ ಅಧಿಕಾರಿಗಳಿಗೆ ಈ ಸಿನಿಮಾ ವೀಕ್ಷಿಸಿದರು. ಸಿನಿಮಾ ನೋಡಿದ ಜನರ ಪ್ರತಿಕ್ರಿಯೆ ಕಂಡು ಚಿತ್ರತಂಡಕ್ಕೆ ಖುಷಿ ಆಗಿದೆ. ಕೆ.ಎಸ್. ಗೋವಿಂದರಾಮ ರಾವ್ ಅವರು ‘ಅಮಲಾಮೃತ’ ಸಿನಿಮಾದಲ್ಲಿ ಮುಖ್ಯ ಪಾತ್ರವನ್ನು ಮಾಡಿದ್ದಾರೆ. ಬಾಹ್ಲೀಕರಾಜ, ವ್ಯಾಸರಾಜ ಹಾಗೂ ರಾಘವೇಂದ್ರ ಸ್ವಾಮಿಗಳಾಗಿ ಅವರು ಕಾಣಿಸಿಕೊಳ್ಳಲಿದ್ದಾರೆ. ವೀರೇಂದ್ರ ಆಚಾರ್ಯ, ಸುಬ್ಬರಾವ್, ಚೈತ್ರಾ ಭಾರದ್ವಾಜ್, ಮಾಸ್ಟರ್ ಸುಚೇಂದ್ರ, ಯಶಸ್, ಸುಮನ್, ಶ್ರೀಕಾಂತ್, ದೀಪಕ್ ಮುಂತಾದವರು ನಟಿಸಿದ್ದಾರೆ.

‘ಅಮಲಾಮೃತ’ ಚಿತ್ರಕ್ಕಾಗಿ ಹರಿದಾಸರ ಸಾಹಿತ್ಯಕ್ಕೆ ವಿದೂಷಿ ರತ್ನಪ್ರಸಾದ್ ಅವರು ಸಂಗೀತ ಸಂಯೋಜಿಸಿದ್ದಾರೆ. ಪ್ರದೀಪ್ ಅವರು ಛಾಯಾಗ್ರಹಣ ಮಾಡಿದ್ದಾರೆ. ಸ್ವಾಮಿ ಅವರು ಸಂಕಲನದ ಜವಾಬ್ದಾರಿ ನಿಭಾಯಿಸಿದ್ದಾರೆ. ಈ ಮೊದಲು ಪುರಂದರದಾಸರು ಮತ್ತು ಶ್ರೀ ಪಾದರಾಜರ ಸಾಕ್ಷಚಿತ್ರ ಸಿದ್ಧಪಡಿಸಿದ್ದ ಅನುಭವದ ಮೇಲೆ ನಿರ್ದೇಶಕರು ಈ ಸಿನಿಮಾ ಮಾಡಿದ್ದಾರೆ. ಆ ಅನುಭವದಿಂದಲೇ ನಿರ್ದೇಶನ ಹಾಗೂ ಬಂಡವಾಳ ಹೂಡಿದ್ದೇನೆ. ಅಮಲಾ ಮತ್ತು ಅಮೃತ ಇವರೆಡು ಅ ಅಕ್ಷರದಿಂದ ಕೂಡಿದೆ. ನವ ಭಕ್ತಿಯ ಜ್ಞಾನಯಜ್ಞದ ಫಲಕ್ಕೆ ಅಮಲ ಅಂತಲೂ, ಸಾರಕ್ಕೆ ಅಮೃತ ಎಂದು ಕರೆಯುತ್ತಾರೆ.

ಭಕ್ತಿ ಅಂದರೆ ಸಾಕ್ಷಾತ್ ಭಗವಂತನು ವೈಷ್ಣವ ತತ್ವದಲ್ಲಿ ನೀಡಿದ ಆದೇಶ. ಭಕ್ತಿಯಿಂದ 64 ವಿದ್ಯೆಗಳನ್ನು ಕಲಿತವರು ಶ್ರೀ ರಾಘವೇಂದ್ರ ಸ್ವಾಮಿಗಳು. ಅವರು ಪೂರ್ವಪರದಲ್ಲಿ ಐದು ಅವತಾರಗಳಲ್ಲಿ ಕಾಣಿಸಿಕೊಂಡಿದ್ದರು. ಕರ್ಮಜದೇವತೆ, ಭಕ್ತ ಪ್ರಹ್ಲಾದ, ಬಾಹ್ಲೀಕರಾಜ, ವ್ಯಾಸರಾಜ ಕೊನೆಯದಾಗಿ ಗುರುಸಾರ್ವಭೌಮ ಎಂದು ಗುರುರಾಜ ರಾವ್ ಎಂ.ಎಸ್. ಹೇಳಿದರು. ಇವೆಲ್ಲವು ಹುಟ್ಟಿಕೊಂಡ ಬಗೆ ಹೇಗೆ ಎಂಬುದರ ವಿವರವನ್ನು ತೋರಿಸಲಾಗಿದೆ. ರಾಯರಲ್ಲಿ ಇರುವ ನಿಷ್ಠೆ ಬೇರೆ ಯಾರಲ್ಲೂ ಕಾಣುವುದಿಲ್ಲ. ಸ್ವಾಮಿಗಳ ತಪಸ್ಸಿನ ಫಲ ಎಲ್ಲಾ ಜನಾಂಗಕ್ಕೂ ಪುಣ್ಯದ ಫಲ ಸಿಕ್ಕಿದೆ. ಯಾವುದೇ ರೀತಿಯಲ್ಲಿ ಶ್ರದ್ಧೆಯಿಂದ ಬೃಂದಾವನಕ್ಕೆ ನಮಸ್ಕಾರ ಮಾಡಿದಾಗ ಮಾತ್ರ ಒಳ್ಳೆಯದಾಗುತ್ತದೆ ಎಂಬ ಸಂದೇಶ ಇರಲಿದೆ’ ಎಂದು ನಿರ್ದೇಶಕರು ಮಾಹಿತಿ ನೀಡಿದರು.

ಮತ್ತೆ ಬಾಲಿವುಡ್‌ಗೆ ನಯನತಾರಾ, ಈ ಬಾರಿ ಮತ್ತೊಬ್ಬ ಖಾನ್‌ಗೆ ಜೋಡಿ

ಮತ್ತೆ ಹಿಂದಿ ಸಿನಿಮಾನಲ್ಲಿ ನಟನೆ

ನಯನತಾರಾ ಅನ್ನು ಲೇಡಿ ಸೂಪರ್ ಸ್ಟಾರ್ ಎಂದೇ ಕರೆಯುವುದು. ಎರಡು ದಶಕಕ್ಕೂ ಹೆಚ್ಚು ಸಮಯದಿಂದಲೂ ಸಹ ನಯನತಾರಾ ಸಿನಿಮಾಗಳಲ್ಲಿ ನಟಿಸುತ್ತಿದ್ದಾರೆ. ಕಳೆದ ಎರಡು ದಶಕದಿಂದಲೂ ಸ್ಟಾರ್ ಪಟ್ಟವನ್ನು ಉಳಿಸಿಕೊಂಡು ಬರುತ್ತಿದ್ದಾರೆ. ಕನ್ನಡ ಸೇರಿದಂತೆ ದಕ್ಷಿಣದ ಎಲ್ಲಾ ಭಾಷೆಗಳಲ್ಲಿಯೂ ನಾಯಕಿಯಾಗಿ ನಟಿಸಿದ್ದಾರೆ ನಯನತಾರಾ. ಆದರೆ ಇತ್ತೀಚೆಗಷ್ಟೆ ಅಂದರೆ 2023 ರಲ್ಲಿ ಅವರು ಬಾಲಿವುಡ್‌ಗೆ ಮೊದಲ ಬಾರಿಗೆ ಕಾಲಿಟ್ಟಿದ್ದರು. ಅದೂ ಶಾರುಖ್ ಖಾನ್ ನಟನೆಯ ‘ಜವಾನ್’ ಸಿನಿಮಾ ಮೂಲಕ. ಇದೀಗ ಮತ್ತೆ ಹಿಂದಿ ಸಿನಿಮಾನಲ್ಲಿ ನಟಿಸಲಿದ್ದಾರೆ ನಯನತಾರಾ. ಈ ಬಾರಿ ಮತ್ತೊಬ್ಬ ಸ್ಟಾರ್ ಖಾನ್ ಜೊತೆಗೆ. ನಯನತಾರಾ ಅವರು ಸಲ್ಮಾನ್ ಖಾನ್‌ಜೊತೆಗೆ ನಟಿಸಲು ರೆಡಿಯಾಗಿದ್ದಾರೆ. ಸಲ್ಮಾನ್ ಖಾನ್ ನಟಿಸಲಿರುವ ಹೊಸ ಸಿನಿಮಾನಲ್ಲಿ ನಯನತಾರಾ ನಾಯಕಿಯಾಗಿ ನಟಿಸಲಿದ್ದಾರೆ. ವಿಶೇಷವೆಂದರೆ ಈ ಸಿನಿಮಾದ ನಿರ್ದೇಶಕ ಮತ್ತು ನಿರ್ಮಾಪಕ ಇಬ್ಬರೂ ಸಹ ದಕ್ಷಿಣದವರೇ ಆಗಿದ್ದಾರೆ. ಇದೇ ಕಾರಣಕ್ಕೆ ದಕ್ಷಿಣ ಭಾರತದ ಸ್ಟಾರ್ ನಟಿಯನ್ನು ಬಾಲಿವುಡ್ ಸ್ಟಾರ್ ನಟನ ಎದುರು ನಾಯಕಿಯಾಗಿ ಆಯ್ಕೆ ಮಾಡಿದ್ದಾರೆ. ದಕ್ಷಿಣದ ಖ್ಯಾತ ಸಿನಿಮಾ ನಿರ್ಮಾಪಕ ಮತ್ತು ವಿತರಕ ದಿಲ್ ರಾಜು ಅವರು ಸಲ್ಮಾನ್ ಖಾನ್ ನಟಿಸಲಿರುವ ಹೊಸ ಸಿನಿಮಾದ ನಿರ್ಮಾಣ ಮಾಡಲಿದ್ದಾರೆ.

ಸೌಂದರ್ಯಕ್ಕೆ ಕಡಿಮೆ ಇಲ್ಲ, ಆದ್ರೆ ಅವಕಾಶಗಳು ಮಾತ್ರ ಇಲ್ಲ



ಪಡ್ಡೆ ಹುಡುಗರ ಕಣ್ಣು

ಸೌಂದರ್ಯ, ಅಭಿನಯದಲ್ಲಿ ಈ ಹೀರೋಯಿನ್ ಗೆ ಕಡಿಮೆಯೇ ಇಲ್ಲ. ಮೊದಲ ಸಿನಿಮಾದಿಂದಲೇ ಪ್ರೇಕ್ಷಕರಿಗೆ ಹತ್ತಿರವಾಗಿದ್ದರು. ಆದರೆ ಸಿಗಬೇಕಾದ ಖ್ಯಾತ ಮಾತ್ರ ಸಿಕ್ಕಿಲ್ಲ. ಸಣ್ಣ ಸಣ್ಣ ಪ್ರಾಜೆಕ್ಟ್‌ಗಳನ್ನು ಮಾಡುತ್ತಾ ಇಂಡಸ್ಟ್ರಿಯಲ್ಲಿ ಸ್ಟಾರ್ ಡಮ್ ಪಡೆದುಕೊಳ್ಳಲು ಪ್ರಯತ್ನಿಸುತ್ತಿರುವ ಈ ಹೀರೋಯಿನ್ ಯಾರು ಅಂತ ಗುರುತು ಹಿಡಿದ್ರಾ..? ಸಾಮಾಜಿಕ ಜಾಲತಾಣದಲ್ಲಿ ಈ ನಟಿ ಮಾಡುತ್ತಿರುವ ಗಡಿಬಿಡಿ ಅಷ್ಟಿಷ್ಟು ಅಲ್ಲ. ಮಾಡ್ರೆನ್ ಡ್ರೆಸ್‌ಗಳೊಂದಿಗೆ ಗ್ಲಾಮರ್ ಶೋ ನೀಡುತ್ತಾ ಪಡ್ಡೆ ಹುಡುಗರ ಕಣ್ಣು ಸೆಳೆಯುತ್ತಿದ್ದಾರೆ. ಈಕೆಗೆ ಸಾಕಷ್ಟು ಫಾಲೋಯಿಂಗ್ ಕೂಡ ಇದ್ದು, ಸೋಶಿಯಲ್ ಮೀಡಿಯಾದಲ್ಲಿ ಸಖತ್ ಆಕ್ಟೀವ್ ಆಗಿದ್ದಾರೆ. ಟಾಲಿವುಡ್ ಯಂಗ್ ಹೀರೋ ಸಂತೋಷ್ ಶೋಭನ್ ಅವರೊಂದಿಗೆ ‘ಏಕ್ ಮಿನಿ ಕಥ’ ಸಿನಿಮಾದಲ್ಲಿ ನಟಿ ಕಾವ್ಯ ಥಾಪರ್ ನಟಿಸಿದ್ದರು.

ಈಕೆ ಹೆಸರು ಪ್ರೇಕ್ಷಕರಿಗೆ ಅಷ್ಟು ಪರಿಚಯವಿಲ್ಲ, ಆದರೆ ಮುಖ ಪರಿಚಯ ಹೆಚ್ಚು. ಮುಂಬೈ ನಲ್ಲಿ ಜನಿಸಿದ್ದ ಕಾವ್ಯ, ಕಾಲೇಜು ಜೀವನದಲ್ಲಿ ನಟನೆಯ ಬಗ್ಗೆ ಆಸಕ್ತಿ ಮೂಡಿ ಮಾಡೆಲಿಂಗ್ ರಂಗಕ್ಕೆ ಕಾಲಿಟ್ಟಿದ್ದರು. ಆ ಬಳಿಕ ಪತಂಜಲಿ, ಮೇಕ್ ಮೈ ಟ್ರಿಪ್, ಕೊಹಿನೂರ್ ನಂತಹ ಬ್ರ್ಯಾಂಡ್‌ಗಳಿಗೆ ಮಾಡೆಲ್ ಆಗ ಕೆಲಸ ಮಾಡಿದ್ದರು. 2013ರಲ್ಲಿ ತತ್ಕಾಲ್ ಎಂಬ ಹಿಂದಿ ಶಾರ್ಟ್ ಫಿಲ್ಮ್ ನಲ್ಲಿ ನಟಿಸಿ ಇಂಡಸ್ಟ್ರಿಗೆ ಎಂಟ್ರಿಯಾಗಿದ್ದರು. ಆ ಬಳಿಕ 2018ರಲ್ಲಿ ಈ ಮಾಯಾ ಪೆರೆವಿಟೋ ಎಂಬ ಸಿನಿಮಾದೊಂದಿಗೆ ಟಾಲಿವುಡ್ ನಲ್ಲಿ ಹೀರೋಯಿನ್ ಆಗಿ ಎಂಟ್ರಿಯಾಗಿದ್ದರು.

ಆ ಬಳಿಕ 2019ರಲ್ಲಿ ‘ಮಾರ್ಕೆಟ್‌ನಲ್ಲಿ ರಾಜಾ ಎಂಬಿಬಿಎಸ್’ ಸಿನಿಮಾದೊಂದಿಗೆ ತಮಿಳು ಸಿನಿಮಾ ರಂಗಕ್ಕೆ ಎಂಟ್ರಿಯಾಗಿದ್ದರು. ಆ ಬಳಿಕ 2021ರಲ್ಲಿ ಸಂತೋಷ್ ಶೋಭನ್ ನಟಿಸಿದ್ದ ಏಕ್ ಮಿನಿ ಕಥ ಸಿನಿಮಾದೊಂದಿಗೆ ಪ್ರೇಕ್ಷಕರ ಎದುರಿಗೆ ಆಗಮಿಸಿದ್ದರು. ಈ ಸಿನಿಮಾದಲ್ಲಿ ಗ್ಲಾಮರ್ ಶೋ ಮಾಡಿ ಗಮನ ಸೆಳೆದಿದ್ದರು.

ಕಣ್ಣೀರು ತರಿಸುವಂತಿದೆ ಎಸ್ ಆರ್ ಎಸ್ ತಂಡದ ಯುವ ಆಟಗಾರನ ಕಥೆ!

3 ವರ್ಷಕ್ಕೆ ತಾಯಿಯ ಸಾವು, ಅಪ್ಪನ 2ನೇ ಮದುವೆ ನಂತರ ಚಿಕ್ಕಪ್ಪನ ಆಶ್ರಯ

2026ರ ಇಂಡಿಯನ್ ಪ್ರೀಮಿಯರ್ ಲೀಗ್‌ನ ಮೊದಲ ಪಂದ್ಯದಲ್ಲಿ ರಾಯಲ್‌ಚಾಲೆಂಜರ್ಸ್ ಬೆಂಗಳೂರು ತಂಡ ಶುಭಾರಂಭ ಮಾಡಿದೆ. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಎಸ್‌ಆರ್‌ಹೆಚ್ ವಿರುದ್ಧದ ಪಂದ್ಯದಲ್ಲಿ ಆರ್‌ಸಿಬಿ (ಭರ್ಜರಿ ಪ್ರದರ್ಶನ ನೀಡಿದೆ.

ಆದರೆ, ಪಂದ್ಯವನ್ನು ಸೋತರೂ ಸಹ ಎಲ್ಲೆಡೆ ಅನಿಕೇತ್ ವರ್ಮಾ ಬಗ್ಗೆ ಚರ್ಚೆ ನಡೆಯುತ್ತಿದೆ. ಝಾನ್ಸಿಯ 24 ವರ್ಷದ ಅನಿಕೇತ್ ವರ್ಮಾ ರಾಯಲ್ ಚಾಲೆಂಜರ್ಸ್ ಬೆಂಗಳೂರು ವಿರುದ್ಧ 18 ಎಸೆತಗಳಲ್ಲಿ 43 ರನ್ ಗಳಿಸುವ ಮೂಲಕ ಸನ್‌ರೈಸರ್ಸ್ ಹೈದರಾಬಾದ್ ಪರ ಪಂದ್ಯದ ದಿಕ್ಕನ್ನು ಬದಲಾಯಿಸಿದರು.

200 ರನ್‌ಗಳ ಗಡಿ ದಾಟುವಲ್ಲಿ ಮಹತ್ವದ ಪಾತ್ರ ವಹಿಸಿದ್ದರು. ಹೊಸ ಭರವಸೆಯ ಆಟಗಾರ ಅನಿಕೇತ್ ವರ್ಮಾ ಅವರ ನಾಲ್ಕು ಬೃಹತ್ ಸಿಕ್ಸರ್‌ಗಳು ಅವರನ್ನು ರಾತ್ರೋರಾತ್ರಿ ಇಂಟರ್ನೆಟ್ ತಾರೆಯನ್ನಾಗಿ ಮಾಡಿದೆ. ಐಪಿಎಲ್‌ನ ಅದ್ಭುತ ಸಾಧನೆಗೆ ಅನಿಕೇತ್ ಅವರ ಪ್ರಯಾಣವು ಧೈರ್ಯ ಮತ್ತು ದೃಢಸಂಕಲ್ಪದ ಕಥೆಯಾಗಿದೆ. ಮೂರನೇ ವಯಸ್ಸಿನಲ್ಲಿ ತಾಯಿಯನ್ನು ಕಳೆದುಕೊಂಡ ನಂತರ, ಅನಿಕೇತ್ ಅವರನ್ನು ಅವರ ಚಿಕ್ಕಪ್ಪ ಬೆಳೆಸಿದರು. ಆರ್ಥಿಕ ನಿರ್ಬಂಧಗಳು ಮತ್ತು ಕ್ರೀಡಾ ಸೌಲಭ್ಯಗಳ ಕೊರತೆಯ ಹೊರತಾಗಿಯೂ, ಅನಿಕೇತ್ ಭಾರತೀಯ ಕ್ರಿಕೆಟ್‌ನ ಹೊಸ ಭರವಸೆಯ ಆಟಗಾರನಾಗಿ ಹೊರಹೊಮ್ಮಿದ್ದಾರೆ.

**ಆರ್